
ಗುರುವಾರ, ಫೆಬ್ರುವರಿ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 41 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾವಾಣಿ
ಕೇಂದ್ರ ಲೋಕಸೇವಾ ಆಯೋಗ ನಡೆಸುವಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮುನ್ನಡೆ ಸಾಧಿಸಲು ಸಿದ್ಧತೆ ಹೇಗಿರಬೇಕು? ಈ ಕುರಿತ ಮಾಹಿತಿ ಇಲ್ಲಿದೆ.

ಬೆಳೆ ಪರಿಹಾರ: ಹೆಬ್ಬುವರಿಯಾಗಿ 1,135.49 ಕೋಟಿ ಬಿಡುಗಡೆ 4

ಆಳ-ಅಗಲ
ಚೀನಾದಿಂದ ಆಮದು ಹೆಚ್ಚಳ

'ಕೇಸರಿ ಶಾಲು, ಪೇಟ ಹಂಚಿದ ಸಚಿವರ ಮಗ' 5

ಸೆನ್ಸೆಕ್ಸ್	ನಿಫ್ಟಿ	₹/$
58,465 ▲	17,463 ▲	74.84 ▼

ಮೂವರು ನ್ಯಾಯಮೂರ್ತಿಗಳ ಪೀಠ ● ಇಂದು ಮಧ್ಯಾಹ್ನವೇ ವಿಚಾರಣೆ ಆರಂಭ

ಪೂರ್ಣಪೀಠದ ಅಂಗಳಕ್ಕೆ ಹಿಜಾಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್‌ಗೆ (ಶಿರವಸ್ತ್ರ) ಸಂಬಂಧಿಸಿದಂತೆ ದಾಖಲಿಸಲಾಗಿರುವ ರಿಟ್ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದಲ್ಲಿ, ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ಮಹಿಳಾ ನ್ಯಾಯಮೂರ್ತಿ ಖಾಜಿ ಜೈಬುನ್ನಿಸಾ ಮೊಹಿಯುದ್ದೀನ್ ಅವರನ್ನು ಒಳಗೊಂಡ ಮೂವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೂರ್ಣ ಪೀಠ ಗುರುವಾರ ಮಧ್ಯಾಹ್ನ ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ.

ಈ ಕುರಿತಾದ ಏಳು ರಿಟ್ ಹಾಗೂ ಎರಡು ಮಧ್ಯಂತರ ಅರ್ಜಿಗಳನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರದಿಂದ ವಿಚಾರಣೆಗೆ ಕೈಗೆತ್ತಿಕೊಂಡಿತ್ತು. ಬುಧವಾರ ಮಧ್ಯಾಹ್ನ ಎರಡನೇ ದಿನದ ವಿಚಾರಣೆಗೆ ನಿಗದಿಪಡಿಸಲಾಗಿತ್ತು. ನಿಗದಿಯಂತೆ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್, 'ಈ ಪ್ರಕರಣವು ಸಾಂವಿಧಾನಿಕವಾದ ಸಾಕಷ್ಟು ಸೂಕ್ಷ್ಮ ಅಂಶಗಳನ್ನು ಒಳಗೊಂಡಿರುವ ಕಾರಣ ಇವುಗಳ ವಿಚಾರಣೆ ವಿಸ್ತೃತ ನ್ಯಾಯಪೀಠದಲ್ಲೇ ನಡೆಯುವುದು ಒಳಿತು. ಈ ಬಗ್ಗೆ ತಮ್ಮ ಅಭಿಪ್ರಾಯವೇನು' ಎಂದು ಅರ್ಜಿದಾರರ ಪರ ವಕೀಲರು ಮತ್ತು ಸರ್ಕಾರದ ಪರ ಅಡ್ವೊಕೇಟ್ ಜನರಲ್ ಅವರನ್ನು ಕೇಳಿದರು.

'ಇದರಲ್ಲಿ ಧಾರ್ಮಿಕ ಮತ್ತು ವೈಯಕ್ತಿಕ ಕಾನೂನುಗಳ ಸಂಗತಿಗಳೂ ಅಡಕವಾಗಿವೆ. ಹೀಗಾಗಿ, ಇಂಥ ವಿಷಯಗಳಲ್ಲಿ ಜಿಜ್ಞಾಸೆ ಉದ್ಭವಿಸಿದಾಗ ಸಾಮಾನ್ಯವಾಗಿ ವಿಸ್ತೃತ ಪೀಠಗಳನ್ನು ರಚಿಸಲಾಗಿದೆ. ಇವುಗಳ ಫಲಿತಾಂಶ ಹೆಚ್ಚು ಸ್ವೀಕಾರಾರ್ಹವಾಗಿರುತ್ತವೆ. ಆದಾಗ್ಯೂ, ವಿಸ್ತೃತ ಪೀಠವು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಎಂದೇನೂ ಭಾವಿಸಬೇಡಿ. ಈ ವಿಸ್ತೃತಪೀಠದಲ್ಲಿ ನಾನೂ ಭಾಗವಾಗಿ ಇರುವುದಾದರೆ ನಿಮ್ಮ ಅಭಿಪ್ರಾಯವೇನು' ಎಂದು ಪ್ರಶ್ನಿಸಿತು. ಇದಕ್ಕೆ ಅರ್ಜಿದಾರರ ಪರ ಹಿರಿಯ ವಕೀಲ ಸಜನ್ ಪೂವಯ್ಯ ಮತ್ತು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಸಂಜಯ ಹೆಗ್ಡೆ, 'ವಿಸ್ತೃತ ಪೀಠದ ನಿರ್ಧಾರ ನ್ಯಾಯಾಲಯದ ಕೈಯಲ್ಲಿದೆ' ಎಂದು ಹೇಳಿದರಾದರೂ ಅಂತಿಮವಾಗಿ ವಿಸ್ತೃತ ಪೀಠಕ್ಕೆ ಒಪ್ಪಿಸುವ ನ್ಯಾಯಪೀಠದ ನಿರ್ಧಾರಕ್ಕೆ ತಲೆಬಾಗಿದರು.

ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, 'ತಾವೇ ವಿಚಾರಣೆ ನಡೆಸಿ. ಈ ನ್ಯಾಯಪೀಠದ ಬಗ್ಗೆ ನಮಗೆ ಸಂಪೂರ್ಣ ವಿಶ್ವಾಸವಿದೆ' ಎಂದರು. ಕಡೆಗೆ ಸಮ್ಮತಿ ಸೂಚಿಸಿದರು.

> ಸರ್ಕಾರ,ಸಿಡಿಸಿಗಳು ನಿರ್ಧಾರ ಕೈಗೊಳ್ಳುವಂತೆ ಆದೇಶಿಸಿದೆ. ಆದರೆ, ಸರ್ಕಾರವೇ ವಸ್ತ್ರಸಂಹಿತೆ ಹೇರಿದೆ ಎಂದು ಅರ್ಜಿದಾರರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ
> **ಪ್ರಭುಲಿಂಗ ಕೆ.ನಾವದಗಿ**
> ಅಡ್ವೊಕೇಟ್ ಜನರಲ್

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ


ಋತುರಾಜ್ ಅವಸ್ಥಿ


ಕೃಷ್ಣ ಎಸ್. ದೀಕ್ಷಿತ್


ಖಾಜಿ ಜೈಬುನ್ನೀಸಾ


ಹಿಜಾಬ್ ಧರಿಸಲು ಅವಕಾಶ ನೀಡುವಂತೆ ಕೋರಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ವಿವಿಧ ಕಾಲೇಜುಗಳ ವಿದ್ಯಾರ್ಥಿನಿಯರು ಬುಧವಾರ ಜಮಾಯಿಸಿದ್ದರು

ಮಧ್ಯಂತರ ಆದೇಶಕ್ಕೆ ನಕಾರ

'ಹಿಜಾಬ್ ವಿಷಯವಾಗಿ ರಾಜ್ಯದಾದ್ಯಂತ ವಿದ್ಯಾರ್ಥಿಗಳು ಬೀದಿಯಲ್ಲಿ ನಿಂತಿದ್ದಾರೆ. ಶಾಲೆ, ಕಾಲೇಜುಗಳ ಪಾಠ-ಪ್ರವಚನ ಸ್ಥಗಿತಗೊಂಡಿದೆ. ಇನ್ನೆರಡು ತಿಂಗಳಿಗೆ ಶೈಕ್ಷಣಿಕ ವರ್ಷ ಮುಕ್ತಾಯವಾಗಲಿದೆ. ಈ ಹಂತದಲ್ಲಿ ಅವರು ತೊಂದರೆಗೆ ಒಳಗಾದರೆ ಅವರ ಭವಿಷ್ಯಕ್ಕೆ ಧಕ್ಕೆಯಾಗುತ್ತದೆ. ಆದ್ದರಿಂದ, ಇದೇ ನ್ಯಾಯಪೀಠ ಮಧ್ಯಂತರ ಪರಿಹಾರ ನೀಡಿ ಆದೇಶಿಸಬೇಕು' ಎಂದು ಅರ್ಜಿದಾರರ ಪರ ವಕೀಲ ಮೊಹಮದ್ ತಾಹಿರ್ ಕೋರಿದರು. ಈ ಮನವಿಗೆ ಯಾವುದೇ ಆದೇಶ ನೀಡಲು ನಿರಾಕರಿಸಿದ ನ್ಯಾಯಪೀಠ, 'ಈ ಅರ್ಜಿಗಳು ಸಾಂವಿಧಾನಿಕ ವಿಸ್ತೃತ ಪೀಠದಲ್ಲೇ ವಿಚಾರಣೆಗೆ ನಡೆಯುವುದು ಒಳಿತು. ಹೀಗಾಗಿ ಈ ನಿಟ್ಟಿನಲ್ಲಿ ಮುಖ್ಯ ನ್ಯಾಯಮೂರ್ತಿಗಳು ತಮ್ಮ ವಿವೇಚನೆಯ ಅನುಸಾರ ಕ್ರಮ ಕೈಗೊಳ್ಳಲು ಕೋರುತ್ತಿದ್ದೇನೆ ಮತ್ತು ಇವತ್ತೇ ಈ ಅರ್ಜಿಗಳ ಎಲ್ಲ ದಸ್ತಾವೇಜನ್ನು ಮುಖ್ಯ ನ್ಯಾಯಮೂರ್ತಿಗಳ ಟೇಬಲ್ ಮುಂದೆ ಪ್ರಸ್ತುತಪಡಿಸಲು ನ್ಯಾಯಾಂಗ ವಿಭಾಗದ ರಿಜಿಸ್ಟ್ರಾರ್ ಕ್ರಮ ಕೈಗೊಳ್ಳಬೇಕು' ಎಂದು ಆದೇಶಿಸಿ ವಿಚಾರಣೆಯನ್ನು ಬರ್ಖಾಸ್ತುಗೊಳಿಸಿತು.

ಕಲ್ಲು ತೂರಾಟ ಪ್ರಕರಣ: 24 ಜನರ ಬಂಧನ

ಬೆಂಗಳೂರು: ಹಿಜಾಬ್-ಕೇಸರಿ ಶಾಲು ಪರ-ವಿರೋಧದ ಪ್ರತಿಭಟನೆ ವೇಳೆ ನಡೆದ ಕಲ್ಲು ತೂರಾಟದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಗಲಕೋಟೆಯ ರಬಕವಿ- ಬನಹಟ್ಟಿಯಲ್ಲಿ 15, ಶಿವಮೊಗ್ಗದಲ್ಲಿ 9 ಮಂದಿಯನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬನಹಟ್ಟಿಯಲ್ಲಿ ಪ್ರೌಢಶಾಲೆಯ ಅತಿಥಿ ಶಿಕ್ಷಕ ಮಂಜುನಾಥ ನಾಯಕ ಅವರ ಮೇಲೆ ಹಲ್ಲೆ ಮಾಡಿದ್ದ ಪ್ರತ್ಯೇಕ ಪ್ರಕರಣದಲ್ಲಿ ಐವರ ಪೈಕಿ ಇಬ್ಬರನ್ನು ಬಂಧಿಸಲಾಗಿದೆ.

ದಾಳಿಯ ಯತ್ನವನ್ನು ಧೈರ್ಯದಿಂದ ಎದುರಿಸಿದೆ: ಮುಸ್ಕಾನ್



ಮಂಡ್ಯ: 'ಕೇಸರಿ ಶಾಲು ಧರಿಸಿದ್ದ ನೂರಾರು ವಿದ್ಯಾರ್ಥಿಗಳು ನನ್ನ ಮೇಲೆ ದಾಳಿಗೆ ಯತ್ನಿಸಿದರು. ಅಲ್ಲಾಹು ಅಕ್ಬರ್ ಘೋಷಣೆ ಕೂಗಿ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿದೆ' ಎಂದು ನಗರದ ಪಿಇಎಸ್ ಪದವಿ ಕಾಲೇಜಿನ 2ನೇ ಬಿ.ಕಾಂ ವಿದ್ಯಾರ್ಥಿನಿ ಬೀಬಿ ಮುಸ್ಕಾನ್ ಖಾನ್ ಬುಧವಾರ ಹೇಳಿದರು.

ಮಂಗಳವಾರ ಕೇಸರಿ ಶಾಲು ಧರಿಸಿ ಜೈಶ್ರೀರಾಮ್ ಕೂಗುತ್ತಿದ್ದ ವಿದ್ಯಾರ್ಥಿಗಳ ಎದುರು ಅವರು ಧೈರ್ಯ ಪ್ರದರ್ಶಿಸಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ದೇಶದಾದ್ಯಂತ ವೈರಲ್ ಆಗಿತ್ತು.

'ನನಗಿಂತಲೂ ಮುಂಚೆಯೇ ಹಿಜಾಬ್, ಬುರ್ಖಾ ಧರಿಸಿ ಬಂದಿದ್ದ ನಾಲ್ಕೈದು ವಿದ್ಯಾರ್ಥಿನಿಯರ ಮೇಲೂ ಕೇಸರಿ ಶಾಲು ಧರಿಸಿದ್ದವರು ದಾಳಿಗೆ ಮುಂದಾಗಿದ್ದರು. ಅವರು ಅಳುತ್ತಾ ತರಗತಿಗೆ ತೆರಳಿದ್ದರು. ಆದರೆ, ನಾನು ಒಂಟಿಯಾಗಿ ಪ್ರತಿರೋಧಿಸಿದೆ. ತಕ್ಷಣ ನನ್ನ ಬಾಯಿಯಿಂದ ದೇವರ ಶಬ್ದಗಳು ಬಂದವು' ಎಂದರು.

5ನೇ ಪುಟ ನೋಡಿ

50 ವರ್ಷಗಳ ಅವಧಿಗೆ ಗುತ್ತಿಗೆ ● ಸಂಪೂರ್ಣ ಟೋಲ್ ರಸ್ತೆ

ಪಿಆರ್‌ಆರ್: ಜಾಗತಿಕ ಟೆಂಡರ್ ಕರೆಯಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವಲಯದಲ್ಲಿ 71 ಕಿ.ಮೀ. ಉದ್ದದ ಪೆರಿಫೆರಲ್ ವರ್ತುಲ ರಸ್ತೆಯನ್ನು (ಪಿಆರ್‌ಆರ್) ವಿನ್ಯಾಸ- ನಿರ್ಮಾಣ- ಹೂಡಿಕೆ- ಕಾರ್ಯಾಚರಣೆ ಮತ್ತು ಹಸ್ತಾಂತರ ಮಾದರಿಯಲ್ಲಿ ಸರ್ಕಾರಿ- ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲು ಜಾಗತಿಕ ಟೆಂಡರ್ ಆಹ್ವಾನಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆ (ಜೈಕಾ) ಮೂಲಕ ಸಾಲ ಪಡೆದು ಯೋಜನೆಯನ್ನು ಅನುಷ್ಠಾನಕ್ಕೆ ತರಲು ಈ ಹಿಂದೆ ಪ್ರಕ್ರಿಯೆ ಆರಂಭಿಸಲಾಗಿತ್ತು. ಅದನ್ನು ಕೈಬಿಟ್ಟು, ಸಂಪೂರ್ಣ ಖಾಸಗಿ ಸಹಭಾಗಿತ್ವದಲ್ಲಿ ಪಿಆರ್‌ಆರ್ ನಿರ್ಮಿಸುವ ಪ್ರಸ್ತಾವಕ್ಕೆ ಸಂಪುಟ ಒಪ್ಪಿಗೆ ಸೂಚಿಸಿದೆ. 73.50 ಕಿ.ಮೀ. ಉದ್ದದ ರಸ್ತೆ ನಿರ್ಮಿಸುವ ಪ್ರಸ್ತಾವವಿತ್ತು. ಈಗ ಅದನ್ನು 71 ಕಿ.ಮೀ.ಗೆ ಕುಗ್ಗಿಸಲಾಗಿದೆ.

ತುಮಕೂರು ರಸ್ತೆಯಿಂದ ಹೊಸೂರು ರಸ್ತೆ ಸಂಪರ್ಕಕ್ಕೆ ಪಿಆರ್‌ಆರ್ ನಿರ್ಮಿಸಲಾಗುತ್ತಿದೆ. ಹೆಸರಘಟ್ಟ ರಸ್ತೆ- ದೊಡ್ಡಬಳ್ಳಾಪುರ ರಸ್ತೆ- ಬಳ್ಳಾರಿ ರಸ್ತೆ- ಹೆಣ್ಣೂರು ರಸ್ತೆ- ಹಳೆ ಮದ್ರಾಸ್ ರಸ್ತೆ- ಹೊಸಕೋಟೆ ರಸ್ತೆ- ಸರ್ಜಾಪುರ ರಸ್ತೆ ಮಾರ್ಗವಾಗಿ ಹೊಸೂರು ರಸ್ತೆಯನ್ನು ತಲುಪಲು 100 ಮೀಟರ್ ಅಗಲದ ರಸ್ತೆ ನಿರ್ಮಿಸುವ ಯೋಜನೆಯಿದೆ.

ಈ ಯೋಜನೆಗೆ ಅಂದಾಜು ₹ 21,000 ಕೋಟಿ ವೆಚ್ಚವಾಗಲಿದೆ. 2,567.22 ಎಕರೆ ವಿಸ್ತೀರ್ಣದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಿದೆ. ಭೂಸ್ವಾಧೀನ ಪ್ರಕ್ರಿಯೆಗೆ ₹ 5,754.45 ಕೋಟಿ ಅಗತ್ಯವಿದೆ. ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದ ವ್ಯಾಜ್ಯಗಳು, ಪರಿಹಾರದ ಮೊತ್ತ ಹೆಚ್ಚಳಕ್ಕೆ ಜಮೀನು ಮಾಲೀಕರ ಬೇಡಿಕೆ ಮತ್ತಿತರ ಕಾರಣಗಳಿಂದ ದಶಕದಿಂದಲೂ ಈ ಯೋಜನೆ ಕುಂಟುತ್ತಾ ಸಾಗಿದೆ.

50 ವರ್ಷಗಳ ಅವಧಿಗೆ ಗುತ್ತಿಗೆ: ಸಭೆಯ ಬಳಿಕ ವಿವರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಪಿಪಿಪಿ ಅಡಿಯಲ್ಲಿ 50 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗುವುದು. ಭೂಸ್ವಾಧೀನ, ಪರಿಹಾರ ವಿತರಣೆ, ರಸ್ತೆ ನಿರ್ಮಾಣ, ನಿರ್ವಹಣೆ ಮತ್ತು ಟೋಲ್ ಸಂಗ್ರಹವನ್ನು ಗುತ್ತಿಗೆದಾರರೇ ನಿರ್ವಹಿಸಬೇಕು' ಎಂದು ತಿಳಿಸಿದರು.

ಯೋಜನೆಗೆ ಅಗತ್ಯವಿರುವ ಸರ್ಕಾರಿ ಜಮೀನುಗಳನ್ನು ಸರ್ಕಾರದ ವತಿಯಿಂದ ಒದಗಿಸಲಾಗುವುದು. ಗುತ್ತಿಗೆದಾರರು ಬಿಡಿಎ ಜತೆಗೆ ವರಮಾನ ಹಂಚಿಕೆಯ ಆಧಾರದಲ್ಲಿ ಯೋಜನೆಯನ್ನು ನಿರ್ವಹಿಸಬೇಕು. 2013ರ ಭೂಸ್ವಾಧೀನ ಮತ್ತು ಪರಿಹಾರ ಕಾಯ್ದೆಯ ಅನುಸಾರ ಜಮೀನು ಮಾಲೀಕರಿಗೆ ಪರಿಹಾರ ನೀಡಲು ನಿರ್ಧರಿಸಲಾಗಿದೆ ಎಂದರು.

ಹೊರವರ್ತುಲ ರಸ್ತೆಯಲ್ಲಿನ ಸಂಚಾರ ದಟ್ಟಣೆ ತಗ್ಗಿಸುವುದು ಮತ್ತು ರಾಜಧಾನಿ ಮತ್ತು ಸಮೀಪದ ನಗರಗಳ ನಡುವೆ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಪಿಆರ್‌ಆರ್ ನಿರ್ಮಿಸಲಾಗುತ್ತಿದೆ ಎಂದು ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ.

ಕೆಪಿಎಸ್‌ಸಿ: ಆಯ್ಕೆಪಟ್ಟಿ ಊರ್ಜಿತಕ್ಕೆ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) 2011ರಲ್ಲಿ ನಡೆಸಿದ್ದ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ 362 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದಕ್ಕೆ ಪೂರಕವಾಗಿ ರೂಪಿಸಿರುವ 'ಕರ್ನಾಟಕ ನಾಗರಿಕ ಸೇವೆಗಳು (ಆಯ್ಕೆಯ ಊರ್ಜಿತಗೊಳಿಸುವಿಕೆ ಮತ್ತು 2011ರ ಗೆಜೆಟೆಡ್ ಪ್ರೊಬೇಷನರಿಗಳ ನೇಮಕಾತಿ) ಮಸೂದೆ-2022'ಕ್ಕೆ ಸಂಪುಟ ಸಭೆ ಬುಧವಾರ ಒಪ್ಪಿಗೆ ನೀಡಿದೆ.

ಸಭೆಯ ಬಳಿಕ ಸುದ್ದಿಗೋಷ್ಠಿ ನಡೆಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಮಸೂದೆಯನ್ನು ಇದೇ 14ರಿಂದ ನಡೆಯುವ ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಲಾಗುವುದು' ಎಂದರು.

2011ರ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಆಯ್ಕೆಪಟ್ಟಿಯನ್ನು ತಿರಸ್ಕರಿಸುವ ಸಂದರ್ಭದಲ್ಲಿ ಆಗಿರುವ ಲೋಪಗಳನ್ನು ಆಧರಿಸಿ, ಅಭ್ಯರ್ಥಿಗಳಿಗೆ ರಕ್ಷಣೆ ನೀಡಲು ಸರ್ಕಾರ ನಿರ್ಧರಿಸಿದೆ. 2011ರಲ್ಲಿ ಕೆಪಿಎಸ್‌ಸಿ ನಡೆಸಿದ್ದ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದಕ್ಕೆ ಸೀಮಿತವಾಗಿ ಮಸೂದೆ ರೂಪಿಸಲಾಗಿದೆ. ನೇಮಕಾತಿಯಾದವರಿಗೆ ಸೇವಾ ಜ್ಯೇಷ್ಠತೆ ನೀಡುವುದು ಸೇರಿದಂತೆ ಇತರ ವಿಷಯಗಳನ್ನು ನಿಯಮಗಳಲ್ಲಿ ಸ್ಪಷ್ಟಪಡಿಸಲಾಗುವುದು ಎಂದು ಹೇಳಿದರು.

'ಆಯ್ಕೆಪಟ್ಟಿಯನ್ನು ಹೈಕೋರ್ಟ್ ರದ್ದುಪಡಿಸಿದ್ದು, ಸುಪ್ರೀಂಕೋರ್ಟ್ ಕೂಡ ಈ ತೀರ್ಪನ್ನು ಮಾನ್ಯ ಮಾಡಿರುವಾಗ ನೇಮಕಾತಿ ಆದೇಶ ನೀಡುವುದು ಸರಿಯೆ' ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ನ್ಯಾಯಾಲಯ ಎತ್ತಿರುವ ಆಕ್ಷೇಪಗಳಿಗೆ ನೀಡುವ ಸಮಜಾಯಿಷಿಗಳನ್ನೂ ಮಸೂದೆಯಲ್ಲೇ ಅಡಕಗೊಳಿಸಲಾಗುವುದು' ಎಂದು ಹೇಳಿದರು.

ಸಿಬಿಎಸ್‌ಇ 10-12ನೇ ತರಗತಿ: ಏ.26ರಿಂದ ಪರೀಕ್ಷೆ


ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10 ಹಾಗೂ 12ನೇ ತರಗತಿಗಳ ಎರಡನೇ ಅವಧಿಯ ಬೋರ್ಡ್ ಪರೀಕ್ಷೆಗಳನ್ನು ಏಪ್ರಿಲ್ 26ರಿಂದ ಆಫ್‌ಲೈನ್ ವಿಧಾನದಲ್ಲಿ (ಭೌತಿಕ) ನಡೆಸಲಾಗುವುದು ಎಂದು ಮಂಡಳಿಯ ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ಬುಧವಾರ ತಿಳಿಸಿದ್ದಾರೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಪ್ರಸಿದ್ಧ ಕೃಷ್ಣ ಮೋಡಿ: ಭಾರತಕ್ಕೆ ಸರಣಿ ಕೈವಶ

ಅಹಮದಾಬಾದ್(ಪಿಟಿಐ): ಕರ್ನಾಟಕದ ಪ್ರಸಿದ್ಧ ಕೃಷ್ಣ ಅವರ ಅಮೋಘ ಬೌಲಿಂಗ್ ಬಲದಿಂದ ಭಾರತ ಕ್ರಿಕೆಟ್ ತಂಡವು ಬುಧವಾರ ಇಲ್ಲಿ ನಡೆದ ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಏಕದಿನ ಪಂದ್ಯದಲ್ಲಿ ಜಯಿಸಿತು.


ನಿಕೋಲಸ್ ವಿಕೆಟ್ ಪಡೆದ ಖುಷಿಯಲ್ಲಿ ಪ್ರಸಿದ್ಧ ಕೃಷ್ಣ –ಎಎಫ್‌ಪಿ ಚಿತ್ರ

ಪ್ರಸಿದ್ಧ ಕೃಷ್ಣ

9 ಓವರ್	3 ಮೇಡನ್
12 ರನ್	4 ವಿಕೆಟ್

ಭಾರತ
9ಕ್ಕೆ 237 (50 ಓವರ್‌ಗಳಲ್ಲಿ)

ವೆಸ್ಟ್ ಇಂಡೀಸ್
193 (46 ಓವರ್‌ಗಳಲ್ಲಿ)

ಫಲಿತಾಂಶ
ಭಾರತ ತಂಡಕ್ಕೆ 44 ರನ್‌ಗಳ ಜಯ. ಸರಣಿಯಲ್ಲಿ 2-0ಯಿಂದ ಮುನ್ನಡೆ

ಉತ್ತರಪ್ರದೇಶ: ಇಂದು ಮೊದಲ ಹಂತದ ಮತದಾನ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಮೊದಲ ಹಂತದ ಮತದಾನವು ಗುರುವಾರ ನಡೆಯಲಿದೆ. ರಾಜ್ಯದ ಪಶ್ಚಿಮ ಭಾಗದ 11 ಜಿಲ್ಲೆಗಳ ಒಟ್ಟು 58 ಕ್ಷೇತ್ರಗಳಲ್ಲಿ ಮತದಾನವಿದೆ.

ಮತದಾನವು ಗುರುವಾರ ಬೆಳಿಗ್ಗೆ 7ಗಂಟೆಯಿಂದ ಸಂಜೆ 6ರವರೆಗೆ ನಡೆಯಲಿದೆ. ಚುನಾವಣೆ ನಡೆಯಲಿರುವ ಕ್ಷೇತ್ರಗಳಲ್ಲಿ ಬಿಗಿಭದ್ರತೆ ಒದಗಿಸಲಾಗಿದೆ.

ಬಿಜೆಪಿ, ಆರ್‌ಎಲ್‌ಡಿ-ಎಸ್‌ಪಿ, ಕಾಂಗ್ರೆಸ್ ಮತ್ತು ಬಿಎಸ್‌ಪಿ ಪಕ್ಷಗಳ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಸ್ವತಂತ್ರ ಅಭ್ಯರ್ಥಿಗಳೂ ಸೇರಿ ಒಟ್ಟು 623 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಈ ಕ್ಷೇತ್ರಗಳಲ್ಲಿ 2.27 ಕೋಟಿ ಮತದಾರರು ಇದ್ದಾರೆ.

ಕೇರಳ: ಪಾಲಕ್ಕಾಡ್ ಜಿಲ್ಲೆಯ ಚೇರಾಡ್ ಪರ್ವತದಲ್ಲಿ ಸೇನಾಪಡೆಗಳಿಂದ ಕಾರ್ಯಾಚರಣೆ

ಬೆಟ್ಟದ ಸೀಳಿನಲ್ಲಿ ಸಿಲುಕಿದ್ದ ಚಾರಣಿಗನ ರಕ್ಷಣೆ

ಪಾಲಕ್ಕಾಡ್ (ಪಿಟಿಐ): ಕೇರಳ ರಾಜ್ಯದ ಪಾಲಕ್ಕಾಡ್ ಜಿಲ್ಲೆಯ ಬೆಟ್ಟವೊಂದರ ಸೀಳಿನಲ್ಲಿ ಸಿಲುಕಿದ್ದ ಚಾರಣಿಗನನ್ನು ಸೇನಾಪಡೆಗಳು ನಡೆಸಿದ ಸಾಹಸಮಯ ಕಾರ್ಯಾಚರಣೆಯಲ್ಲಿ ಬುಧವಾರ ರಕ್ಷಿಸಲಾಗಿದೆ.

ಬಾಬು ಆರ್. (23) ರಕ್ಷಿಸಲಾದ ಯುವಕ. ನಿಶ್ಶಕ್ತರಾಗಿದ್ದ ಅವರನ್ನು ಏರ್‌ಲಿಫ್ಟ್ ಮಾಡಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ತಮ್ಮ ಮೂವರು ಸ್ನೇಹಿತರೊಂದಿಗೆ ಸೋಮವಾರ ಮಧ್ಯಾಹ್ನ ಬಾಬು ಅವರು ಜಿಲ್ಲೆಯ ಮಲಂಪುಳ ಎಂಬಲ್ಲಿನ ಚೇರಾಡ್ ಬೆಟ್ಟಕ್ಕೆ ಚಾರಣಕ್ಕಾಗಿ ತೆರಳಿದ್ದ ವೇಳೆ ಈ ಅವಘಡ ಸಂಭವಿಸಿದೆ. ಯುವಕರ ತಂಡ 1,000 ಮೀಟರ್ ಎತ್ತರಕ್ಕೆ ಏರಿತ್ತು. ಆಗ, ಜಾರಿ ಬಿದ್ದ ಬಾಬು 400 ಮೀಟರ್ ಕೆಳಗೆ ಇರುವ ಸೀಳಿನಲ್ಲಿ ಸಿಲುಕಿದ್ದರು.

ಬಿಸಿಲಿನ ಝಳ ಹಾಗೂ ವಿಪರೀತ ಚಳಿಯಂತಹ ಹವಾಮಾನ ಒಂದೆಡೆಯಾದರೆ, ಆಹಾರ-ನೀರು ಇಲ್ಲದೇ ಎರಡು ದಿನಗಳು ಬಾಬು ಅವರು ಬೆಟ್ಟದ ಸೀಳಿನಲ್ಲಿ ಕಳೆದಿದ್ದರು. ರಕ್ಷಣೆಗಾಗಿ ಎದುರು ನೋಡುತ್ತಿದ್ದ ಬಾಬು ಅವರಿಗೆ ವನ್ಯಮೃಗಗಳಿಂದಲೂ ಅಪಾಯ ಇತ್ತು ಎಂದು ಮೂಲಗಳು ಹೇಳಿವೆ.

ಬೆಂಗಳೂರಿನಲ್ಲಿರುವ ಪ್ಯಾರಾ ರೆಜಿಮೆಂಟಲ್ ಸೆಂಟರ್ ಹಾಗೂ ಎನ್‌ಡಿಆರ್‌ಎಫ್‌ನ ತಲಾ ಒಂದು ತಂಡ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದವು. ಲೆಫ್ಟಿನೆಂಟ್ ಜನರಲ್ ಅರುಣ್ ಅವರು ರಕ್ಷಣಾ ಕಾರ್ಯದ ನೇತೃತ್ವ ವಹಿಸಿದ್ದರು. ಮದ್ರಾಸ್ ರೆಜಿಮೆಂಟ್, ಇಂಡಿಯನ್ ಕೋಸ್ಟ್ ಗಾರ್ಡ್ ಸಹ ಈ ಕಾರ್ಯಾಚರಣೆಯ ಭಾಗವಾಗಿದ್ದವು.

'ಒಂದು ತಂಡ ಬೆಟ್ಟದ ತುದಿ ತಲುಪಿ, ಬಾಬು ಅವರೊಂದಿಗೆ ಸಂಪರ್ಕ ಸಾಧಿಸಿ, ರಕ್ಷಣಾ ಕಾರ್ಯ ಕುರಿತು ಮಾಹಿತಿ ನೀಡಿತು. ಆತನ ಬಹಳ ನಿಶ್ಶಕ್ತನಾಗಿರುವುದು ಕಂಡು ಬಂದ ತಕ್ಷಣ, ಆತನಿಗೆ ನೀರು ಮತ್ತು ಆಹಾರ ಒದಗಿಸಲು ಕ್ರಮ ಕೈಗೊಳ್ಳಲಾಯಿತು' ಎಂದು ಸೇನಾಪಡೆ ಮೂಲಗಳು ತಿಳಿಸಿವೆ.

'ಅತ್ಯಂತ ಅಪಾಯಕಾರಿಯಾದ, ಬೆಟ್ಟದ ಸೀಳಿನಲ್ಲಿ ಸಿಲುಕಿದ್ದ ಬಾಬು ಎಂಬ ಚಾರಣಿಗನನ್ನು ಸದರ್ನ್ ಕಮಾಂಡ್ ಯೋಧರು ಧೀರೋದಾತ್ತ ಕಾರ್ಯಾಚರಣೆ ಮೂಲಕ ರಕ್ಷಿಸಿದ್ದಾರೆ' ಎಂದು ಸೇನೆಯ ಸದರ್ನ್ ಕಮಾಂಡ್ ಟ್ವೀಟ್ ಮಾಡಿದೆ. ಕಾರ್ಯಾಚರಣೆ ವಿಡಿಯೊವನ್ನು ಸೇನೆ ಬಿಡುಗಡೆ ಮಾಡಿದ್ದು, ಪ್ರಶಂಸೆ ವ್ಯಕ್ತವಾಗಿದೆ. ಬಾಬು ಅವರು ತಮ್ಮನ್ನು ರಕ್ಷಿಸಿದ ಯೋಧರ ನಡುವೆ ಕುಳಿತಿರುವುದು, ಅವರಲ್ಲಿ ಕೆಲವರಿಗೆ ಮುತ್ತಿಕ್ಕಿ, 'ಭಾರತೀಯ ಸೇನೆಗೆ ಧನ್ಯವಾದಗಳು' ಎಂದು ಹೇಳುತ್ತಿರುವ ದೃಶ್ಯಗಳು ವಿಡಿಯೊದಲ್ಲಿವೆ.


ಚಾರಣಿಗ ಬಾಬು ತಮ್ಮನ್ನು ರಕ್ಷಿಸಿದ ಯೋಧರೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ


ಬೆಟ್ಟದ ಸೀಳಿನಲ್ಲಿ ಸಿಲುಕಿದ್ದ ಬಾಬು

ಗುರುವಾರದ ಉಷ್ಣಾಂಶ 30° ಗರಿಷ್ಠ 17° ಕನಿಷ್ಠ

ಹವಾಮಾನ ಮುನ್ಸೂಚನೆ: ನಗರದಲ್ಲಿ ಬೆಳಿಗ್ಗೆ ಮೋಡ ಕವಿದ ವಾತಾವರಣ. ನಂತರ ಶುಭ್ರ ಆಕಾಶ ಇರಲಿದೆ

ಹವಾಮಾನ: ಶುಕ್ರವಾರ 31° 17° | ಶನಿವಾರ 30° 18° | ಭಾನುವಾರ 31° 18°

ಸೂರ್ಯೋದಯ: 6:44 ಸೂರ್ಯಾಸ್ತ : 6:23 ಚಂದ್ರೋದಯ: ಮ. 12:28 ಚಂದ್ರಾಸ್ತ: ರಾ. 12:41

ಬುಧವಾರದ ಹವಾಮಾನ : ಗರಿಷ್ಠ 30° ಕನಿಷ್ಠ 16°

ಕಾಮಗಾರಿಗಳ ನಿರ್ವಹಣೆ ಹೊಣೆ: ಯೋಜನೆ ವಿಭಾಗದಿಂದ ರಸ್ತೆ ಮೂಲಸೌಕರ್ಯ ವಿಭಾಗಕ್ಕೆ ವರ್ಗಾವಣೆ

ವೈಟ್ ಟಾಪಿಂಗ್: ನಿಯಮ ಮೀರಿ ಬಿಲ್ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್ ಟಾಪಿಂಗ್ ಮೊದಲ ಹಂತದ ಕಾಮಗಾರಿಗಳ ನಿರ್ವಹಣೆಯ ಹೊಣೆಯನ್ನು ಬಿಬಿಎಂಪಿಯ ಯೋಜನೆ ವಿಭಾಗದಿಂದ ರಸ್ತೆ ಮೂಲಸೌಕರ್ಯ ವಿಭಾಗಕ್ಕೆ ವರ್ಗಾಯಿಸಿದ ಬಳಿಕವೂ ಯೋಜನೆ ವಿಭಾಗದ ಎಂಜಿನಿಯರ್‌ಗಳು ಈ ಕಾಮಗಾರಿಯ ಬಿಲ್‌ಗಳ ಪಾವತಿಗೆ ನಿಯಮ ಮೀರಿ ಕ್ರಮ ಕೈಗೊಂಡಿರುವುದು ಗೊತ್ತಾಗಿದೆ.

ರಾಜ್ಯ ಸರ್ಕಾರದ ವಿಶೇಷ ಮೂಲಸೌಕರ್ಯ ಯೋಜನೆಯಡಿ 2016-17ರಲ್ಲಿ ಮಂಜೂರಾಗಿದ್ದ ವೈಟ್ ಟಾಪಿಂಗ್ ಮೊದಲ ಹಂತದ ಕಾಮಗಾರಿಗಳ ನಿರ್ವಹಣೆಯ ಹೊಣೆಯನ್ನು ಯೋಜನೆ ವಿಭಾಗದಿಂದ ರಸ್ತೆ ಮೂಲಸೌಕರ್ಯ ವಿಭಾಗಕ್ಕೆ ವರ್ಗಾಯಿಸಿ ಬಿಬಿಎಂಪಿ ಮುಖ್ಯ ಆಯುಕ್ತರು 2021ರ ಅ.27ರಂದು ಆದೇಶ ಮಾಡಿದ್ದರು.

ಇದರಲ್ಲಿ 'ನಮ್ಮ ಮೆಟ್ರೊ' ಕಾರಿಡಾರ್‌ಗಳ ಬಳಿಯ ರಸ್ತೆಗಳ ವೈಟ್ ಟಾಪಿಂಗ್ ಕಾಮಗಾರಿಗೆ ಸಂಬಂಧಿಸಿದ (ಪಿ 3158) ಮೂರು ಬಿಲ್‌ಗಳನ್ನು ಯೋಜನೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ಕಡತಗಳ ಹಸ್ತಾಂತರಕ್ಕೆ ಆದೇಶವಾದ ಬಳಿಕ ಗುತ್ತಿಗೆದಾರರಾದ ಎನ್‌ಸಿಸಿ ಲಿಮಿಟೆಡ್ ಸಂಸ್ಥೆಗೆ ಪಾವತಿ ಮಾಡಲು ಕ್ರಮ ಕೈಗೊಂಡಿರುವುದು ಕಂಡುಬಂದಿದೆ. ಯೋಜನೆ ಕೇಂದ್ರ ವಿಭಾಗದ ಕೇಂದ್ರ ವಲಯದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರು ಎನ್‌ಸಿಸಿ ಲಿಮಿಟೆಡ್ ಸಂಸ್ಥೆಗೆ 2021ರ ನ. 11ರಂದು ₹ 8.36 ಕೋಟಿ, 2021ರ ಡಿ.15ರಂದು ₹ 9.30 ಕೋಟಿ ಹಾಗೂ 2022ರ ಜ.24ರಂದು ₹9.18 ಕೋಟಿ ಬಿಲ್ ಪಾವತಿಗೆ ಶಿಫಾರಸು ಮಾಡಿದ್ದಾರೆ.

'ಯಾವುದಾದರೂ ಕಾಮಗಾರಿ ಅನುಷ್ಠಾನದ ಹೊಣೆಯನ್ನು ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ಹಸ್ತಾಂತರಿಸಿದ ಬಳಿಕ ಅದಕ್ಕೆ ಸಂಬಂಧಿಸಿದ ಕಡತಗಳನ್ನೂ ವರ್ಗಾವಣೆ ಮಾಡಲಾಗುತ್ತದೆ. ಈ ಕುರಿತು ಅಧಿಕೃತ ಆದೇಶ ಜಾರಿಯಾದ ಬಳಿಕ ಹಿಂದೆ ಕಾಮಗಾರಿ ಅನುಷ್ಠಾನ ನಡೆಸುತ್ತಿದ್ದ ವಿಭಾಗದ ಅಧಿಕಾರಿಗಳು ಅದಕ್ಕೆ ಸಂಬಂಧಿಸಿದ ಬಿಲ್ ಪಾವತಿಗೆ ಕ್ರಮಕೈಗೊಳ್ಳುವಂತಿಲ್ಲ. ಇದರಿಂದ ಒಂದೇ ಕಾಮಗಾರಿಗೆ ಎರಡೆರಡು ಬಾರಿ ಬಿಲ್ ಪಾವತಿ ಆಗುವ ಅಪಾಯವೂ ಇದೆ' ಎಂದು ಪಾಲಿಕೆಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

'ಬಿಲ್ ಪಾವತಿ: ಗಮನಕ್ಕೆ ಬಂದಿಲ್ಲ'

'ವೈಟ್‌ಟಾಪಿಂಗ್ ಮೊದಲ ಹಂತದ ಕಾಮಗಾರಿಗಳ ನಿರ್ವಹಣೆಯ ಹೊಣೆಯನ್ನು ಯೋಜನೆ ವಿಭಾಗದಿಂದ ರಸ್ತೆ ಮೂಲಸೌಕರ್ಯ ವಿಭಾಗಕ್ಕೆ ವರ್ಗಾಯಿಸಿರುವುದು ನಿಜ. ಆದರೆ, ಕಡತಗಳ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡ ಬಳಿಕವೂ ಯೋಜನೆ ಕೇಂದ್ರ ವಿಭಾಗದ ಅಧಿಕಾರಿಗಳು ಬಿಲ್ ಪಾವತಿಗೆ ಕ್ರಮ ಕೈಗೊಂಡಿರುವುದು ಗಮನಕ್ಕೆ ಬಂದಿಲ್ಲ. ಕಡತಗಳ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡ ಬಳಿಕವೂ ಯೊಜನೆ ವಿಭಾಗದ ಅಧಿಕಾರಿಗಳು ಬಿಲ್ ಪಾವತಿಗೆ ಕ್ರಮ ಕೈಗೊಂಡಿದ್ದರೆ ತಪ್ಪಾಗುತ್ತದೆ. ಈ ಬಗ್ಗೆ ಪರಿಶೀಲಿಸುತ್ತೇನೆ' ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ಯೋಜನೆ) ಎಂ.ಲೋಕೇಶ್ ಅವರು ಪ್ರತಿಕ್ರಿಯಿಸಿದರು.

ಬಿಎಂಟಿಸಿಗೆ ಸರ್ಕಾರದಿಂದ ₹200 ಕೋಟಿ ಬಿಡುಗಡೆ

ಬೆಂಗಳೂರು: ಬಿಎಂಟಿಸಿ ನೌಕರರ ಭವಿಷ್ಯ ನಿಧಿ ಸೇರಿದಂತೆ ಬಾಕಿ ಪಾವತಿಗೆ ₹200 ಕೋಟಿ ಬಿಡುಗಡೆ ಮಾಡಲು ಸರ್ಕಾರ ಆದೇಶಿಸಿದೆ.

'ಭವಿಷ್ಯನಿಧಿ, ಉಪಧನ, ನಿವೃತ್ತ ಮತ್ತು ಮರಣ ಹೊಂದಿದ ನೌಕರರ ಗಳಿಕೆ ರಜೆ ಮರುಪಾವತಿ, ಸಂಸ್ಥೆಗೆ ಸರಕು ಪೂರೈಕೆ ಮಾಡಿದವರ ಬಾಕಿ ಬಿಲ್‌ಗಳನ್ನು ಪಾವತಿಸಲು ಹಣ ಬಿಡುಗಡೆ ಮಾಡಲಾಗಿದೆ' ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ಟ್ವೀಟ್ ಮಾಡಿದ್ದಾರೆ.

'ಬರಗೂರರ ಪತ್ರ ಬೇಸರ ತರಿಸಿದೆ'

ಬೆಂಗಳೂರು: 'ಭವಿಷ್ಯದ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವುದರತ್ತ ಗಮನ ಕೇಂದ್ರೀಕರಿಸುವ ಬದಲು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೈ-ಲಾ ತಿದ್ದುಪಡಿಗೆ ಏಕಿಷ್ಟು ಆತುರ ತೋರುತ್ತಿದ್ದೀರಿ ಎಂದು ಪ್ರಶ್ನಿಸಿ ಸಾಹಿತಿ ಬರಗೂರು ರಾಮಚಂದ್ರಪ್ಪ ಬರೆದಿರುವ ಪತ್ರ ಬೇಸರ ತರಿಸಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ.

ಈ ಸಂಬಂಧ ಬರಗೂರರಿಗೆ ಪತ್ರ ಬರೆದಿರುವ ಅವರು, 'ಬೈ-ಲಾ ತಿದ್ದುಪಡಿಯ ಹಿನ್ನೆಲೆ ಸರಿಯಾಗಿ ತಿಳಿದುಕೊಳ್ಳದೆ ಬೇರೊಬ್ಬರ ಮಾತುಗಳನ್ನು ಕೇಳಿಕೊಂಡು ಪೂರ್ವಗ್ರಹ ಪೀಡಿತರಾಗಿ ತಾವು ಪತ್ರ ಬರೆದಿದ್ದೀರಿ. ಅದರಿಂದ ಮನಸ್ಸಿಗೆ ನೋವಾಗಿದೆ' ಎಂದಿದ್ದಾರೆ.

'ಕಸಾಪವನ್ನು ಜನಸಾಮಾನ್ಯರ ಪರಿಷತ್ತನ್ನಾಗಿಸುವ ಉದ್ದೇಶದಿಂದ ರಾಜ್ಯದ 252 ತಾಲ್ಲೂಕುಗಳಿಗೆ ಭೇಟಿ ನೀಡಿದ್ದೇನೆ. ಜನರ ಆಶಯದಂತೆ ಪರಿಷತ್ತಿನ ಆಜೀವ ಸದಸ್ಯತ್ವ ಶುಲ್ಕವನ್ನು ₹500 ರಿಂದ ₹250ಕ್ಕೆ ಇಳಿಸಲು ನಿರ್ಧರಿಸಿದ್ದೇನೆ. ಆ್ಯಪ್ ಮೂಲಕ ಸದಸ್ಯತ್ವ ನೋಂದಣಿ ಮಾಡಲು ಚಿಂತಿಸಲಾಗಿದೆ. ಈ ಉದ್ದೇಶಗಳ ಈಡೇರಿಕೆಗೆ ಬೈ-ಲಾ ತಿದ್ದುಪಡಿ ಅನಿವಾರ್ಯ. ಕಸಾಪ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಡಾ.ಚನ್ನಬಸವ ಪಟ್ಟದೇವರ ಜಯಂತಿಯನ್ನು ಎಲ್ಲ ಜಿಲ್ಲೆಗಳಲ್ಲೂ ಆಚರಿಸುವಂತೆ ಆದೇಶಿಸಿದ್ದೇನೆ. ಆ ಮೂಲಕ ಕನ್ನಡಕ್ಕೆ ಅವರು ನೀಡಿದ ಕೊಡುಗೆ ಸ್ಮರಿಸುವ ಕೆಲಸ ಮಾಡಿದ್ದೇನೆ. ಇದನ್ನು ಅರಿಯದೆ ನಾನು ಯಾವ ಕಾರ್ಯಕ್ರಮವನ್ನೂ ಮಾಡಿಲ್ಲ ಎಂದು ಆರೋಪಿಸಿದ್ದೀರಿ. ಇದು ನಿಮಗೆ ಶೋಭೆ ತರುವುದಿಲ್ಲ' ಎಂದು ಟೀಕಿಸಿದ್ದಾರೆ.

ಬ್ರಾಹ್ಮಣ ಮಹಾಸಭಾಕ್ಕೆ ರೂಪಾ ಶಾಸ್ತ್ರಿ ನೇಮಕ



ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ರಾಜ್ಯ ಸಂಚಾಲಕರಾಗಿ ರೂಪಾ ಶಾಸ್ತ್ರಿ ಅವರನ್ನು ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ನೇಮಕ ಮಾಡಿದ್ದಾರೆ.

ರೂಪಾ ಶಾಸ್ತ್ರಿ ಹಲವಾರು ಸಂಘ-ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದು, ಕೋವಿಡ್ ಸಂಕಷ್ಟದ ಸಮಯದಲ್ಲೂ ಸಾವಿರಾರು ಜನರಿಗೆ ತಮ್ಮ 'ಋಣ ಫೌಂಡೇಷನ್' ಮೂಲಕ ಸಹಾಯ ಮಾಡಿದ್ದಾರೆ ಎಂದು ತಿಳಿಸಿದೆ.

ನಿಧನವಾರ್ತೆ

ಕೆ.ಜಿ.ಶಾಂತಾರಾಮ್



ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಕೆ.ಜಿ.ಶಾಂತಾರಾಮ್ (61 ವರ್ಷ) ಅವರು ನಗರದಲ್ಲಿರುವ ತಮ್ಮ ಮನೆಯಲ್ಲಿ ಹೃದಯಾಘಾತದಿಂದ ಬುಧವಾರ ಬೆಳಿಗ್ಗೆ ನಿಧನರಾದರು.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕೂಡಿಗೆಯವರಾದ ಶಾಂತಾರಾಮ್ ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಅವರ ಹಿರಿಯ ಮಗನ ಮದುವೆ ಸೋಮವಾರವಷ್ಟೇ ನಡೆದಿತ್ತು.

ಕೃಷಿ ಮಾರುಕಟ್ಟೆ ವಿಭಾಗದ ಸಹಾಯಕ ನಿರ್ದೇಶಕರಾಗಿ ಸರ್ಕಾರಿ ಕೆಲಸ ಆರಂಭಿಸಿದ್ದ ಅವರು, ಬಳಿಕ ಐಎಎಸ್ ಅಧಿಕಾರಿಯಾಗಿ ಬಡ್ತಿ ಪಡೆದಿದ್ದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾಧಿಕಾರಿ, ಗೃಹಮಂಡಳಿ ಆಯುಕ್ತ, ಕಾರ್ಮಿಕ ಆಯುಕ್ತ ಮುಂತಾದ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು.

ಚಿಕ್ಕಮಗಳೂರಿನ ಗುಬ್ಬಗದ್ದೆ ಗ್ರಾಮದಲ್ಲಿರುವ ಅವರ ತೋಟದ ಮನೆಯಲ್ಲಿ ಗುರುವಾರ ಬೆಳಿಗ್ಗೆ 10 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

30 ವರ್ಷಗಳಿಂದ ಕುರ್ಚಿ ರಿಪೇರಿ ಕಾಯಕದಲ್ಲಿ ತೊಡಗಿರುವ ಅಂಧರ ತಂಡ

ದುಡಿಮೆಗೆ ಅಡ್ಡಿಯಾಗದ ಅಂಧತ್ವ

ಸಚ್ಚಿದಾನಂದ ಕುರಗುಂದ

ಹೊಸ ಬೆಳಕು

ಬೆಂಗಳೂರು: ಸ್ವಾವಲಂಬಿಯಾಗಿ ಬದುಕುವ ಛಲಕ್ಕೆ ಅಂಧತ್ವ ಇವರಿಗೆ ಎಂದಿಗೂ ಅಡ್ಡಿಯಾಗಲಿಲ್ಲ. ಸಂಕಷ್ಟಗಳಿಗೆ ಎದೆಗುಂದಲಿಲ್ಲ. ಆತ್ಮಸ್ಥೈರ್ಯದಿಂದ ತಮ್ಮ ಕೈ ಕೌಶಲದಿಂದಲೇ ಬದುಕನ್ನು ಕಟ್ಟಿಕೊಂಡ ಬಗೆ ಮಾದರಿಯೇ ಸರಿ. ಅವರ ದುಡಿಮೆಗೆ ಅಂಧತ್ವ ಎಂದಿಗೂ ಅಡ್ಡಿಯಾಗಲಿಲ್ಲ.

ಕಳೆದ 30 ವರ್ಷಗಳಿಂದ ಕುರ್ಚಿಗಳ ರಿಪೇರಿ ಕಾಯಕದಲ್ಲಿ ತೊಡಗಿರುವ ವಿ. ಲಕ್ಷ್ಮೀನಾರಾಯಣ, ಮಲಿಯಪ್ಪ ಮತ್ತು ಮುಜಾಹೀದ್ ಅಲಿ ಅವರು ಸ್ವಾವಲಂಬಿ ಜೀವನ ಸಾಗಿಸುತ್ತಿದ್ದಾರೆ. ಕುರ್ಚಿಗಳ ಮರು ಹೆಣಿಗೆಯಲ್ಲಿ (ರಿಕೇನಿಂಗ್) ಪರಿಣತಿ ಮತ್ತು ಕೌಶಲ ಪಡೆದಿರುವ ಇವರಿಗೆ, ಸ್ಪರ್ಶ ಜ್ಞಾನವೇ ಬದುಕಿಗೆ ಮಾರ್ಗ ತೋರಿದೆ. ಸ್ಪರ್ಶ ಜ್ಞಾನದಿಂದ ಪ್ಲಾಸ್ಟಿಕ್ ವೈರ್‌ಗಳ ಕುರ್ಚಿಗಳನ್ನು ಇವರು ಹೊಲಿದು ಜೋಡಿಸಿಕೊಡುತ್ತಾರೆ. 1989–90ರಲ್ಲಿ 'ನ್ಯಾಷನಲ್ ಅಸೋಸಿಯೇಷನ್ ಫಾರ್ ಬ್ಲೈಂಡ್'ನಲ್ಲಿ ಒಂದು ವರ್ಷ ಪಡೆದಿದ್ದ 'ರಿಕೇನಿಂಗ್' ತರಬೇತಿ ಇವರಿಗೆ ನೆರವಾಗಿದೆ.

ಈಗ ಮೊದಲಿನಂತೆ ವೈರ್ ಕುರ್ಚಿಗಳಿಗೆ ಬೇಡಿಕೆ ಕುಸಿದಿದೆ. ಕುಷನ್ ಕುರ್ಚಿಗಳಿಂದಾಗಿ ಇವರ ಉದ್ಯೋಗದ ಮೇಲೆಯೂ ಪ್ರತಿಕೂಲ ಪರಿಣಾಮ ಬೀರಿದೆ. ಪ್ರತಿನಿತ್ಯ ಕೆಲಸ ಸಿಗುವುದು ಕಷ್ಟವಾಗುತ್ತಿದೆ ಎನ್ನುವುದು ಇವರ ಅಳಲು.

'ಬೆಂಗಳೂರಿನಲ್ಲಿನ ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಚೇರಿಗಳಲ್ಲಿನ ಬಹುತೇಕ ಕುರ್ಚಿಗಳನ್ನು ನಾವೇ ರಿಪೇರಿ ಮಾಡಿಕೊಟ್ಟಿದ್ದೇವೆ. ವಿಧಾನಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿನ ಕಚೇರಿಗಳಲ್ಲಿನ ಕುರ್ಚಿಗಳನ್ನು ರಿಪೇರಿ ಮಾಡಿದ್ದೇವೆ. ಆದರೆ, ಇತ್ತೀಚೆಗೆ ಕೆಲವೇ ಮಂದಿ ವೈರಿಂಗ್ ಕುರ್ಚಿಗೆ ಆದ್ಯತೆ ನೀಡುತ್ತಿದ್ದಾರೆ. ಹೀಗಾಗಿ, ಈಗ ಕೆಲಸ ಸಿಗದೆ ತೊಂದರೆಯಾಗುತ್ತಿದೆ' ಎಂದು 60 ವರ್ಷದ ಲಕ್ಷ್ಮೀನಾರಾಯಣ ಅವರು ಹೇಳುತ್ತಾರೆ.

'ಸರ್ಕಾರ ಸಹ ರಿಪೇರಿ ಕಾರ್ಯವನ್ನು ಗುತ್ತಿಗೆದಾರರಿಗೆ ಕೊಡುತ್ತಿದೆ. ಗುತ್ತಿಗೆದಾರರು ನಮ್ಮನ್ನು ಕರೆದು ಕೆಲಸ ಕೊಡುತ್ತಾರೆ. ಇದರಿಂದ, ನಮಗೆ ಕಡಿಮೆ ಹಣ ದೊರೆಯುತ್ತಿದೆ. ನೇರವಾಗಿ ನಮಗೆ ಕೆಲಸ ನೀಡಿದರೆ ಅನುಕೂಲವಾಗುತ್ತದೆ' ಎನ್ನುತ್ತಾರೆ.

'ಚಿಕ್ಕ ವಯಸ್ಸಿನಲ್ಲೇ ಕಣ್ಣಿನ ಸಮಸ್ಯೆ ಇತ್ತು. 8ನೇ ತರಗತಿಯಲ್ಲಿದ್ದಾಗ ಸಂಪೂರ್ಣ ಕುರುಡನಾದೆ. ಎರಡು ಬಾರಿ ಶಸ್ತ್ರಚಿಕಿತ್ಸೆ ಸಹ ನಡೆದಿದೆ. ನರಗಳ ಸಮಸ್ಯೆಯಿಂದ ಬೇರೆ ಕಣ್ಣುಗಳನ್ನು ಸಹ ಅಳವಡಿಸಲು ಸಾಧ್ಯವಿಲ್ಲ ಎನ್ನುವುದನ್ನು ವೈದ್ಯರು ತಿಳಿಸಿದ್ದಾರೆ' ಎಂದು ವಿವರಿಸುತ್ತಾರೆ.



ಅಂಧ ಕುಶಲಕರ್ಮಿ ಮಲಿಯಪ್ಪ ಅವರು ಕುರ್ಚಿಗಳ ನೇಯ್ಗೆಯಲ್ಲಿ ತೊಡಗಿರುವುದು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

'ಸರ್ಕಾರ ಪಿಂಚಣಿ ರೂಪದಲ್ಲಿ ₹1400 ನೀಡುತ್ತಿದೆ. ಆದರೆ, ಸೂರಿಗಾಗಿ ನಾವು ಅಲೆದಾಡುತ್ತಿದ್ದೇವೆ. ಎಚ್‌.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ 30 ಅಂಧರಿಗೆ ಆಶ್ರಯ ಮನೆ ಮಂಜೂರು ಮಾಡುವಂತೆ ರಾಜೀವ ಗಾಂಧಿ ವಸತಿ ನಿಗಮಕ್ಕೆ ಸೂಚಿಸಿದ್ದರು. ಆದರೆ, ಇನ್ನೂ ಕಾರ್ಯಗತವಾಗಿಲ್ಲ. ಈಗಲಾದರೂ ಸರ್ಕಾರ ಸೂರು ಕಲ್ಪಿಸಿದರೆ ನೆರವಾಗುತ್ತದೆ' ಎಂದು ಅವರು ಹೇಳುತ್ತಾರೆ.

'ರಿಕೇನಿಂಗ್ ಕಾರ್ಯಕ್ಕೆ ತಾಳ್ಮೆ ಮತ್ತು ಏಕಾಗ್ರತೆ ಬೇಕು. ಪ್ಲಗ್ ಸಹಾಯದಿಂದ ಹೆಣಿಗೆ ಹಾಕುತ್ತೇವೆ. ತಪ್ಪು ಹೆಣಿಗೆ ಹಾಕಿದರೆ ರಿಪೇರಿ ಸರಿಯಾಗುವುದಿಲ್ಲ. ಈ ಕೆಲಸದಿಂದ ನನ್ನ ಕುಟುಂಬಕ್ಕೆ ನೆರವಾಗಿದೆ' ಎಂದು 55 ವರ್ಷದ ಮಲಿಯಪ್ಪ ಹೇಳುತ್ತಾರೆ. ಮೂಲತಃ ತಮಿಳುನಾಡಿನ ಕೃಷ್ಣಗಿರಿಯ ಮಲಿಯಪ್ಪ (55) ಅವರು ಈಗ ಬೆಂಗಳೂರಿನಲ್ಲೇ ನೆಲೆಸಿದ್ದಾರೆ.

'ಒಂದು ದಿನಕ್ಕೆ 3–4 ಕುರ್ಚಿಗಳ ಹೆಣಿಗೆ ಮಾಡುತ್ತಿದ್ದೆವು. ಆದರೆ, ಈಗ ವಯಸ್ಸಾಗುತ್ತಿರುವುದರಿಂದ ಕೆಲಸವನ್ನು ವೇಗದಲ್ಲಿ ಮಾಡಲು ಸಾಧ್ಯವಾಗುತ್ತಿಲ್ಲ. ಕಳೆದ 10 ವರ್ಷಗಳಲ್ಲಿ ಶೇಕಡ 50ರಷ್ಟು ಕೆಲಸ ಕಡಿಮೆಯಾಗಿದೆ. ಪ್ರತಿ ಕುರ್ಚಿ ರಿಪೇರಿಗೆ ₹350 ನೀಡಲಾಗುತ್ತದೆ. ಇದರಲ್ಲಿ ಸಾಮಗ್ರಿಗಳಿಗೆ ₹80ರಿಂದ 100 ಖರ್ಚಾಗುತ್ತದೆ' ಎಂದು ಮುಜಾಹೀದ್ ಅಲಿ ವಿವರಿಸುತ್ತಾರೆ.

ಅನುದಾನರಹಿತ ಖಾಸಗಿ ಶಾಲೆ ಮಾನ್ಯತೆ ನವೀಕರಣ

ರಾಜ್ಯ ಸರ್ಕಾರಕ್ಕೆ ತುರ್ತು ನೋಟಿಸ್

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಅನುದಾನರಹಿತ ಖಾಸಗಿ ಶಾಲೆಗಳ ಮಾನ್ಯತೆಯನ್ನು ಪ್ರತಿವರ್ಷವೂ ನವೀಕರಿಸಲು ಒತ್ತಾಯ ಮಾಡಲಾಗುತ್ತಿದೆ' ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ, 'ನೋಂದಾಯಿತ ಅನುದಾನ ರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ' (ರುಪ್ಸಾ), ಬೆಂಗಳೂರಿನ ಗುರುಸಿದ್ಧಾರ್ಥ ಶೈಕ್ಷಣಿಕ ಟ್ರಸ್ಟ್ ಹಾಗೂ ರಾಜ್ಯದ ಇತರೆ ಶಿಕ್ಷಣ ಸಂಸ್ಥೆಗಳು ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಶಿಕ್ಷಣ ಇಲಾಖೆ ಕಾರ್ಯದರ್ಶಿ, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಮತ್ತು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ತುರ್ತು ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ.

'ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಶಾಲಾ ಮಾನ್ಯತೆಯ ವಾರ್ಷಿಕ ನವೀಕರಣಕ್ಕೆ ಬಲವಂತಪಡಿಸಬಾರದು. ಅರ್ಜಿದಾರರ ಶಾಲೆಗಳ ಅರ್ಹ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಂದ ವಾರ್ಷಿಕ ಪರೀಕ್ಷಾ ನೋಂದಣಿಗೆ ಅರ್ಜಿ ಸ್ವೀಕರಿಸಬೇಕು. ಆದರೆ, ನ್ಯಾಯಾಲಯದ ಅನುಮತಿ ಪಡೆಯದೆ ಪರೀಕ್ಷಾ ಫಲಿತಾಂಶ ಪ್ರಕಟಿಸಬಾರದು' ಎಂದು ನ್ಯಾಯಪೀಠ ಮಧ್ಯಂತರ ಆದೇಶ ನೀಡಿದೆ. ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಬಸವರಾಜು ವಾದ ಮಂಡಿಸಿದರು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದ ಅಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಫೆ.10ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಪೈಪ್ ಲೈನ್ ರೋಡ್, ಸುಂಕದಕಟ್ಟೆ, ಕೆಬ್ಬೆಹಳ್ಳ, ದೊಡ್ಡಬೆಲೆ ರಸ್ತೆ, ಬಿಎಚ್‌ಇಎಲ್ ಬಡಾವಣೆ, ಕೃಷ್ಣ ಗಾರ್ಡನ್, ಡಿ.ಬಿ.ಕಲ್ಲು, ರಾಕ್‌ಲೈನ್ ಸ್ಟುಡಿಯೋ ರಸ್ತೆ, ರಾಘವೇಂದ್ರ ಇಂಡಸ್ಟ್ರಿಯಲ್ ಎಸ್ಟೇಟ್, ವಿಶ್ವೇಶ್ವರ ನಗರ, ಅಂದ್ರಹಳ್ಳಿ ಮುಖ್ಯ ರಸ್ತೆ, ಕೆಂಗೇರಿ ಮುಖ್ಯ ರಸ್ತೆ, ದುಬಾಸಿಪಾಳ್ಯ, ಆರ್‌ಟಿಒ ಕಚೇರಿ ಮುಖ್ಯ ರಸ್ತೆ, ಆರ್. ಆರ್.ರೆಸಿಡೆನ್ಸ್, ಬಿಇಎಲ್ 1ನೇ ಮತ್ತು 2ನೇ ಹಂತ, ಭವಾನಿ ನಗರ, ಅಮ್ಮ ಆಶ್ರಮ ರಸ್ತೆ ಸುತ್ತಮುತ್ತ ಪ್ರದೇಶಗಳು.

ದಯಾನಂದ ಭಂಡಾರಿ ಕ್ರಮದಿಂದ ಬಿಡಿಎಗೆ ನಷ್ಟ ಇಲ್ಲ: ಇಲಾಖೆಗೆ ಪತ್ರ

ಆಯುಕ್ತರ ಕಣ್ತಪ್ಪು– ಅಧಿಕಾರಿಗಳಿಗೆ ಪೀಕಲಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬದಲಿ ನಿವೇಶನದ ರೂಪದಲ್ಲಿ ಮೂಲೆ ನಿವೇಶನವನ್ನು ಹಂಚಿಕೆ ಮಾಡುವ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಉಂಟುಮಾಡಿರುವ ಆರೋಪದ ಮೇರೆಗೆ ಪ್ರಾಧಿಕಾರದ ಉಪಕಾರ್ಯದರ್ಶಿ–2 ಆಗಿದ್ದ ದಯಾನಂದ ಭಂಡಾರಿ ಅವರನ್ನು ಭ್ರಷ್ಟಾಚಾರ ನಿಗ್ರಹದಳದಿಂದ (ಎಸಿಬಿ) ತನಿಖೆಗೆ ಒಳಪಡಿಸಲು ಶಿಫಾರಸು ಮಾಡಿ 2022ರ ಜ. 17ರಂದು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದ ಪ್ರಾಧಿಕಾರದ ಆಯುಕ್ತ ಎಂ.ಬಿ.ರಾಜೇಶ ಗೌಡ, ಈಗ ಅದನ್ನು ಅಲ್ಲಗಳೆದಿದ್ದಾರೆ.

'ಈ ಪ್ರಕರಣದಲ್ಲಿ ದಯಾನಂದ ಭಂಡಾರಿ ಲೋಪ ಕಂಡುಬಂದಿಲ್ಲ. ಈ ಪ್ರಕರಣದಲ್ಲಿ ಪ್ರಾಧಿಕಾರಕ್ಕೆ ಯಾವುದೇ ಆರ್ಥಿಕ ನಷ್ಟವಾಗಿಲ್ಲ. ಹಾಗಾಗಿ, ಕಣ್ತಪ್ಪಿನಿಂದ ಕಳುಹಿಸಲಾದ ವರದಿಯನ್ನು ಪರಿಗಣಿಸಬಾರದು. ಈ ಪ್ರಕರಣದಲ್ಲಿ ಅಧಿಕಾರಿ ಹಾಗೂ ನೌಕರರ ವಿರುದ್ಧದ ತನಿಖೆ ನಡೆಸಲು ಅನುಮತಿ ನೀಡುವ ಅವಶ್ಯಕತೆ ಇಲ್ಲ' ಎಂದು ಬಿಡಿಎ ಆಯುಕ್ತರು ಫೆ.01ರಂದು ನಗರಾಭಿವೃದ್ಧಿ ಇಲಾಖೆಗೆ ಮತ್ತೊಂದು ಪತ್ರ ಕಳುಹಿಸಿದ್ದಾರೆ.

ದಯಾನಂದ ಭಂಡಾರಿ, ದಕ್ಷಿಣ ವಲಯದಲ್ಲಿ ಕಾರ್ಯಪಾಲಕ ಎಂಜಿನಿಯರ್ (ಇ.ಇ) ಆಗಿದ್ದ ಎನ್. ವಿಶ್ವನಾಥ್ ಹಾಗೂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಆಗಿದ್ದ ಎಚ್.ಎಸ್.ಮಂಜುನಾಥ್ ಅವರನ್ನು ವಿಚಾರಣೆಗೆ ಒಳಪಡಿಸಲು ಶಿಫಾರಸು ಮಾಡಿದ್ದರು. ಇದನ್ನು ಆಧರಿಸಿ 'ಪ್ರಜಾವಾಣಿ' ಜ.28ರ ಸಂಚಿಕೆಯಲ್ಲಿ 'ಮೂಲೆ ನಿವೇಶನ ಬದಲಿ ನಿವೇಶನವಾಗಿ ಹಂಚಿಕೆ!' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು.

'ಶ್ರೀನಿವಾಸಗೌಡ ಅವರಿಗೆ ಬನಶಂಕರಿ ಬಡಾವಣೆಯ ಆರನೇ ಹಂತದ 4ನೇ ಬ್ಲಾಕ್‌ನಲ್ಲಿ 12x18 ಮೀಟರ್‌ನ ನಿವೇಶನವನ್ನು (ಸಂಖ್ಯೆ 927) ಉಪಕಾರ್ಯದರ್ಶಿ–4 ವಿಭಾಗವು 2003-04ರಲ್ಲಿ ಹಂಚಿಕೆ ಮಾಡಿತ್ತು. ಇದು ಮೂಲೆ ನಿವೇಶನವಾಗಿದ್ದರಿಂದ ಹಂಚಿಕೆಯನ್ನು ರದ್ದುಪಡಿಸಿ, ಅದೇ ಬಡಾವಣೆಯಲ್ಲಿ ಇನ್ನೊಂದು ನಿವೇಶನವನ್ನು (ಸಂಖ್ಯೆ 1116/ಎ) ಬದಲಿಯಾಗಿ ನೀಡಲಾಗಿತ್ತು. ಇದಕ್ಕೆ 2005ರ ನ.26ರಂದು ಸ್ವಾಧೀನಪತ್ರ ನೀಡಲಾಗಿತ್ತು. 'ತನಗೆ ಮಂಜೂರಾದ ನಿವೇಶನವು ಕಲ್ಲುಬಂಡೆಗಳಿಂದ ಕೂಡಿದೆ. ಬನಶಂಕರಿ ಬಡಾವಣೆಯ ಆರನೇ ಹಂತದ 1ನೇ ಬ್ಲಾಕ್‌ನ ನಿವೇಶನ (1293) ನಿವೇಶನ ನೀಡಬೇಕು ಎಂದು ಶ್ರೀನಿವಾಸ ಗೌಡರು 2015ರ ನ.3ರಂದು ಆಯುಕ್ತರಿಗೆ ಮನವಿ ಸಲ್ಲಿಸಿದ್ದರು.'

'ಈ ಬಗ್ಗೆ ವರದಿ ನೀಡುವಂತೆ ಉಪಕಾರ್ಯದರ್ಶಿ–4 ಅವರು ದಕ್ಷಿಣ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರನ್ನು ಕೋರಿದ್ದರು. ಇಇ ವಿಶ್ವನಾಥ್ ಹಾಗೂ ಎಇಇ ಮಂಜುನಾಥ್ ವರದಿ ನೀಡಿದ್ದು, ನಿವೇಶನ ಸಂಖ್ಯೆ 1116/ಎ ಕಲ್ಲುಬಂಡೆಗಳಿಂದ ಕೂಡಿರುವುದನ್ನು ಖಚಿತಪಡಿಸಿದ್ದರು.'

ಬಿಡಿಎ ಆಯುಕ್ತರ ಅಧ್ಯಕ್ಷತೆಯಲ್ಲಿ 2016ರ ಜ.2ರಂದು ನಡೆದ ನಿವೇಶನ ಹಂಚಿಕೆ ಸಮಿತಿಯ ಸಭೆಯಲ್ಲಿ ಬನಶಂಕರಿ ಬಡಾವಣೆಯ 6ನೇ ಹಂತದ 1ನೇ ಬ್ಲಾಕ್‌ನಲ್ಲಿ ಶ್ರೀನಿವಾಸ ಗೌಡರಿಗೆ ಬದಲಿ ನಿವೇಶನ (ಸಂಖ್ಯೆ 1293) ಹಂಚಿಕೆ ಮಾಡಲು ತೀರ್ಮಾನಿಸಲಾಗಿತ್ತು. ದಯಾನಂದ ಭಂಡಾರಿ ಅವರು ಈ ಸಭೆಯ ತೀರ್ಮಾನದಂತೆ ನಿವೇಶನ ಸಂಖ್ಯೆ 1293ರ ಹಂಚಿಕೆ ಪತ್ರ ನೀಡಿದ್ದರು. ಆದರೆ, ಹಂಚಿಕೆಯ ನಂತರದ ಯಾವುದೇ ಕ್ರಮವನ್ನು ಮುಂದುವರಿಸಿಲ್ಲ. ನಿವೇಶನ ಸಂಖ್ಯೆ 1293 ಅನ್ನು ಬದಲಿ ನಿವೇಶನವನ್ನಾಗಿ ಹಂಚಿಕೆ ಮಾಡಲು ದಯಾನಂದ ಭಂಡಾರಿ ಪ್ರಸ್ತಾವನೆ ಮಂಡಿಸಿಲ್ಲ. ಇದನ್ನು ಸಿದ್ಧಪಡಿಸಿದ್ದು ಉಪಕಾರ್ಯದರ್ಶಿ–4 ವಿಭಾಗ' ಎಂದು ಆಯುಕ್ತರು ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ತೆರಿಗೆ ಸಂಗ್ರಹದಲ್ಲಿ ವಿಫಲ: ವಿವರ ಕೇಳಿದ ಅಂದಾಜು ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ, ಜಾಹೀರಾತು ತೆರಿಗೆ, ಮೊಬೈಲ್ ಟವರ್ ಶುಲ್ಕ ಸಂಗ್ರಹದಲ್ಲಿ ನಿಗದಿತ ಗುರಿ ಸಾಧಿಸದ ಬಿಬಿಎಂಪಿ ಆಡಳಿತ ವೈಖರಿಗೆ ಆಕ್ಷೇಪ ವ್ಯಕ್ತಪಡಿಸಿರುವ ವಿಧಾನಸಭೆ ಅಂದಾಜುಗಳ ಸಮಿತಿ, ಪಾಲಿಕೆಯಿಂದ ವಿವರಣೆ ಕೇಳಿದೆ.

'ಅಂದಾಜುಗಳ ಸಮಿತಿಯ ಸಭೆಯಲ್ಲಿ ಈ ವಿಷಯ ಚರ್ಚೆಯಾಗಿದ್ದು, ತೆರಿಗೆ ಸಂಗ್ರಹಿಸುವಲ್ಲಿ ಪಾಲಿಕೆ ವಿಫಲವಾಗಿದೆ. ಇದರಿಂದ ಅನುದಾನದ ಕೊರತೆ ಉಂಟಾಗಿ ನಗರದ ಅಭಿವೃದ್ಧಿ ಕಾರ್ಯಗಳು ವಿಳಂಬವಾಗಿವೆ' ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

'ತೆರಿಗೆ ಸಂಗ್ರಹ ಕಡಿಮೆಯಾಗಲು ಕಾರಣಗಳೇನು ಎಂಬುದರ ಕುರಿತು ದೃಢೀಕೃತ ಮಾಹಿತಿಯನ್ನು ಫೆ.11ರೊಳಗೆ ಒದಗಿಸಬೇಕು' ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದಾರೆ. ನಗರಾಭಿವೃದ್ಧಿ ಇಲಾಖೆಯಿಂದ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ರವಾನೆಯಾಗಿದೆ.


ಸಮಿತಿ ಕೇಳಿರುವ ಮಾಹಿತಿ

- ಪಾಲಿಕೆಯ ಪ್ರಮುಖ ಆದಾಯ ಮೂಲವಾದ ತೆರಿಗೆ ವಸೂಲಿಯಲ್ಲಿ ನಿಗದಿತ ಗುರಿ ಸಾಧಿಸಲು ಪಾಲಿಕೆ ಹಿಂದುಳಿಯಲು ಕಾರಣ ಏನು, ಇದಕ್ಕೆ ಕಾರಣರಾಗಿರುವ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳು.
- ಮೊಬೈಲ್ ಟವರ್ ಶುಲ್ಕ ಸಂಗ್ರಹ ಮಾಡಲು ಪಾಲಿಕೆ ವಿಫಲವಾಗಿದೆ. ನಗರದಲ್ಲಿರುವ ಮೊಬೈಲ್ ಟವರ್‌ಗಳ ಸಂಖ್ಯೆ ಎಷ್ಟು, ಟವರ್ ಶುಲ್ಕ ವಸೂಲಿ ಮಾಡದಿರಲು ಕಾರಣ, ಈ ವಿಷಯದಲ್ಲಿ ಕೈಗೊಂಡ ಕ್ರಮಗಳು.
- ಪಾಲಿಕೆ ವ್ಯಾಪ್ತಿಯಲ್ಲಿನ ವಸತಿ ಪ್ರದೇಶ, ವಸತಿ ಮತ್ತು ವಾಣಿಜ್ಯ ಕಟ್ಟಡಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಸೇರಿಸಲಾಗಿದೆಯೇ? ಸೇರಿಸಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು? ಸೇರಿಸದಿರುವ ಕಟ್ಟಡಗಳೆಷ್ಟು ಮತ್ತು ಅದಕ್ಕೆ ಕಾರಣ ಏನು?
- ಸಂಗ್ರಹವಾಗುತ್ತಿರುವ ಆಸ್ತಿ ತೆರಿಗೆ ಮೊತ್ತ, ನಿಗದಿಪಡಿಸಿರುವ ಗುರಿ, ತೆರಿಗೆ ಪಾವತಿಸದಿರುವ ಮಾಲೀಕರು ಹಾಗೂ ತೆರಿಗೆ ವಸೂಲಿ ಮಾಡಲು ವಿಫಲವಾದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳು.
- ಪಾಲಿಕೆ ವ್ಯಾಪ್ತಿಯಲ್ಲಿ ₹25 ಲಕ್ಷಕ್ಕೂ ಹೆಚ್ಚಿನ ಮೊತ್ತದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲೀಕರಿಗೆ ದಂಡ ವಿಧಿಸಲು ಕೈಗೊಂಡಿರುವ ಕ್ರಮಗಳು, ತೆರಿಗೆ ಬಾಕಿ ಉಳಿಯಲು ಕಾರಣ.
- ಐದು ವರ್ಷಗಳಲ್ಲಿ ಜಾಹೀರಾತು ಮೂಲದಿಂದ ಸಂಗ್ರಹಿಸಲಾದ ತೆರಿಗೆ ಪ್ರಮಾಣವೆಷ್ಟು? ಒಪ್ಪಂದ ಅವಧಿ ಮೀರಿ ಜಾಹೀರಾತು ಮುಂದುವರೆಸಿರುವ ಪ್ರಕರಣಗಳಿವೆಯೇ? ಇದ್ದಲ್ಲಿ ಕಾರಣರಾದವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ಎಂಬುದರ ವರ್ಷವಾರು ಮಾಹಿತಿ.
- ಪಾಲಿಕೆ ವತಿಯಿಂದ ಬೆಂಗಳೂರಿನಲ್ಲಿ ಸ್ಥಾಪಿಸಲಾದ ಕೋವಿಡ್ ಆರೈಕೆ ಕೇಂದ್ರಗಳ ಸಂಖ್ಯೆ, ಆರೈಕೆ ಕೇಂದ್ರಗಳ ಸ್ಥಾಪನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಅನುದಾನ, ಈ ಕೇಂದ್ರಗಳಲ್ಲಿ ಇದ್ದ ಹಾಸಿಗೆಗಳ ಸಂಖ್ಯೆ, ಒದಗಿಸಲಾಗಿದ್ದ ಮೂಲಸೌಕರ್ಯಗಳು, ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದ ಸೋಂಕಿತರ ಸಂಖ್ಯೆ, ಹಾಸಿಗೆ ಸಿಗದೆ ಮೃತಪಟ್ಟವರ ಮಾಹಿತಿ.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯ ಪೊಲೀಸ್ ವಾರ್ಷಿಕ ಕ್ರೀಡಾಕೂಟ-2021 ಸಮಾರೋಪ ಸಮಾರಂಭ: ಮುಖ್ಯ ಅತಿಥಿ– ಗೃಹ ಸಚಿವ ಆರಗ ಜ್ಞಾನೇಂದ್ರ, ಆಯೋಜನೆ– ಪೊಲೀಸ್ ಇಲಾಖೆ, ಸ್ಥಳ–ಕೆ.ಎಸ್.ಆರ್. ಪಿ. ಸಭಾಂಗಣ, ಕೋರಮಂಗಲ, ಸಂಜೆ 4.30

ಹೋರಾಟಗಾರ್ತಿ ಜಯದೇವಿ ತಾಯಿ ಲಿಗಾಡೆ ಹಾಗೂ ಕಯ್ಯಾರ ಕಿಂಞ್ಞಣ್ಣ ರೈ ಹೆಸರಿನಲ್ಲಿ ಸ್ಥಾಪಿಸಿರುವ 'ಗಡಿನಾಡ ಚೇತನ' ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಸ್ಥಳ– ಗಾಂಧಿ ಭವನ, ಸಂಜೆ 7



ಬಸವರಾಜ ಬೊಮ್ಮಾಯಿ

ಹೊಗೆ ಮಾಲಿನ್ಯ ನಿಯಂತ್ರಣಾ ಸಾಧನ ಲೋಕಾರ್ಪಣೆ ಕಾರ್ಯಕ್ರಮ: ಸಾಧನ ಬಿಡುಗಡೆ– ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಸದಸ್ಯ ರೋಹನ್ ಪ್ರೇಮ್ ಸಾಗರ್, ಆಯೋಜನೆ– ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜು, ಸ್ಥಳ– ಬ್ಯಾಂಕ್ ಆಫ್ ಬರೋಡ ಬಳಿಯ ಡಿಎಸ್‌ಸಿಇ ಶಾಖೆ, ಬೆಳಿಗ್ಗೆ 11

ಕನ್ನಡದಲ್ಲಿ ಡಿಜಿಟಲ್ ಗ್ರಂಥಾಲಯಗಳು ಕುರಿತ ಉಪನ್ಯಾಸ: ಉಪನ್ಯಾಸ– ಸತೀಶ್‌ಕುಮಾರ್ ಎಸ್. ಹೊಸಮನಿ, ಅಧ್ಯಕ್ಷತೆ– ಕನ್ನಡ ಯುವಜನ ಸಂಘದ ಅಧ್ಯಕ್ಷ ಜಗದೀಶ್ ರೆಡ್ಡಿ, ಆಯೋಜನೆ– ಕನ್ನಡ ಯುವಜನ ಸಂಘ, ಸ್ಥಳ– ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ನವಭಾರತ ಸೇನಾ ಪಕ್ಷದ ಉದ್ಘಾಟನಾ ಕಾರ್ಯಕ್ರಮ: ಉದ್ಘಾಟನೆ– ವೈ.ಎಸ್. ವಿ. ದತ್ತ, ಅಧ್ಯಕ್ಷತೆ– ಎಂ.ಪಿ.ನಾಡಗೌಡ, ಸ್ಥಳ– ಲಾ ಮಾರ್ವೆಲ್ಲಾ ಹೋಟೆಲ್, ಜಯನಗರದ ಸೌತ್ ಎಂಡ್ ಸರ್ಕಲ್, ಸಂಜೆ –6

ಗೋಸಾಯಿ ಮಹಾಸಂಸ್ಥಾನ ಮಠದ ಮಂಜುನಾಥಸ್ವಾಮೀಜಿ ಅವರ ಪಟ್ಟಾಭಿಷೇಕ ಮಹೋತ್ಸವಕ್ಕೆ ಚಾಲನೆ, ಮೊದಲ ದಿನದ ಧರ್ಮಸಭೆ: ಉದ್ಘಾಟನೆ– ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಶಾಸಕ ರವಿಸುಬ್ರಹ್ಮಣ್ಯ, ಅಧ್ಯಕ್ಷತೆ– ಪಿಜಿಆರ್ ಸಿಂಧ್ಯ, ಸ್ಥಳ– ಗೋಸಾಯಿ ಮಠ, ಗವಿಪುರ, ಬೆಳಿಗ್ಗೆ 10



ಮಂಜುನಾಥ ಸ್ವಾಮೀಜಿ

ನಿಧನ ವಾರ್ತೆ

ಪದ್ಮಾಕ್ಷಿ ಹೊಳ್ಳ

ಬೆಂಗಳೂರು: ಕಾಸರಗೋಡಿನ ಮಂಜೇಶ್ವರ ಕಡಂಬಾರು ಗ್ರಾಮದ ಕಜಕೋಡಿಯ ಪದ್ಮಾಕ್ಷಿ ಹೊಳ್ಳ (81) ನಗರದಲ್ಲಿ ಬುಧವಾರ ನಿಧನರಾದರು.



ಉಸಿರಾಟದ ಸಮಸ್ಯೆಯಿಂದ ಜಯನಗರದ ಶೇಖರ್ ಆಸ್ಪತ್ರೆಗೆ ದಾಖಲಾಗಿದ್ದ ಅವರು ಹೃದಯಾಘಾತದಿಂದ ಬೆಳಿಗ್ಗೆ 8.15ಕ್ಕೆ ನಿಧನರಾದರು. ಅವರಿಗೆ ಪುತ್ರ ಶಾಂತಾರಾಂ ಹೊಳ್ಳ, ಪುತ್ರಿ ವೀಣಾ ಸೋಮಯಾಜಿ ಇದ್ದಾರೆ. ಮೃತರ ಅಂತ್ಯಕ್ರಿಯೆಯು ಚಾಮರಾಜಪೇಟೆಯ ಚಿತಾಗಾರದಲ್ಲಿ ನಡೆಯಿತು.

'ನಮ್ಮ ಶಾಲೆ, ನನ್ನ ಕೊಡುಗೆ' ಆ್ಯಪ್‌ಗೆ 14ರಂದು ಚಾಲನೆ

ಬೆಂಗಳೂರು: 'ಶಾಲೆಗಳ ಅಭಿವೃದ್ಧಿಗೆ ನೆರವಾಗಲು ಬಯಸುವವರ ನೆರವಿಗಾಗಿ 'ನಮ್ಮ ಶಾಲೆ, ನನ್ನ ಕೊಡುಗೆ' ವಿಶೇಷ ಆ್ಯಪ್ ರೂಪಿಸಲು ಶಿಕ್ಷಣ ಇಲಾಖೆ ಮುಂದಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಶಾಲಾ ಶಿಕ್ಷಣದ ಸಮಗ್ರ ಅಭಿವೃದ್ಧಿಗಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ಬುಧವಾರ ಆಯೋಜಿಸಿದ 'ಖಾಸಗಿ ಸಂಸ್ಥೆಗಳೊಂದಿಗೆ ಸಂವಾದ' ಕಾರ್ಯಕ್ರಮದ ಬಳಿಕ ಮಾತನಾಡಿದ ಅವರು, 'ಆ್ಯಪ್ ಅನ್ನು ಇದೇ 14 ರಂದು ಮುಖ್ಯಮಂತ್ರಿ ಬಿಡುಗಡೆ ಮಾಡಲಿದ್ದಾರೆ. ಶಾಲೆಗಳಿಗೆ ದೇಣಿಗೆ ಅಥವಾ ಶಾಲೆಗಳ ಅಭಿವೃದ್ಧಿಗೆ ನೆರವಾಗಲು ಬಯಸುವವರು ಈ ಆ್ಯಪ್‌ನಲ್ಲಿ ನೋಂದಣಿ ಮಾಡಬಹುದು' ಎಂದರು.

'ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಶಾಲೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರೇತರ ಸಂಸ್ಥೆಗಳು ಶ್ರಮಿಸುತ್ತಿವೆ. ಶಿಕ್ಷಕರಿಗೆ ತರಬೇತಿ, ವಿದ್ಯಾರ್ಥಿಗಳಿಗೆ ಪುಸ್ತಕ, ಸಮವಸ್ತ್ರ ಸೇರಿ ಹಲವು ಕೊಡುಗೆಗಳನ್ನು ಕೊಡುತ್ತಿವೆ. ಅದೆಲ್ಲವನ್ನೂ ಒಂದೇ ವೇದಿಕೆಗೆ ತರುವ ಉದ್ದೇಶದಿಂದ 75ಕ್ಕೂ ಹೆಚ್ಚು ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ), ವಿವಿಧ ಖಾಸಗಿ ಕಂಪನಿಗಳ ಅಧಿಕಾರಿಗಳು ಸಂವಾದದಲ್ಲಿ ಭಾಗವಹಿಸಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಗುಣಮಟ್ಟದ ಶಿಕ್ಷಣ ನೀಡಲು ಅಗತ್ಯವಾದ ಸೌಲಭ್ಯ ಕಲ್ಪಿಸಲು ಸರ್ಕಾರದ ಜೊತೆ ಕೈ ಜೋಡಿಸುವ ಭರವಸೆ ನೀಡಿದ್ದಾರೆ' ಎಂದರು.

ಶಾಲೆಗಳ ಅಭಿವೃದ್ಧಿ ಕುರಿತು ಚರ್ಚೆ: 'ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯ ಕೊರತೆ ನಿವಾರಿಸಿ ಕಲಿಕಾ ಚಟುವಟಿಕೆಗೆ ಆದ್ಯತೆ ನೀಡಲು ಎನ್‌ಜಿಓಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಈ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಈ ಆ್ಯಪ್‌ನಲ್ಲಿ ಶಾಲೆಗಳ ಮಾಹಿತಿ ಪಡೆಯಬಹುದು' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ಆರ್.ವಿಶಾಲ್ ತಿಳಿಸಿದರು.



ಬಂಧಿತ ಆರೋಪಿಗಳು ಹಾಗೂ ಅವರಿಂದ ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳು

ಕದ್ದ ಸ್ಕೂಟರ್‌ನಲ್ಲಿ ಸುತ್ತಾಡಿ ಸಿಕ್ಕಿಬಿದ್ದ

ಬೆಂಗಳೂರು: ಕದ್ದ ಸ್ಕೂಟರ್‌ನಲ್ಲಿ ಸುತ್ತಾಡುತ್ತಿದ್ದ ಆರೋಪಿ ಹಾಗೂ ಆತನ ಇಬ್ಬರು ಸಹಚರರನ್ನು ಬಂಧಿಸಿರುವ ವಿ.ವಿ.ಪುರ ಠಾಣೆ ಪೊಲೀಸರು, ₹10 ಲಕ್ಷ ಮೌಲ್ಯದ 14 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

‘ಕನಕನಗರದ ಸದ್ದಾಂ ಹುಸೇನ್ ಯಾನೆ ಸದ್ದಾಂ (28), ಸೈಯದ್ ರೋಷನ್ ಯಾನೆ ರಾಕೆಟ್ ಹಾಗೂ ಹೆಗಡೆನಗರದ ಸಾದಿಕ್ ಪಾಷಾ (20) ಬಂಧಿತರು. ಇವರಿಂದ 10 ಸುಜುಕಿ ಆಕ್ಸಿಸ್, 2 ಹೊಂಡಾ ಡಿಯೊ ಸ್ಕೂಟರ್ ಹಾಗೂ 2 ಪಲ್ಸರ್ ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಜನವರಿ 31ರ ಸಂಜೆ 7.15ರ ಸುಮಾರಿಗೆ ಉಪಾಹಾರ ಸೇವಿಸಲು ಠಾಣಾ ವ್ಯಾಪ್ತಿಯ ಎನ್.ಎಚ್.ಎಸ್.ರಸ್ತೆಗೆ ಬಂದಿದ್ದ ದಂಪತಿ, ಕಾಲೇಜೊಂದರ ಬಳಿ ಸುಜುಕಿ ಆಕ್ಸಿಸ್ ಸ್ಕೂಟರ್ ನಿಲ್ಲಿಸಿ ಹೋಗಿದ್ದರು. ಮರಳಿ ಬಂದು ನೋಡಿದಾಗ ಸ್ಕೂಟರ್ ನಾಪತ್ತೆಯಾಗಿತ್ತು. ಪ್ರಕರಣದ ಮುಖ್ಯ ಆರೋಪಿ ಸದ್ದಾಂ ಅದೇ ಸ್ಕೂಟರ್‌ನಲ್ಲಿ ಇದೇ 5ರಂದು ಸಜ್ಜನ್‌ರಾವ್ ವೃತ್ತದ ಬಳಿ ಹೋಗುತ್ತಿದ್ದ. ಈ ವೇಳೆ ಗಸ್ತಿನಲ್ಲಿದ್ದ ಸಿಬ್ಬಂದಿ ಆತನನ್ನು ಬಂಧಿಸಿದ್ದರು’ ಎಂದು ತಿಳಿಸಿದ್ದಾರೆ.

‘ಸದ್ದಾಂ, ಈ ಹಿಂದೆ ಜಯನಗರ ಠಾಣಾ ವ್ಯಾಪ್ತಿಯಲ್ಲಿ ಬೈಕ್‌ಗಳನ್ನು ಕಳವು ಮಾಡಿದ್ದ. ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಸೈಯದ್ ರೋಷನ್ ಹಾಗೂ ಸಾದಿಕ್ ವಿ.ವಿ.ಪುರಂ, ಕುಮಾರಸ್ವಾಮಿ ಲೇಔಟ್,ಪುಟ್ಟೇನಹಳ್ಳಿ, ಜೆ.ಪಿ.ನಗರ, ಇತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 14 ದ್ವಿಚಕ್ರ ವಾಹನಗಳನ್ನು ಕದ್ದಿರುವುದಾಗಿ ಒಪ್ಪಿಕೊಂಡಿದ್ದಾನೆ’ ಎಂದು ಮಾಹಿತಿ ನೀಡಿದರು.

ಜಲಜೀವನ್: ₹4,400 ಕೋಟಿ ವೆಚ್ಚಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಎಂಟು ಜಿಲ್ಲೆಗಳ 6,358 ಜನವಸತಿಗಳಿಗೆ ನಲ್ಲಿ ಮೂಲಕ ಕುಡಿಯುವ ನೀರು ಪೂರೈಸಲು ₹ 4,400.66 ಕೋಟಿ ವೆಚ್ಚದಲ್ಲಿ 17 ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವಕ್ಕೆ ಸಂಪುಟ ಸಭೆ ಮಂಜೂರಾತಿ ನೀಡಿದೆ.

ಸಂಪುಟ ಸಭೆಯ ಬಳಿಕ ವಿವರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುದಾರಿಕೆಯಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ. ರಾಜ್ಯ ಸರ್ಕಾರದ ಪಾಲು ಮತ್ತು ಫಲಾನುಭವಿಗಳ ವಂತಿಕೆಯನ್ನು ರಾಜ್ಯ ಸರ್ಕಾರವೇ ಭರಿಸಲಿದೆ. ಇದಕ್ಕಾಗಿ ವಿಶ್ವ ಬ್ಯಾಂಕ್‌ನಿಂದ ₹ 4,500 ಕೋಟಿ ಸಾಲ ಪಡೆದು ಬಳಸಿಕೊಳ್ಳಲಾಗುವುದು’ ಎಂದರು.

ಉಡುಪಿ ಜಿಲ್ಲೆಯ ಕಾರ್ಕಳ, ಹೆಬ್ರಿ ಮತ್ತು ಕಾಪು ತಾಲ್ಲೂಕಿನ 1,904 ಜನವಸತಿಗಳಿಗೆ ನೀರು ಪೂರೈಸುವ ₹ 1,215 ಕೋಟಿ ವೆಚ್ಚದ ಕಾಮಗಾರಿ, ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಹೊಳಲ್ಕೆರೆ ಪಟ್ಟಣ ಮತ್ತು ಇತರ 21 ಗ್ರಾಮೀಣ ಜನವಸತಿಗಳಿಗೆ ಕುಡಿಯುವ ನೀರು ಒದಗಿಸುವ ₹ 367.65 ಕೋಟಿ ವೆಚ್ಚದ ಕಾಮಗಾರಿಗಳಿಗೆ ಸಂಪುಟ ಒಪ್ಪಿಗೆ ನೀಡಿದೆ.

ಹಾಸನ ಜಿಲ್ಲೆ ಅರಕಲಗೂಡು, ಹೊಳೆನರಸೀಪುರ, ಬೇಲೂರು, ಆಲೂರು, ಚನ್ನರಾಯಪಟ್ಟಣ, ಹಾಸನ ತಾಲ್ಲೂಕುಗಳ 2,396 ಗ್ರಾಮಗಳಿಗೆ ಒಟ್ಟು ₹ 1,475 ಕೋಟಿ ವೆಚ್ಚದಲ್ಲಿ ನೀರು ಪೂರೈಸುವ ಐದು ಕಾಮಗಾರಿಗಳ ಅಂದಾಜು ಪಟ್ಟಿಗೆ ಸಂಪುಟ ಅನುಮೋದನೆ ನೀಡಿದೆ. ರಾಮನಗರ ಜಿಲ್ಲೆಯ 1,041 ಜನವಸತಿಗಳಿಗೆ ₹ 825 ಕೋಟಿ ವೆಚ್ಚದಲ್ಲಿ ನೀರು ಒದಗಿಸುವ ಎರಡು ಕಾಮಗಾರಿಗಳಿಗೂ ಮಂಜೂರಾತಿ ನೀಡಲಾಗಿದೆ.

ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ 61 ಜನವಸತಿಗಳಿಗೆ ನೀರು ಪೂರೈಸುವ ₹ 131.21 ಕೋಟಿ ವೆಚ್ಚದ ಕಾಮಗಾರಿ, ಶಿವಮೊಗ್ಗ ಜಿಲ್ಲೆಯ ಸಾಗರ, ಶಿವಮೊಗ್ಗ ತಾಲ್ಲೂಕಿನ 349 ಜನವಸತಿಗಳಿಗೆ ನೀರು ಒದಗಿಸುವ ₹ 104.73 ಕೋಟಿ ವೆಚ್ಚದ ಕಾಮಗಾರಿ, ಚಿಕ್ಕಬಳ್ಳಾಪುರ ಜಿಲ್ಲೆಯ 41 ಜನವಸತಿಗಳಿಗೆ ₹ 28.30 ಕೋಟಿ ವೆಚ್ಚದ ಎರಡು ಕಾಮಗಾರಿ ಉತ್ತರ ಕನ್ನಡ ಜಿಲ್ಲೆ,ಅಂಕೋಲಾ, ಕಾರವಾರ ಮತ್ತು ಕುಮಟಾ ತಾಲ್ಲೂಕಿನ 349 ಜನವಸತಿಗಳಿಗೆ ನೀರು ಪೂರೈಸುವ ₹ 253.77 ಕೋಟಿ ವೆಚ್ಚದ ಮೂರು ಕಾಮಗಾರಿಗಳಿಗೂ ಒಪ್ಪಿಗೆ ದೊರಕಿದೆ.

ಮುಖ್ಯಾಂಶಗಳು

- ವಿಶ್ವ ಬ್ಯಾಂಕ್‌ನಿಂದ ₹4,500 ಕೋಟಿ ಸಾಲ
- 8 ಜಿಲ್ಲೆಗಳಲ್ಲಿ ಕುಡಿಯುವ ನೀರು ಪೂರೈಕೆ ಯೋಜನೆ
- ಕೇಂದ್ರ, ರಾಜ್ಯ ಸರ್ಕಾರಗಳ ಪಾಲುದಾರಿಕೆ

ಅತಿಥಿ ಉಪನ್ಯಾಸಕಿ ಆತ್ಮಹತ್ಯೆ



ಉಮೆಯಾನಿ

ಬೇಲೂರು: ಪಟ್ಟಣ ಸಮೀಪದ ವೈಡಿಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸರ್ವೋದಯ ಕಾಲೇಜಿನಲ್ಲಿ 4 ವರ್ಷಗಳಿಂದ ಅತಿಥಿ ಉಪನ್ಯಾಸಕಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಉಮೆಯಾನಿ (30) ಮಂಗಳವಾರ ರಾತ್ರಿ ತಮ್ಮ ತಾಯಿ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಚಿಕ್ಕಮಗಳೂರಿನವರಾದ ಉಮೆಯಾನಿ ಕಳೆದ ಒಂದು ವರ್ಷದಿಂದ ಬೇಲೂರಿನ ವೈಡಿಡಿ ಪ್ರಥಮದರ್ಜೆ ಕಾಲೇಜು ಹಾಗೂ ಸರ್ವೋದಯ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದರು. ಕೆಲ ದಿನಗಳ ಹಿಂದೆ ಸರ್ಕಾರ ಉಪನ್ಯಾಸಕರ ಆಯ್ಕೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಕರೆದಿದ್ದು, ಇವರು ಸಹ ಅರ್ಜಿ ಸಲ್ಲಿಸಿದ್ದರು. ಆದರೆ, ಇವರು ಆಯ್ಕೆಯಾಗಿರಲಿಲ್ಲ. ಇದರಿಂದ ಮನನೊಂದು ಚಿಕ್ಕಮಗಳೂರಿನ ತಮ್ಮ ತಾಯಿ ಮನೆಯಲ್ಲಿ ನೇಣಿಗೆ ಶರಣಾಗಿದ್ದಾರೆ.


ಸುದ್ದಿ 2 ನಿಮಿಷ

ರಾಜೇಂದ್ರ ಕುಮಾರ್ ನೂತನ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್

ಬೆಂಗಳೂರು: ಕರ್ನಾಟಕ ಅಂಚೆ ವೃತ್ತದ ನೂತನ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಆಗಿ ಎಸ್. ರಾಜೇಂದ್ರ ಕುಮಾರ್ ಅವರು ಬುಧವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ಇದಕ್ಕೂ ಮುನ್ನ ಅವರು, ತೆಲಂಗಾಣ ಅಂಚೆ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರ್ ಆಗಿ ಕಾರ್ಯನಿರ್ವಹಿಸಿದ್ದರು.

ಮಂಗಳೂರಿನವರಾದ ಅವರು, 1990ನೇ ಸಾಲಿನ ಭಾರತೀಯ ಅಂಚೆ ಸೇವೆಯ ಅಧಿಕಾರಿಯಾಗಿದ್ದಾರೆ. ಐಐಟಿ ಮದ್ರಾಸ್‌ನಲ್ಲಿ ಲೋಹ ವಿಜ್ಞಾನದಲ್ಲಿ ಬಿ.ಟೆಕ್. ಪದವಿ ಪಡೆದಿರುವ ಅವರು, 1987ರಿಂದ 1990ರವರೆಗೆ ಬಿಎಚ್‌ಇಎಲ್‌ನ ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗದಲ್ಲಿ ಸಂಶೋಧನಾ ಎಂಜಿನಿಯರ್ ಆಗಿ ಅವರು ವೃತ್ತಿ ಜೀವನವನ್ನು ಆರಂಭಿಸಿದ್ದರು.



ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಮತ್ತು ತೆಲಂಗಾಣ ಅಂಚೆ ವೃತ್ತಗಳಲ್ಲಿ ವಿವಿಧ ಉನ್ನತ ಹುದ್ದೆಗಳಲ್ಲಿ ಅವರು ಕಾರ್ಯನಿರ್ವಹಿಸಿದ್ದಾರೆ.

2010ರಿಂದ 2015ರವರೆಗೆ ಭಾರತದ ವಿಶಿಷ್ಟ ಗುರುತು ಪ್ರಾಧಿಕಾರದ ಮಾಹಿತಿ ಕೇಂದ್ರದ ಮುಖ್ಯಸ್ಥರಾಗಿಯೂ ರಾಜೇಂದ್ರ ಕುಮಾರ್ ಕಾರ್ಯ ನಿರ್ವಹಿಸಿದ್ದಾರೆ.

ಪುಣೆ: ಎನ್‌ಡಿಎ ಕೆಡೆಟ್, ಬೆಂಗಳೂರಿನ ಪ್ರತ್ಯುಷ್ ಸಾವು

ಮುಂಬೈ: ಪುಣೆಯಲ್ಲಿರುವ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ (ಎನ್‌ಡಿಎ) ಕೆಡೆಟ್, ಬೆಂಗಳೂರಿನ ಜಿ.ಪ್ರತ್ಯುಷ್ (18) ತನ್ನ ಕೋಣೆಯಲ್ಲಿ ಕುಸಿದು ಬಿದ್ದು, ಸಾವನ್ನಪ್ಪಿದ ಘಟನೆ ಸಂಭವಿಸಿದೆ.

147ನೇ ಕೋರ್ಸ್‌ನ ಕೆಡೆಟ್ ಆಗಿದ್ದ ಪ್ರತ್ಯುಷ್, ಫೆ.7ರಂದು ಎನ್‌ಡಿಎ ಸೇರಿದ್ದ. ‘ಫೆ.8ರಂದು ಸಂಜೆ (ಮಂಗಳವಾರ) ಆತ ತನ್ನ ಕೋಣೆಯಲ್ಲಿದ್ದಾಗ ಕುಸಿದು ಬಿದ್ದ. ಆತನನ್ನು ಮಿಲಿಟರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಆಸ್ಪತ್ರೆ ತಲುಪುವ ಮುನ್ನವೇ ಆತ ಮೃತಪಟ್ಟಿದ್ದ. ಈ ಸಂಬಂಧ ತನಿಖೆಗೆ ಆದೇಶಿಸಲಾಗಿದೆ. ಸಾವಿನ ಕಾರಣ ತಿಳಿಯಲು ಮರಣೋತ್ತರ ಪರೀಕ್ಷೆಯನ್ನು ನಡೆಸಲಾಗಿದೆ’ ಎಂದು ಉತ್ತಮ ನಗರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಸುರೇಶ್ ಜೆಬಾಯ್ ಅವರು ತಿಳಿಸಿದ್ದಾರೆ.

ಪ್ರತ್ಯುಷ್ ಪಾರ್ಥಿವ ಶರೀರಕ್ಕೆ ಮಿಲಿಟರಿ ಗೌರವ ಸಲ್ಲಿಸಲಾಯಿತು ಎಂದು ರಕ್ಷಣಾ ಇಲಾಖೆ ಹೇಳಿಕೆ ಬಿಡುಗಡೆ ಮಾಡಿದೆ.

ಇಂದಿನಿಂದ ಹುಲಿ ಗಣತಿ

ಹನೂರು (ಚಾಮರಾಜನಗರ ಜಿಲ್ಲೆ): ಹುಲಿ ಸಂರಕ್ಷಿತ ಪ್ರದೇಶ ಎಂದು ಗುರುತಿಸಿಕೊಳ್ಳಲು ಸಜ್ಜಾಗಿರುವ ತಾಲ್ಲೂಕಿನ ಮಲೆ-ಮಹದೇಶ್ವರ ವನ್ಯಧಾಮದಲ್ಲಿ ಗುರುವಾರದಿಂದ 11 ದಿನ ಹುಲಿ ಗಣತಿ ನಡೆಯಲಿದೆ.

ವನ್ಯಧಾಮದ ಕೊಳ್ಳೇಗಾಲ ಹಾಗೂ ಹನೂರಿನ ಎರಡು ಉಪವಿಭಾಗದ ಏಳು ವಲಯಗಳಲ್ಲಿ ಏಕ ಕಾಲದಲ್ಲಿ ಗಣತಿ ನಡೆಯಲಿದೆ. ಈಗಾಗಲೇ ತರಬೇತಿ ನೀಡಲಾಗಿದ್ದು, ಗಣತಿಗೆ 300 ಸಿಬ್ಬಂದಿ ಬಳಸಿಕೊಳ್ಳಲಾಗುತ್ತಿದೆ.ಈಗಾಗಲೇ ಎರಡು ಹಂತದ ಗಣತಿ ಮುಗಿದಿದೆ. ಕ್ಯಾಮೆರಾ ಅಳವಡಿಸಿದ್ದ ಸಂದರ್ಭದಲ್ಲಿ ವನ್ಯಧಾಮದ ಏಳು ವಲಯಗಳಲ್ಲೂ ಹುಲಿಗಳು ಕಾಣಿಸಿಕೊಂಡಿವೆ ಎಂದು ಅರಣ್ಯಾಧಿಕಾರಿಗಳು ದೃಢಪಡಿಸಿದ್ದಾರೆ. ಸಿಬ್ಬಂದಿಗೆ ಮರಿಗಳು ಕಾಣಿಸಿಕೊಂಡಿವೆ. 2018ರಲ್ಲಿ ನಡೆದ ಗಣತಿ ಸಂದರ್ಭದಲ್ಲಿ 12 ಹುಲಿಗಳಿದ್ದವು. ಈ ಬಾರಿ ಅವುಗಳ ಸಂಖ್ಯೆ ಹೆಚ್ಚಾಗಿದೆ ಎನ್ನುತ್ತಾರೆ ಅರಣ್ಯಾಧಿಕಾರಿಗಳು.

ಪಶ್ಚಿಮ ವಿಭಾಗದ ಪೊಲೀಸರ ಕಾರ್ಯಾಚರಣೆ; ಒಟ್ಟು 7 ಆರೋಪಿಗಳ ಬಂಧನ

₹35.43 ಲಕ್ಷ ಮೌಲ್ಯದ 36 ದ್ವಿಚಕ್ರ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ವಿಭಾಗದ ಚಂದ್ರಾಲೇಔಟ್, ಕೆ.ಪಿ.ಅಗ್ರಹಾರ ಹಾಗೂ ಜಗಜೀವನ್‌ರಾಮ್ (ಜೆ.ಜೆ) ನಗರ ಠಾಣೆಗಳ ಪೊಲೀಸರು ಬೈಕ್ ಕಳ್ಳರ ಜಾಲ ಬೇಧಿಸಿದ್ದಾರೆ. ಮೂರು ಠಾಣೆಗಳ ವ್ಯಾಪ್ತಿಯಲ್ಲಿ ಒಟ್ಟು ಏಳು ಆರೋಪಿಗಳನ್ನು ಬಂಧಿಸಿ, ₹35.43 ಲಕ್ಷ ಮೌಲ್ಯದ 36 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ಚಂದ್ರಾಲೇಔಟ್ ಠಾಣೆ ಪೊಲೀಸರು ವಿಜಯ್ ಎಂಬಾತನನ್ನು ಬಂಧಿಸಿ ಆತನಿಂದ ₹5.23 ಲಕ್ಷ ಬೆಲೆಯ ಒಟ್ಟು 8 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

‘ವ್ಯಕ್ತಿಯೊಬ್ಬರು 2021ರ ಮೇ 29ರಂದು ಠಾಣೆ ವ್ಯಾಪ್ತಿಯ ಸಂಬಂಧಿಕರ ಮನೆ ಮುಂದೆ ಹೊಂಡಾ ಆ್ಯಕ್ಟಿವಾ ಸ್ಕೂಟರ್ ನಿಲ್ಲಿಸಿ ಊರಿಗೆ ಹೋಗಿದ್ದರು. ಅದು ಕಳವಾಗಿತ್ತು. ಈ ಕುರಿತು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿತ್ತು. ಮನೆ ಮುಂದೆ ನಿಲ್ಲಿಸಿರುತ್ತಿದ್ದ ದ್ವಿಚಕ್ರ ವಾಹನಗಳ ಹ್ಯಾಂಡ್‌ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದ ಮೂವರನ್ನು ಜೆ.ಜೆ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇವರಿಂದ ₹5.20 ಲಕ್ಷ ಮೌಲ್ಯದ 7 ವಾಹನಗಳನ್ನು ಜಪ್ತಿ ಮಾಡಲಾಗಿದೆ.

‘ಪಾದರಾಯನಪುರದ ಜಂಗ್ಲಿ ಮುಬಾರಕ್ (25), ಸಾದಿಕ್ (24) ಹಾಗೂ ಜಬೀರ್ (23) ಬಂಧಿತರು. ಸ್ನೇಹಿತರಾಗಿದ್ದ ಇವರು ಐಷಾರಾಮಿ ಜೀವನ ನಡೆಸುವ ಉದ್ದೇಶದಿಂದ ಬೈಕ್ ಕಳ್ಳತನ ಮಾಡುತ್ತಿದ್ದರು. 2021ರ ಡಿಸೆಂಬರ್ 31ರಂದು ವ್ಯಕ್ತಿಯೊಬ್ಬರು ತಮ್ಮ ಮನೆಯ ಮುಂದೆ ನಿಲ್ಲಿಸಿದ್ದ ಪಲ್ಸರ್ ಬೈಕ್ ಅನ್ನು ಆರೋಪಿಗಳು ಕಳವು ಮಾಡಿದ್ದರು. ಮೊದಲು ಇಬ್ಬರನ್ನು, ಅವರು ನೀಡಿದ ಮಾಹಿತಿ ಆಧಾರದಲ್ಲಿ ಮತ್ತೊಬ್ಬನನ್ನು ಬಂಧಿಸಲಾಗಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.



ಚಂದ್ರಾಲೇಔಟ್ ಪೊಲೀಸರು ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳು

ದುಬಾರಿ ಬೆಲೆಯ ಬೈಕ್‌ಗಳೇ ಇವರ ಗುರಿ

ಅಪರಾಧ ಸುದ್ದಿ

ದೇವಸ್ಥಾನಗಳ ಮುಂದೆ ನಿಲ್ಲಿಸಿರುತ್ತಿದ್ದ ಹಾಗೂ ವಾಹನ ನಿಲುಗಡೆ ಸ್ಥಳಗಳಲ್ಲಿ ಇರುತ್ತಿದ್ದ ದುಬಾರಿ ಬೆಲೆಯ ಬೈಕ್‌ಗಳನ್ನು ಕಳವು ಮಾಡುತ್ತಿದ್ದ ಮೂವರನ್ನು ಕೆ.ಪಿ.ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಹೊಸೂರಿನ ವೆಂಕಟೇಶ್ (23), ಗೋಪಿ (20) ಹಾಗೂ ಬೊಮ್ಮಸಂದ್ರದ ನಂದೀಶ (19) ಬಂಧಿತರು. ಇವರಿಂದ ₹25 ಲಕ್ಷ ಮೌಲ್ಯದ 21 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಇದೇ 2ರ ಸಂಜೆ 5 ಗಂಟೆಗೆ ವ್ಯಕ್ತಿಯೊಬ್ಬರು ದೇವಸ್ಥಾನದ ಎದುರು ಹೊಂಡಾ ಯೂನಿಕಾರ್ನ್ ಬೈಕ್ ನಿಲ್ಲಿಸಿ ಹೋಗಿದ್ದರು.

ಅವರು ದೇವರ ದರ್ಶನ ಮಾಡಿ ಬರುವಷ್ಟರಲ್ಲಿ ಬೈಕ್ ಕಾಣೆಯಾಗಿತ್ತು. ಕೃತ್ಯದಲ್ಲಿ ಭಾಗಿಯಾಗಿದ್ದ ಮೂವರನ್ನು ಪತ್ತೆಹಚ್ಚಿ ಬಂಧಿಸಿದ್ದೇವೆ. ಇವರು ಕೆ.ಪಿ. ಅಗ್ರಹಾರ, ಅನ್ನಪೂರ್ಣೇಶ್ವರಿನಗರ, ವಿಜಯನಗರ, ಬ್ಯಾಡರಹಳ್ಳಿ, ಚನ್ನಮ್ಮನಕೆರೆ ಅಚ್ಚುಕಟ್ಟು, ಹೆಬ್ಬಗೋಡಿ, ಮಾಲೂರು, ಸರ್ಜಾಪುರ, ವರ್ತೂರು, ಸೂರ್ಯನಗರ, ಚನ್ನಪಟ್ಟಣ ಹಾಗೂ ಮೈಸೂರು ಜಿಲ್ಲೆಯ ಕೃಷ್ಣರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದರು’ ಎಂದು ಮಾಹಿತಿ ನೀಡಿದರು.

ಮೊಬೈಲ್ ಕದ್ದು ಪರಾರಿಯಾಗಲು ಯತ್ನಿಸಿದ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್‌ನಲ್ಲಿ ಬಂದು ವ್ಯಕ್ತಿಯೊಬ್ಬರ ಕೈಯಲ್ಲಿದ್ದ ಮೊಬೈಲ್ ಕಸಿದುಕೊಂಡು ಪರಾರಿಯಾಗುತ್ತಿದ್ದ ಇಬ್ಬರನ್ನು ವಿ.ವಿ.ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ವಾಲ್ಮೀಕಿನಗರದ ಮಹಮ್ಮದ್ ಸಲ್ಮಾನ್ (30) ಹಾಗೂ ಕನಕನಗರದ ಹಫೀಜ್ ಷರೀಫ್ (38) ಬಂಧಿತರು. ಇವರಿಂದ ವಿವಿಧ ಕಂಪನಿಯ 25 ಮೊಬೈಲ್ ಹಾಗೂ ಕೃತ್ಯಕ್ಕೆ ಬಳಸಿದ್ದ ಬೈಕ್ ಜಪ್ತಿ ಮಾಡಲಾಗಿದೆ.

ಇವುಗಳ ಒಟ್ಟು ಮೌಲ್ಯ ₹5 ಲಕ್ಷ’ ಆಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಪ್ರಜಾವಾಣಿ


ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATION SUCCESS

ಪಿಎಚ್.ಡಿ ಪದವಿ ಪ್ರಧಾನ



ಬೆಂಗಳೂರು : ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ನಿಗಮ ಕಛೇರಿಯಲ್ಲಿ ಸಹಾಯಕ ಪ್ರಧಾನ ವ್ಯವಸ್ಥಾಪಕ (ಪ್ರ) ರಾಗಿರುವ ಚರಣ್ ಕುಮಾರ್ ಸಿ ರವರು, ಬೆಂಗಳೂರು ಸಿಟಿ ವಿಶ್ವವಿದ್ಯಾಲಯದ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ (CBSMS) ನ ಮುಖ್ಯಸ್ಥೆಯಾಗಿರುವ ಡಾ.ನಿರ್ಮಲ ಎಂ ರವರ ಮಾರ್ಗದರ್ಶನದಲ್ಲಿ ಮಂಡಿಸಿದ “Impact of Business Intelligence on Financial Efficiency of Indian Banking Sector : An Empirical Study” ಎಂಬ ಪ್ರೌಢ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ನೀಡಿ ಗೌರವಿಸಿದೆ.

RENTAL PROPERTIES

Accommodation Available

House

3-BHK HOUSE in 1st Floor for RENT at Banashankari 2nd Stage, Behind Manjunatha Temple. Call:9880509555

REAL ESTATE SELLING

Commerical

Jayanagar

JAYANAGAR COMMERCIAL Complex for Sale 100% Vastu 80 Feet Road, Contact : 8867278939.

JOB OPPORTUNITIES

Walk-in

MULTIPLE VACANCIES at Non Profit Organization Walk- in-interview • Administration and HR Manager • Communication Officer • Marketing Manager Eligibility: • MBA or PG in relevant disciplines with work experience.• Proficiency in English and computer skills. Job location: Chennekothapalli,Anantapur, Andhra Pradesh. Salary: 40-55 K Date: 12.02.2022 Time: 10 am to 4.30pm Address: Ashirvad, 30, St Marks Road, Bangalore-01. Note: Resume must Send resume to info@timbaktu.org. Ph: 8008299590

Multiple Vacancy

REQ, TEAM-LEADER, Telecaller, Backend & Field executive for For Banking Loan collection (salary upto 20,000 to 25,000). direct recruitment to company Contact:- 9620206756, 9620200756.

THE BANGALORE PRESS

(No.88, Mysore Road, Chamarajpet, Bangalore-18)
has opening for the below roles;

ROLE	REQUIREMENT
Senior/Junior Marketing Officers	Matriculates. 1+ years experience in field sales of consumer goods. Fluency in Kannada and English
Production Supervisor	2+ years experience in a production unit, preferably a paper/book industry
Proofreader	Excellent language reading skills in Kannada and English
Office Staff	Computer knowledge, including Microsoft Word, Excel

Please email details (including resume with your work experience and expected salary) to bangalorepressjobs@gmail.com

Marketing & Sales

NEED ASM For Cosmetics Company own manufacturing unit Aryan Sharma 9636964861.

PUBLIC NOTICE

PUBLIC NOTICE

Notice is hereby given that Sri. D. BASAVARAJ, S/o. Late Sri. Devendrappa, No. 62/1, Sri. Renuka Nivas, Viviyani Road, Frazer Town, Bangalore - 05, having contracted to sell the schedule property to my client, any person/s claiming any right or interest on the said property, or any part thereof, by way of sale, exchange, mortgage, gift, lease, lien, trust, inheritance, bequest, possession, easement, acquisition, requisition, notice or other wise, is hereby required to contact the undersigned with in 14 days, as otherwise the said sale will be completed without any further reference or regard to any such purported claim/s or interest/s or right/s, which shall be deemed to have been waived off to all intents and purposes.

SCHEDULE PROPERTY

All that piece and parcel of the property No. 23, Khatha No. 153, Survey No. 80, Kacharakanahalli Village, Kasaba Hobli, Bangalore North Taluk, BBMP Pid No. 566/153/80/23, Measuring East 50 feet, West 50 feet, North 80 feet & South 80 feet bounded on the East by 40 feet Road, West by Property No. 4, North by Property No. 22 & South by Property No. 24.

AYUB KHAN KASIM,
Advocate
Roll No. KAR/ 633/ 98
No.66, L. M. Street,
Commercial Street
2nd Cross,
Bangalore-01.
98455 60377 /
94825 08433
ayubkhank@gmail.com

COURT NOTICE

BEFORE THE DISTRICT CONSUMER DISPUTES REDRESSAL COMMISSION (DISTRICT COMMISSION-I) UNION TERRITORY, CHANDIGARH PLOT NO 5-B, SECTOR 19-B, MADHYA MARG, CHANDIGARH-160019 Phone No. 0172-2700172

Complainant Case No, 5 of 2020
Priya Ubhan aged about 31 years, resident of House No -5408, Sector - 38 (west), Chandigarh -160036.
Complainant(s)

Versus

1. iCert, Global through its Managing Director / Chairman 4th Floor, Uma Admiralty, Above HDFC Bank, Bannerghatta Road, Diagonally Opposite Jal Bhavan near Sagar Hospital, Bengaluru Karnataka-560029. India. **(O.P. No. 1)**
2. Karthik KJ (Learning Consultant), iCert Global, 4th Floor, Uma Admiralty, Above HDFC Bank, Bannerghatta Road, Diagonally Opposite Jal Bhavan near Sagar Hospital, Bengaluru Karnataka-560029, India. **(O.P. No 2)**
3. Irfan Baig, iCert Global, 4th Floor, Uma Admiralty, Above HDFC Bank, Bannerghatta Road, Diagonally Opposite Jal Bhavan near Sagar Hospital, Bengaluru Karnataka-560029, India. **(O.P. No 3)**

Opposite Parties

Whereas in the above noted case, it has been proved to the satisfaction of this Commission that the above noted **opposite parties no. 1 to 3** cannot be served through the ordinary process. Hence a proclamation under Order 5Rule 20 of the Code of Civil Procedure, 1908, is being published, for effecting their service, with direction to appear before this Commission on **22nd February 2022 at 10:30 A.M.**, in person or through pleader or duly authorized agent, falling which ex-parte proceedings shall be initiated against them, in accordance with law. Given under my hand and seal at this Commission on 03rd day of December 2021.

Sd/-
President
District Consumer Disputes Redressal Commission-I,
U. T. Chandigarh

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

PERSONAL

Change of Name

I, JAYACELAN R. S/o. Raghunathan T. R/a #351, 6th Cross, SRY Layout, Vaddarapalya, Begur- Koppa Road, Bangalore- 560068 Declare That JAYACEALAN R., JAYASHEELAN R., JAYACELAN R., JAYASELAN R. Above All Names are Belongs to me Only, Henceforth, Known as JAYACELAN R. vide Affidavit Dated: 31.01.2022 Before Notary Dharani. P., Bengaluru-68.

I, CHITRA M. W/o. JAYACELAN R. R/a #351, 6th Cross, SRY Layout, Vaddarapalya, Begur- Koppa Road, Bangalore- 560068 Declare That CHITRA M., CHITHRA M., CHITHRA M., Above All Names are Belongs to me Only, Henceforth, Known as CHITRA. M. vide Affidavit Dated: 31.01.2022 Before Notary Dharani. P., Bengaluru-68.

I, POOJA M.B., aged 29 years, W/o. Haygreev Chincholi Venkatesh, residing at No. 1449, 3rd Cross, 1st Stage, 2nd Phase, Chandra Layout, Bangalore-560040, have changed my name from POOJA. M.B. to POOJA HAYGREEV, vide Affidavit dated 07.02.2022, sworn before Advocate & Notary G.S SUSHEELA, Bangalore.

I, SWAMYKANNAN PRAMILA R/at No.02, 6th Cross, Anjeneya Temple Street Xavier layout Bengaluru -560047 have changed my name to PHILOMINA KANAKARAJ vide affidavit dated: 9/2/2022 Before Notary B.M. Chandrashekar Bangalore.

I, SUNAINA Kapoor D/o. Late Shri Rama Kant Paliwal, W/o. Ishan Kapoor, R/at. #105/3, GTOC, Cambridge Road, Gowthamapuram, Jogupalya, Bengaluru-560007 have changed my name from SUNAINA PALIWAL to SUNAINA KAPOOR vide affidavit dated 09/02/2022 before notary S. Ramesh, Bengaluru.

Lost

I, AADITHYA. H. (DOB: 13.09.2002) S/o. Hariharan A. and Geetha. S. R/a #305, 7th Cross, Domlur Layout, Bangalore- 560071 Have Lost My 10th Original Marks Card, Studied in Lawrence High School, Bengaluru. Unique ID 6996693 in The Year 2019, Issued by Council For The Indian School Certificate Examinations, New Delhi, Vide Certificate No. TF 30180167 Lost On: 15.11.2021 While Take a Xerox Copies at Domlur, Bangalore. If anybody found Please Call: 9880194028 OR Nearby Police Station.

THIS IS notified for the information that my original qualifying examination certificate of GNM 2007 and roll number 03 DN 13730 issued by Karnataka state diploma in nursing examination board with mark list have been actually lost. The name of the candidate, Dilip Thomas P, son of Thomas Benny, Puthenveedu, Nadukkunnu, Pathanapuram (P.O), 689695, Kollam, Kerala. Ph: 09847169979.

DOCUMENTS LOST

I, **P. Madhan Raj**, Residing at No 20/53 Muthu street Royapettah chennai- 600014. have LOST my Original property document **No.806/1992 situated at 9/29 Valayalkara Street Ambur,** on 04.02.2022 while travelling on Auto, near Banaswadi, Bangalore. **Finders please contact: +91 86101 78177**

ಮಸೀದಿ ಎದುರು ಪ್ರಚೋದನಕಾರಿ ವರ್ತನೆ: 10 ಮಂದಿ ವಶಕ್ಕೆ

ಬಾಗಲಕೋಟೆ: ಇಲ್ಲಿನ ನವನಗರದ ಸೆಕ್ಟರ್ ನಂ.38ರಲ್ಲಿನ ಮಸೀದಿ ಬಳಿ ಬುಧವಾರ ಸಂಜೆ ಪ್ರಚೋದನಕಾರಿಯಾಗಿ ವರ್ತಿಸಿದ ಕೇಸರಿ ಧ್ವಜ ಕಟ್ಟಿದ್ದ ಬೈಕ್‌ಗಳ ಗುಂಪಿನಲ್ಲಿದ್ದ ಯುವಕನೊಬ್ಬನನ್ನು ಸ್ಥಳೀಯರು ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಈ ವೇಳೆ ಮಸೀದಿ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ ಎಂಬ ಸುದ್ದಿ ಹರಡಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಸ್ಥಳದಲ್ಲಿ ಜಮಾಯಿಸಿದ್ದ ಹಿಂದೂ ಹಾಗೂ ಮುಸ್ಲಿಂ ಸಮುದಾಯದ ಗುಂಪುಗಳನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದಾರೆ. ಪ್ರಚೋದನಕಾರಿಯಾಗಿ ವರ್ತಿಸಿದ್ದ ಶಿಕ್ಕೇರಿ ಗ್ರಾಮದ ಅಭಿಷೇಕ್ ಎಂಬ ಯುವಕನನ್ನು ಹಿಡಿದು ಥಳಿಸಿ, ನವನಗರ ಠಾಣೆ ಪೊಲೀಸರಿಗೆ ಆರೋಪಿಯನ್ನು ಒಪ್ಪಿಸಿದ್ದಾರೆ.

'ಮಸೀದಿ ಎದುರು ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿನ ದೃಶ್ಯಾವಳಿ ಪರಿಶೀಲಿಸಿದ್ದು, ಕಲ್ಲು ತೂರಾಟ ನಡೆದಿಲ್ಲ. ಬದಲಿಗೆ ಯುವಕರ ಗುಂಪು ಪ್ರಚೋದನಕಾರಿಯಾಗಿ ವರ್ತಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 10 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಯುವಕನ ಮೇಲೆ ಹಲ್ಲೆ ನಡೆಸಿದವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು' ಎಂದು ಎಸ್ಪಿ ಲೋಕೇಶ ಜಗಲಾಸರ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಬಿಎಂಪಿ: ₹ 118.26 ಕೋಟಿ ಅಕ್ರಮ: ಲೋಕಾಯುಕ್ತದಿಂದ ಸರ್ಕಾರಕ್ಕೆ ಶಿಫಾರಸು

'ಕಾಮಗಾರಿ ಕೆಆರ್‌ಐಡಿಎಲ್‌ಗೆ ವಹಿಸಬೇಡಿ'

● ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜರಾಜೇಶ್ವರಿ ನಗರ (ಆರ್.ಆರ್. ನಗರ) ಕ್ಷೇತ್ರದಲ್ಲಿ 114 ಕಾಮಗಾರಿಗಳನ್ನು ನಿರ್ವಹಿಸದೆಯೇ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ₹ 118.26 ಕೋಟಿ ಹೆಚ್ಚುವರಿ ಪಾವತಿ ಮಾಡಿ ಅಕ್ರಮ ಎಸಗಿದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಲೋಕಾಯುಕ್ತ, ಇನ್ನು ಮುಂದೆ ಬೃಹತ್ ಬೆಂಗಳೂರು ಮಹಾನಗರ-ಪಾಲಿಕೆ (ಬಿಬಿಎಂಪಿ) ಯಾವುದೇ ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸಬಾರದು ಎಂದು ಶಿಫಾರಸು ಮಾಡಿದೆ.

'ಆರ್.ಆರ್. ನಗರ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸದೆ ₹ 250 ಕೋಟಿ ಭ್ರಷ್ಟಾಚಾರ ಎಸಗಲಾಗಿದೆ' ಎಂದು ಆರೋಪಿಸಿ ದಾಖಲೆಗಳ ಸಹಿತ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್, ಲೋಕಾಯುಕ್ತರಿಗೆ ದೂರು ನೀಡಿದ್ದರು. ಈ ಬಗ್ಗೆ ತನಿಖೆ ನಡೆಸಿದ್ದ ಲೋಕಾಯುಕ್ತ ನ್ಯಾಯಮೂರ್ತಿ ಪಿ.ವಿಶ್ವನಾಥ ಶೆಟ್ಟಿ ಅವರು ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಸಿದ್ದಾರೆ.

'ಒಟ್ಟು 126 ಕಾಮಗಾರಿಗಳಲ್ಲಿ 114 ಕಾಮಗಾರಿಗಳ ಅನುಷ್ಠಾನದಲ್ಲಿ ಭಾರಿ ಲೋಪ ಆಗಿದೆ. ಕೆಆರ್‌ಐಡಿಎಲ್ ನಿರ್ವಹಿಸುವ ಕಾಮಗಾರಿಗಳ ಮೇಲೆ ನಿಗಾ ಇರಿಸಬೇಕಾದ ಬಿಬಿಎಂಪಿ ಅಧಿಕಾರಿಗಳೇ ಈ ಲೋಪಕ್ಕೆ ಮುಖ್ಯ ಕಾರಣ' ಎಂದು ವರದಿಯಲ್ಲಿದೆ.

'ಸರ್ಕಾರದ ಅನುದಾನದ ದುರ್ಬಳಕೆ ತಪ್ಪಿಸಿ ಗುಣಮಟ್ಟದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾದುದು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಕರ್ತವ್ಯ. ಎರಡು ವರ್ಷಗಳಲ್ಲಿ ಬಿಬಿಎಂಪಿಯು ಕೆಆರ್‌ಐಡಿಎಲ್‌ಗೆ ವಹಿಸಿ ಅನುಷ್ಠಾನಗೊಂಡಿರುವ ಅಥವಾ ಅನುಷ್ಠಾನದ ಹಂತದಲ್ಲಿರುವ ಒಟ್ಟು ಕಾಮಗಾರಿಗಳಲ್ಲಿ ಶೇ 10ರಷ್ಟನ್ನು ಸಮೀಕ್ಷೆ ನಡೆಸಲು ಉನ್ನತ ಅಧಿಕಾರಿಯ ನೇತೃತ್ವದಲ್ಲಿ ತಜ್ಞರ ವಿಶೇಷ ಸಮಿತಿಯೊಂದನ್ನು ರಚಿಸಬೇಕು ಅಥವಾ ಪರ್ಯಾಯವಾಗಿ, ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 7(2ಎ) ಅಡಿ, ಸರ್ಕಾರ ತನ್ನ ಅಧಿಕಾರವನ್ನು ಚಲಾಯಿಸಿ, ಕಳೆದ ಎರಡು ವರ್ಷಗಳಲ್ಲಿ ಕೆಆರ್‌ಐಡಿಎಲ್‌ಗೆ ಬಿಬಿಎಂಪಿ ವಹಿಸಿ ಪೂರ್ಣಗೊಳಿಸಿದ ಅಥವಾ ಪ್ರಗತಿಯಲ್ಲಿರುವ ಎಲ್ಲ ಕಾಮಗಾರಿಗಳನ್ನು ತನಿಖೆಗಾಗಿ ಲೋಕಾಯುಕ್ತಕ್ಕೆ ವಹಿಸಬೇಕು' ಎಂದೂ ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

'ತಕ್ಷಣ ಕಪ್ಪು ಪಟ್ಟಿಗೆ ಸೇರಿಸಿ'

'ಟೆಂಡರ್‌ನಲ್ಲಿ ನಿರ್ದಿಷ್ಟಪಡಿಸಿದಂತೆ ಕಾಮಗಾರಿಗಳು ಅನುಷ್ಠಾನಗೊಂಡಿವೆ ಎಂದು ಗುಣಮಟ್ಟ ತಪಾಸಣೆ ನಡೆಸಿದ ತಟಸ್ಥ ಸಂಸ್ಥೆ 'ಸಿವಿಲ್ ಸ್ಕ್ವೇರ್ ಕನ್ಸಲ್ಟಂಟ್ಸ್' (ಸಿವಿಲ್ ಎಂಜಿನಿಯರಿಂಗ್ ಕನ್ಸಲ್ಟಂಟ್ಸ್) ವರದಿ ನೀಡಿದೆ ಎಂದು ಲೋಕಾಯುಕ್ತಕ್ಕೆ ಕೆಆರ್‌ಐಡಿಎಲ್ ಮಾಹಿತಿ ನೀಡಿದೆ. ಆದರೆ, ಕಾಮಗಾರಿಯ ಗುಣಮಟ್ಟ ತಪಾಸಣೆಯನ್ನು ನಡೆಸದೆಯೇ, ಕಣ್ಣು ಮುಚ್ಚಿ ಸಂಸ್ಥೆ ತನ್ನ ವರದಿ ನೀಡಿತ್ತು ಎಂಬ ಅಂಶ ತನಿಖೆಯಿಂದ ಬಹಿರಂಗವಾಗಿದೆ. ಹೀಗಾಗಿ, ಬಿಬಿಎಂಪಿ ಮತ್ತು ಕೆಆರ್‌ಐಡಿಎಲ್ ತಕ್ಷಣದಿಂದಲೇ ಈ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಅಲ್ಲದೆ, ತಪಾಸಣೆ ನಡೆಸುವ ತಟಸ್ಥ ಸಂಸ್ಥೆಗಳ ಪಟ್ಟಿಯಿಂದಲೇ ಈ ಸಂಸ್ಥೆಯನ್ನು ತೆಗೆದುಹಾಕಬೇಕು. ರಾಜ್ಯ ಸರ್ಕಾರ ಕೂಡಾ ಯಾವುದೇ ಕಾಮಗಾರಿಯ ತಪಾಸಣೆಯ ಹೊಣೆಯನ್ನು ಈ ಸಂಸ್ಥೆಗೆ ನೀಡಬಾರದು' ಎಂದು ತನಿಖಾ ವರದಿಯಲ್ಲಿ ಲೋಕಾಯುಕ್ತರು ನಿರ್ದೇಶನ ನೀಡಿದ್ದಾರೆ.

ಆರ್.ಆರ್. ನಗರ ಮೊಗೆದಷ್ಟು ಅಕ್ರಮ

ಕೋಮುದಳ್ಳುರಿ ಸೃಷ್ಟಿಗೆ ವಿದ್ಯಾರ್ಥಿಗಳ ಬಳಕೆ; ಧ್ರುವನಾರಾಯಣ

ಚಾಮರಾಜನಗರ: 'ರಾಜ್ಯದಲ್ಲಿ ಹಿಜಾಬ್- ಕೇಸರಿ ಶಾಲು ವಿವಾದಕ್ಕೆ ಕಾರಣವಾಗಿರುವ ಬಿಜೆಪಿಯು ಮುಗ್ಧ ವಿದ್ಯಾರ್ಥಿಗಳನ್ನು ಬಳಸಿಕೊಂಡು ಕೋಮುದಳ್ಳುರಿ ಸೃಷ್ಟಿಸಿ ಮತಗಳನ್ನು ಸೆಳೆಯಲು ಪ್ರಯತ್ನಿಸುತ್ತಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಬುಧವಾರ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಾಲೆ-ಕಾಲೇಜುಗಳಲ್ಲಿ ಸಾಮರಸ್ಯವಿತ್ತು. ಗಣೇಶೋತ್ಸವ, ಹೋಳಿ ಹಬ್ಬಗಳನ್ನು ಎಲ್ಲರೂ ಸೇರಿ ಆಚರಿಸುತ್ತಿದ್ದ ಸೌಹಾರ್ದ ವಾತಾವರಣವನ್ನು ಬಿಜೆಪಿ ಕಲುಷಿತಗೊಳಿಸಿದೆ' ಎಂದು ದೂರಿದರು.

'ಮುಸ್ಲಿಂ ವಿದ್ಯಾರ್ಥಿನಿಯರು ಹಿಂದಿನಿಂದಲೂ ಹಿಜಾಬ್ ಹಾಕಿಕೊಂಡೇ ಶಾಲೆ ಕಾಲೇಜಿಗೆ ಬರುತ್ತಿದ್ದಾರೆ. ಆದರೆ, ಕೆಲವು ದಿನಗಳಿಂದ ಈ ಸಮಸ್ಯೆ ಉಂಟಾಗಿದೆ. ಬಿಜೆಪಿ ಮುಖಂಡರು ಹಿನ್ನೆಲೆಯಲ್ಲಿದ್ದುಕೊಂಡು ವಿವಾದವನ್ನು ಹುಟ್ಟುಹಾಕುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಕಾಣುತ್ತಿದ್ದು, ಜನರ ದಿಕ್ಕು ತಪ್ಪಿಸಲು ಯತ್ನಿಸುತ್ತಿದ್ದಾರೆ' ಎಂದು ದೂರಿದರು.

ಹೆಸರಘಟ್ಟ ಮುಖ್ಯ ರಸ್ತೆ ಅಭಿವೃದ್ಧಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಲು ಗುಂಡಿಗಳ ಹಾದಿಯಾಗಿದ್ದ ಹೆಸರಘಟ್ಟ ಮುಖ್ಯರಸ್ತೆ ಅಭಿವೃದ್ಧಿಗೆ ಕೊನೆಗೂ ಕಾಲ ಕೂಡಿ ಬಂದಿದೆ. ₹15 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡುವ ಕಾಮಗಾರಿಗೆ ಬುಧವಾರ ಚಾಲನೆ ದೊರೆತಿದೆ.

ತುಮಕೂರು ರಸ್ತೆಯ 8ನೇ ಮೈಲಿಯಿಂದ ಚಿಕ್ಕಬಾಣಾವರ ವೃತ್ತದ ತನಕದ ರಸ್ತೆ ಮೇಲ್ದರ್ಜೆಗೇರಿಸುವ ಕೆಲಸಕ್ಕೆ ದಾಸರಹಳ್ಳಿ ಶಾಸಕ ಆರ್. ಮಂಜುನಾಥ್ ಚಾಲನೆ ನೀಡಿದರು. ಒಳಚರಂಡಿ, ಬೀದಿದೀಪ ಅಳವಡಿಕೆ ಮತ್ತು ಗುಣಮಟ್ಟದ ಡಾಂಬರು ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪುಗೊಂಡಿದೆ.


ರಸ್ತೆ ಅಭಿವೃದ್ಧಿ ಕಾಮಗಾರಿಗೆ 8ನೇ ಮೈಲಿ ಬಳಿ ಶಾಸಕ ಆರ್.ಮಂಜುನಾಥ್ ಚಾಲನೆ ನೀಡಿದರು. ಮುಖಂಡರಾದ ಮುನಿಸ್ವಾಮಣ್ಣ, ಕೆ.ಸಿ. ವೆಂಕಟೇಶ್, ಬಿ.ಎನ್.ಜಗದೀಶ್, ಚರಣ್‌ಗೌಡ, ತಮ್ಮಣ್ಣ, ಹನುಮಂತರಾಜು, ಗೋಪಾಲ್, ಸಿ.ಜೆ.ರಮೇಶ್ ಇದ್ದರು

ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ವಾಹನ ಚಾಲನೆ ಮಾಡುವುದೆಂದರೆ ಸಾಹಸದ ಕೆಲಸವಾಗಿತ್ತು. ಹೆಜ್ಜೆ ಹೆಜ್ಜೆಗೂ ಸಿಗುವ ಗುಂಡಿಗಳನ್ನು ತಪ್ಪಿಸಿ ವಾಹನ ಚಾಲನೆ ಮಾಡಲು ಸಾಧ್ಯವೇ ಇಲ್ಲದ ಸ್ಥಿತಿ ಇತ್ತು. ರಸ್ತೆ ಮಧ್ಯದಲ್ಲಿ ಇದ್ದ ಕುಡಿಯುವ ನೀರು ಸರಬರಾಜಿನ ಪೈಪ್‌ಲೈನ್ ದುರಸ್ತಿಪಡಿಸಲು ಜಲಮಂಡಳಿ ಅಧಿಕಾರಿಗಳು ಗುಂಡಿ ತೋಡಿದ್ದರು.

ತಿಂಗಳು ಕಳೆದರೂ ಗುಂಡಿ ಮುಚ್ಚದಿದ್ದರಿಂದ 2021ರ ಸೆ.1ರಂದು ಮಲ್ಲಸಂದ್ರದ ದ್ವಿಚಕ್ರ ವಾಹನ ಸವಾರ ಆನಂದ್ ಇದೇ ಗುಂಡಿಗೆ ಬಿದ್ದು ಮೃತಪಟ್ಟಿದ್ದರು. ಬೈಕ್ ಸವಾರ ಮೃತಪಟ್ಟರೂ ಗುಂಡಿ ಮುಚ್ಚದಿರುವ ಬಗ್ಗೆ ಮತ್ತು 8ನೇ ಮೈಲಿಯಿಂದ ಚಿಕ್ಕಬಾಣಾವರ ತಲುಪಲು ವಾಹನ ಸವಾರರ ಪ್ರಯಾಸದ ಬಗ್ಗೆ 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.

'ಕ್ಷೇತ್ರದಲ್ಲಿ ಒಟ್ಟು ₹48 ಕೋಟಿ ಮೊತ್ತದ ಕಾಮಗಾರಿಗೆ ಚಾಲನೆ ನೀಡಲಾಗಿದೆ' ಎಂದು ಮಂಜುನಾಥ್ ತಿಳಿಸಿದರು.

'110 ಹಳ್ಳಿ ಯೋಜನೆಯಡಿ ಒಳಚರಂಡಿ ಮತ್ತು ಕಾವೇರಿ ನೀರಿನ ಪೈಪ್‌ಲೈನ್ ಅಳವಡಿಕೆಗೆ ಅಗೆದಿದ್ದ ರಸ್ತೆಗಳ ಮರು ನಿರ್ಮಾಣಕ್ಕೆ ₹18 ಕೋಟಿ ಮೊತ್ತದ ಕಾಮಗಾರಿಗೂ ಚಾಲನೆ ನೀಡಲಾಗಿದೆ. ಇದಲ್ಲದೇ ವಾರ್ಡ್ ರಸ್ತೆಗಳ ಅಭಿವೃದ್ಧಿಗೆ ₹15 ಕೋಟಿ ಮೊತ್ತದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ' ಎಂದು ವಿವರಿಸಿದರು.


'ಖಾಸಗಿ ಆಸ್ಪತ್ರೆಗಳ ಹಾಸಿಗೆ ಹಂಚಿಕೆ ಸ್ಥಗಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆ ಆಗಿರುವುದರಿಂದ ಖಾಸಗಿ ಆಸ್ಪತ್ರೆಗಳ ಹಾಸಿಗೆಗಳನ್ನು ತನ್ನ ತೆಕ್ಕೆಗೆ ಪಡೆದು ಹಂಚಿಕೆ ಮಾಡುವ ವ್ಯವಸ್ಥೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲು ಬಿಬಿಎಂಪಿ ಮುಂದಾಗಿದೆ.


ಗೌರವ್ ಗುಪ್ತ

ಸುದ್ದಿಗಾರರ ಜೊತೆಗೆ ಬುಧವಾರ ಮಾತನಾಡಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ, 'ಖಾಸಗಿ ಆಸ್ಪತ್ರೆಗಳ ಹಾಸಿಗೆಗಳನ್ನು ಬಿಬಿಎಂಪಿ ತೆಕ್ಕೆಗೆ ಪಡೆದು ಹಂಚಿಕೆ ಮಾಡುವ ವ್ಯವಸ್ಥೆಯನ್ನು ಮುಂದುವರಿಸುವ ಅವಶ್ಯಕತೆ ಸದ್ಯಕ್ಕೆ ಇಲ್ಲ. ಹಾಗಾಗಿ ಪಾಲಿಕೆ ಈ ಕಾರ್ಯವನ್ನು ಕೈಬಿಡಲಿದೆ. ಕೋವಿಡ್ ಸೋಂಕಿತರು ನೇರವಾಗಿ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಬಹುದು' ಎಂದರು.



'ಕೊರೊನಾ ಮೂರನೇ ಅಲೆ ಎಷ್ಟು ವೇಗವಾಗಿ ಹೆಚ್ಚಳವಾಗಿತ್ತೋ, ಅಷ್ಟೇ ವೇಗವಾಗಿ ಕಡಿಮೆ ಆಗಿದೆ. ಆದರೆ, ಈಗಲೂ ಅಪಾಯದಿಂದ ಪೂರ್ತಿಯಾಗಿ ಹೊರಬಂದಿದ್ದೇವೆ ಎನ್ನಲಾಗದು' ಎಂದು ತಿಳಿಸಿದರು.

ಕೆರೆ ಒತ್ತುವರಿ ತೆರವಿನ ಕುರಿತು ಪ್ರತಿಕ್ರಿಯಿಸಿದ ಗೌರವ್ ಗುಪ್ತ, 'ಕೆರೆಗಳ ಒತ್ತುವರಿ ಸಮೀಕ್ಷೆ ಪೂರ್ಣಗೊಂಡಿದೆ. ನಗರದಲ್ಲಿ ಕಂದಾಯ ಇಲಾಖೆ ವ್ಯಾಪ್ತಿಯ ಕೆರೆಗಳ ಜಮೀನು ಹೆಚ್ಚು ಇದ್ದು, ಒತ್ತುವರಿ ತೆರವಿಗೆ ಜಿಲ್ಲಾಧಿಕಾರಿ ನೇತೃತ್ವದಲ್ಲೇ ಕಾರ್ಯಾಚರಣೆಗಳು ನಡೆಯುತ್ತಿವೆ. ಬಿಬಿಎಂಪಿ ಆಸ್ತಿ ವಿಭಾಗದ ತಹಶೀಲ್ದಾರ್ ಹಾಗೂ ಸರ್ವೆಯರ್‌ಗಳು ಹಾಗೂ ವಲಯ ಮಟ್ಟದ ಅಧಿಕಾರಿಗಳು ಅನಧಿಕೃತ ಒತ್ತುವರಿ ಗುರುತಿಸಿ, ತೆರವಿಗೆ ಕ್ರಮ ಕೈಗೊಳ್ಳುತ್ತಿದ್ದಾರೆ' ಎಂದರು.

'ಕರಗ: ಪರಿಶೀಲಿಸಿ ಕ್ರಮ'

ಧರ್ಮರಾಯಸ್ವಾಮಿ ದೇವಸ್ಥಾನದ ಕರಗ ಆಚರಣೆಗೆ ಅವಕಾಶ ಕಲ್ಪಿಸುವಂತೆ ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್ ಪ್ರಸ್ತಾವನೆ ಸಲ್ಲಿಸಿರುವ ಕುರಿತು ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ರಮೇಶ್ ಅವರು ಕಳೆದ ವರ್ಷವೂ ಈ ಕುರಿತು ಪ್ರಸ್ತಾವನೆ ಸಲ್ಲಿಸಿದ್ದರು. 2021ರ ಮಾರ್ಚ್ ಹಾಗೂ ಏಪ್ರಿಲ್‌ನಲ್ಲಿ 3-4 ಸಭೆಗಳನ್ನು ನಡೆಸಿದ್ದೆವು. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಿದ್ದರಿಂದ ಕರಗ ಆಚರಣೆಯಲ್ಲಿ ಸಾರ್ವಜನಿಕರು ಭಾಗವಹಿಸುವುದಕ್ಕೆ ಅವಕಾಶ ನೀಡಲು ಸಾಧ್ಯವಾಗಿರಲಿಲ್ಲ. ಆದರೆ, ಸಾಂಪ್ರದಾಯಿಕ ಹಾಗೂ ಧಾರ್ಮಿಕ ವಿಧಿಗಳನ್ನು ನಡೆಸಿದ್ದೆವು. ಈ ಬಾರಿ ಪರಿಶೀಲಿಸಿ ಕ್ರಮಕೈಗೊಳ್ಳುತ್ತೇವೆ' ಎಂದರು.

'ಹಿಜಾಬ್: ಹೈಕೋರ್ಟ್ ತೀರ್ಮಾನಕ್ಕೆ ಕಾಯಲಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆ, ಕಾಲೇಜುಗಳಲ್ಲಿ ಹಿಜಾಬ್– ಕೇಸರಿ ಶಾಲು ಧರಿಸುವುದಕ್ಕೆ ಅವಕಾಶ ಕೋರಿ ವಿದ್ಯಾರ್ಥಿಗಳು ಸಂಘರ್ಷಕ್ಕೆ ಇಳಿದಿರುವ ವಿಚಾರದಲ್ಲಿ ಹೈಕೋರ್ಟ್ ತೀರ್ಮಾನಕ್ಕೆ ಕಾಯಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.


ಜೆ.ಸಿ.ಮಾಧುಸ್ವಾಮಿ

ಬುಧವಾರ ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಹಿಜಾಬ್ ಧರಿಸಲು ಅವಕಾಶ ನೀಡಬೇಕೆಂಬ ಬೇಡಿಕೆ ಮತ್ತು ನಂತರದ ಬೆಳವಣಿಗೆಗಳ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವುದರಿಂದ ಯಾವುದೇ ನಿಲುವು ಪ್ರಕಟಿಸದೇ ಇರಲು ನಿರ್ಧರಿಸಲಾಗಿದೆ' ಎಂದರು.

ಸಂಪುಟ ಸಭೆಯಲ್ಲಿ ಹೆಚ್ಚೇನೂ ಚರ್ಚೆ ಮಾಡಿಲ್ಲ. ಸರ್ಕಾರ ನ್ಯಾಯಾಲಯದ ತೀರ್ಮಾನವನ್ನು ಕಾಯಲಿದೆ. ಆ ಬಳಿಕವೇ ಮುಂದಿನ ನಿರ್ಧಾರಕ್ಕೆ ಬರಲಾಗುವುದು ಎಂದು ಹೇಳಿದರು.

ಶಾಲೆ, ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯಗೊಳಿಸುವ ಆದೇಶ 1981ರಿಂದಲೂ ಇತ್ತು. ಈಗ ಏಕಾಏಕಿ ಈ ರೀತಿಯ ಬೆಳವಣಿಗೆ ಏಕೆ ನಡೆಯಿತು ಎಂಬುದು ಗೊತ್ತಿಲ್ಲ. ಸಮವಸ್ತ್ರ ಕಡ್ಡಾಯದ ಆದೇಶ ಪಾಲನೆಗೆ ಸರ್ಕಾರ ಕ್ರಮ ಕೈಗೊಂಡಿದೆ ಎಂದರು.

ಹಿಜಾಬ್ ಪ್ರಕರಣ ನಿರ್ವಹಿಸುವಲ್ಲಿ ಸರ್ಕಾರ ವಿಫಲ: ಎಚ್‌ಡಿಕೆ

ಬೆಂಗಳೂರು: 'ಹಿಜಾಬ್ ಮತ್ತು ಕೇಸರಿ ಶಾಲು ಪ್ರಕರಣವನ್ನು ಸರ್ಕಾರ ಸರಿಯಾಗಿ ನಿಭಾಯಿಸಿದ್ದರೆ ಈ ವಿವಾದ ದ್ವೇಷಕ್ಕೆ ತಿರುಗುತ್ತಿರಲಿಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

'ಉದ್ವಿಗ್ನ ಪರಿಸ್ಥಿತಿ ಸೃಷ್ಟಿಯಾದ ಬಳಿಕ ಸರ್ಕಾರ ಶಾಲೆ– ಕಾಲೇಜುಗಳಿಗೆ ರಜೆ ಘೋಷಿಸಿದೆ. ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರೆ ಏನು ಪ್ರಯೋಜನ' ಎಂದು ಅವರು ಬುಧವಾರ ಪ್ರಶ್ನಿಸಿದ್ದಾರೆ. 'ಆರಂಭದಲ್ಲಿಯೇ ವಿವಾದವನ್ನು ಸೂಕ್ಷ್ಮವಾಗಿ ಗಮನಿಸಿ ಹತ್ತಿಕ್ಕಬೇಕಿತ್ತು. ಹಾಗೆ ಮಾಡಿದ್ದಿದ್ದರೆ ವಿವಾದ ಇಷ್ಟೊಂದು ತೀವ್ರವಾಗಿ ಬೆಳೆಯುತ್ತಿರಲಿಲ್ಲ' ಎಂದರು.

'ಈ ಬೆಳವಣಿಗೆಯ ಹಿಂದೆ ಹಿಂದೂ ಮತ್ತು ಮುಸ್ಲಿಂ ಸಂಘಟನೆಗಳಿವೆ ಎಂಬ ಮಾಹಿತಿ ಇದೆ. ಇವುಗಳಿಂದಾಗಿಯೇ ಸಮಾಜದಲ್ಲಿ ದ್ವೇಷ ಭಾವನೆ ಹುಟ್ಟಲು ಕಾರಣವಾಗಿದೆ. ಈಗ ಹೈಕೋರ್ಟ್‌ನ ವಿಸ್ತೃತ ಪೀಠ ತೀರ್ಪು ನೀಡಲು ಕಾಲಾವಕಾಶ ಬೇಕಾಗಬಹುದು. ಹೀಗಾಗಿ ಸರ್ಕಾರ ಜವಾಬ್ದಾರಿ ವಹಿಸಿಕೊಳ್ಳಬೇಕು' ಎಂದು ಅಭಿಪ್ರಾಯಪಟ್ಟಿದ್ದಾರೆ.

ಮುಸ್ಕಾನ್‌ಖಾನ್‌ಗೆ 'ಫಾತಿಮಾ ಶೇಖ್ ಪ್ರಶಸ್ತಿ' ಘೋಷಿಸಿದ ಟಿಎಂಎಂಕೆ

ಚೆನ್ನೈ: ತನ್ನ ವಿರುದ್ಧ ಘೋಷಣೆಗಳನ್ನು ಕೂಗಿದ ವಿದ್ಯಾರ್ಥಿಗಳಿದ್ದ ಗುಂಪನ್ನು ಎದುರಿಸಿ, ಧೈರ್ಯ ಪ್ರದರ್ಶಿಸಿರುವ ಕರ್ನಾಟಕದ ಮಂಡ್ಯದ ವಿದ್ಯಾರ್ಥಿನಿ ಬೀಬಿ ಮುಸ್ಕಾನ್ ಖಾನ್‌ಗೆ 'ಫಾತಿಮಾ ಶೇಖ್ ಪ್ರಶಸ್ತಿ' ನೀಡುವುದಾಗಿ ತಮಿಳುನಾಡು ಮುಸ್ಲಿಂ ಮುನ್ನೇತ್ರ ಕಳಗಂ (ಟಿಎಂಎಂಕೆ) ಬುಧವಾರ ಘೋಷಿಸಿದೆ.

'ಭಾರತೀಯ ಪ್ರಜೆಯಾಗಿ ಆಕೆ ತನ್ನ ಹಕ್ಕನ್ನು ಪ್ರತಿಪಾದನೆ ಮಾಡಿರುವುದನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲು ನಿರ್ಧರಿಸಲಾಗಿದೆ. ಈ ಪ್ರಶಸ್ತಿಯನ್ನು ಮುಸ್ಕಾನ್‌ಖಾನ್‌ಗೆ ಪ್ರದಾನ ಮಾಡಲು ನಮಗೆ ಹೆಮ್ಮೆ ಎನಿಸುತ್ತದೆ' ಎಂದು ಟಿಎಂಎಂಕೆ ಮುಖಂಡ ಎಂ.ಎಚ್.ಜವಾಹಿರುಲ್ಲಾ ತಿಳಿಸಿದ್ದಾರೆ.

'ಸಂವಿಧಾನ ಆಕೆಗೆ ನೀಡಿರುವ ಹಕ್ಕನ್ನು ಕಸಿದುಕೊಳ್ಳಲು ಕೇಸರಿ ಪಡೆ ಯತ್ನಿಸಿತ್ತು. ಆಕೆ ಕಾಲೇಜು ಆವರಣ ಪ್ರವೇಶಿಸಿದಾಗ, ಕೆಲ ವಿದ್ಯಾರ್ಥಿಗಳಿದ್ದ ಗುಂಪು ಜೈ ಶ್ರೀರಾಮ್ ಎಂದು ಘೋಷಣೆ ಕೂಗಿದೆ. ಆಕೆ ಗುಂಪನ್ನು ನಿರ್ಭೀತಿಯಿಂದ ಎದುರಿಸಿದ್ದಲ್ಲದೇ, ಪ್ರತಿಯಾಗಿ ಅಲ್ಲಾ ಹು ಅಕ್ಬರ್ ಎಂಬುದಾಗಿ ಘೋಷಣೆ ಕೂಗಿದ್ದಾಳೆ ' ಎಂದು ಅವರು ತಮ್ಮ ಟ್ವಿಟ್ಟರ್ ಪುಟದಲ್ಲಿ ಬರೆದುಕೊಂಡಿದ್ದಾರೆ.

'ಸರ್ಕಾರದ ವೈಫಲ್ಯ ಬಚ್ಚಿಡಲು ಅಸಾಧ್ಯ'

ಬೆಂಗಳೂರು: 'ಸರ್ಕಾರದ ವೈಫಲ್ಯವನ್ನು ಹಿಜಾಬ್ ಮತ್ತು ಕೇಸರಿ ಶಾಲುಗಳ ಹಿಂದೆ ಬಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ. ಏನೇ ಕಾರಣ ನೀಡಿದರೂ ವಿದ್ಯಾರ್ಥಿನಿಯರ ಕಲಿಯುವ ಹಕ್ಕನ್ನು ಕಸಿಯಲು ಆಗುವುದಿಲ್ಲ' ಎಂದು ಕರ್ನಾಟಕ ಜನಶಕ್ತಿ ಸಂಘಟನೆ ಹೇಳಿದೆ.

'ಅಮಾಯಕ ವಿದ್ಯಾರ್ಥಿಗಳನ್ನು ಕೋಮು ರಾಜಕಾರಣಕ್ಕೆ ದುರ್ಬಳಕೆ ಮಾಡುವುದನ್ನು ಬಿಜೆಪಿ ಸರ್ಕಾರ ಬಿಡಬೇಕು. ಕಠಿಣ ನಿರ್ದೇಶನಗಳನ್ನು ನೀಡಿ ಕೂಡಲೇ ಕಾಲೇಜುಗಳಲ್ಲಿ ಶಾಂತಿ-ಸುವ್ಯವಸ್ಥೆ ಮರುಸ್ಥಾಪನೆ ಮಾಡಬೇಕು' ಎಂದು ಜನಶಕ್ತಿಯ ರಾಜ್ಯ ಘಟಕದ ಅಧ್ಯಕ್ಷ ನೂರ್ ಶ್ರೀಧರ್, ಪ್ರಧಾನ ಕಾರ್ಯದರ್ಶಿ ಮಲ್ಲಿಗೆ ಸಿರಿಮನೆ ಒತ್ತಾಯಿಸಿದ್ದಾರೆ.

'ಇದು ಸಮವಸ್ತ್ರದ ಸುತ್ತಲಿನ ಸಮಸ್ಯೆ ಎಂಬಂತೆ ಬಿಂಬಿಸುತ್ತಿದ್ದರೂ, ಇದರ ಹಿಂದೆ ಸಂಘ ಪರಿವಾರದ ಕೋಮುವಾದಿ ರಾಜಕಾರಣ ಇದೆ' ಎಂದಿದ್ದಾರೆ.

'ಎಲ್ಲ ಧರ್ಮಗಳಲ್ಲೂ ಗಂಡು ಹೆಣ್ಣಿನ ತಾರತಮ್ಯ ಮತ್ತು ಕಟ್ಟುಪಾಡುಗಳು ಮುಂದುವರಿಯುತ್ತಿವೆ. ಅದರ ಚರ್ಚೆ ಮಾಡುವ ಸಮಯ ಇದಲ್ಲ' ಎಂದು ಹೇಳಿದ್ದಾರೆ.

ಪೀಣ್ಯದಿಂದ ಒಂದು ಲಕ್ಷ ಕೇಸರಿ ಶಾಲು ರವಾನೆ: ಲಕ್ಷ್ಮಣ

ಮೈಸೂರು: 'ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಯೊಂದರಿಂದ ಒಂದು ಲಕ್ಷ ಕೇಸರಿ ಶಾಲುಗಳು ಕರಾವಳಿ ಜಿಲ್ಲೆಗಳಿಗೆ ರವಾನೆಯಾಗಿದೆ. ಆ ಬಗ್ಗೆ ಸಮಗ್ರ ತನಿಖೆಯಾಗಲಿ' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆಗ್ರಹಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಈಗ ನಡೆಯುತ್ತಿರುವ ಹಿಜಾಬ್– ಕೇಸರಿ ಶಾಲು ವಿವಾದವು ಬಿಜೆಪಿ, ಆರ್‌ಎಸ್‌ಎಸ್ ಷಡ್ಯಂತ್ರದ ಭಾಗ. ಫೆ.6 ರಂದು ಕೇಸರಿ ಶಾಲುಗಳು ಮತ್ತು 15 ಸಾವಿರ ಕೇಸರಿ ಪೇಟಾಗಳನ್ನು ಹಂಚಲಾಗಿದೆ. ಅದರ ಪ್ರಾಯೋಜಕತ್ವ ವಹಿಸಿದ್ದು ಯಾರೆಂಬುದು ಬಯಲಾಗಬೇಕು' ಎಂದು ಒತ್ತಾಯಿಸಿದರು.

ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಿ: ರಾಯರೆಡ್ಡಿ

ಕಲಬುರಗಿ: ರಾಜ್ಯದಲ್ಲಿ ವಾರದಿಂದ ಉಂಟಾಗಿರುವ ಹಿಜಾಬ್– ಕೇಸರಿ ಶಾಲು ಸಂಘರ್ಷ ನಿಭಾಯಿಸಲು ರಾಜ್ಯದ ಬಿಜೆಪಿ ಸರ್ಕಾರ ವಿಫಲವಾಗಿದ್ದು, ಕಾನೂನು ಸುವ್ಯವಸ್ಥೆಗೆ ಧಕ್ಕೆ ಬಂದಿದೆ. ಹೀಗಾಗಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಎಂದು ಮಾಜಿ ಸಚಿವ ಬಸವರಾಜ ರಾಯರೆಡ್ಡಿ ಒತ್ತಾಯಿಸಿದರು.

ನಗರದಲ್ಲಿ ಬುಧವಾರ ಮಾತನಾಡಿ, 'ಸಂಪುಟದಲ್ಲಿರುವ ಆರ್‌ಎಸ್‌ಎಸ್ ಹಿನ್ನೆಲೆಯ ಸಚಿವರಾದ ಆರಗ ಜ್ಞಾನೇಂದ್ರ, ಬಿ.ಸಿ. ನಾಗೇಶ್ ಅವರು ಪ್ರಚೋದನಕಾರಿಯಾಗಿ ಹೇಳಿಕೆ ನೀಡುತ್ತಿರುವುದು ಪರಿಸ್ಥಿತಿ ಬಿಗಡಾಯಿಸಲು ಕಾರಣ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರೂ ವಿವಾದ ಸೃಷ್ಟಿಸುವುದರಲ್ಲೇ ನಿರತರಾಗಿದ್ದಾರೆ' ಎಂದರು.

ಬುರ್ಖಾ ಕಡ್ಡಾಯ ಮಾಡಿದರೆ ಒಪ್ಪುತ್ತೀರಾ?: 'ರಾಜ್ಯದಲ್ಲಿ ಅಲ್ಪಸಂಖ್ಯಾತ ಆಡಳಿತ ಮಂಡಳಿಗಳು ನಡೆಸುವ ವಿಶ್ವವಿದ್ಯಾಲಯ, ವಿದ್ಯಾ ಸಂಸ್ಥೆಗಳಿವೆ. ಅವರು ಎಲ್ಲ ಧರ್ಮದ ವಿದ್ಯಾರ್ಥಿಗಳಿಗೆ ಬುರ್ಖಾ ಕಡ್ಡಾಯ ಆದೇಶ ಮಾಡಿದರೆ ಒಪ್ಪುತ್ತೀರಾ? ಹಿಂದೂ ಧರ್ಮದ ವಿದ್ಯಾರ್ಥಿನಿಯರೂ ಅವರ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನಕ್ಕೆ ತೆರಳುವುದರಿಂದ ಬುರ್ಖಾ ಕಡ್ಡಾಯ ಮಾಡಲಾಗದು. ಸಮವಸ್ತ್ರ ಯಾವುದು ಇರಬೇಕು ಎಂಬುದಕ್ಕೆ ರಾಷ್ಟ್ರೀಯ ನೀತಿ ರೂಪಿಸಬೇಕು' ಎಂದು ಪ್ರತಿಪಾದಿಸಿದರು.


ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ ಕೋವಿಡ್ ಸಕ್ರಿಯ ಪ್ರಕರಣಗಳು ಮತ್ತು ಮೃತರ ಸಂಖ್ಯೆ ಇಳಿಮುಖವಾಗಿದೆ.

ಮಂಗಳವಾರ 72,414 ಸಕ್ರಿಯ ಪ್ರಕರಣಗಳಿದ್ದವು. ಈ ಸಂಖ್ಯೆ 60,956 ಇಳಿದಿದೆ. 16,749 ಮಂದಿ ಒಂದೇ ದಿನ ಚೇತರಿಸಿಕೊಂಡಿದ್ದಾರೆ. ಇದರಿಂದ, ಈವರೆಗೆ 38.11 ಲಕ್ಷ ಮಂದಿ ಗುಣಮುಖರಾಗಿದ್ದಾರೆ.

ಕೋವಿಡ್ ಪರೀಕ್ಷೆಯನ್ನೂ ಹೆಚ್ಚಿಸಲಾಗಿದೆ. ಒಂದು ದಿನದಲ್ಲಿ 1.28 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಒಂದು ದಿನದಲ್ಲಿ 5,339 ಜನರಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಈವರೆಗೆ 39.12 ಲಕ್ಷ ಮಂದಿ ಸೋಂಕಿಗೆ ಒಳಪಟ್ಟಿದ್ದಾರೆ. ಸೋಂಕು ದೃಢ ಪ್ರಮಾಣವು ಸಹ ಶೇ 4.14ಕ್ಕೆ ತಗ್ಗಿದೆ.

24 ಗಂಟೆಗಳ ಅವಧಿಯಲ್ಲಿ 48 ಮಂದಿ ಅಸುನೀಗಿದ್ದಾರೆ. ಮಂಗಳವಾರ 51 ಮಂದಿ ಮೃತಪಟ್ಟಿದ್ದರು. ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ದಿನದಿಂದ ಈವರೆಗೆ 39,495 ಜನ ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 0.89ಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ ಹೊಸದಾಗಿ 2,161 ಜನರಿಗೆ ಸೋಂಕು ತಗುಲಿದೆ. 14 ಜಿಲ್ಲೆಗಳಲ್ಲಿ ಇದು ಮೂರಂಕಿಯಷ್ಟಿದೆ.



'ಗೋಮಾಳ ಆಕ್ರಮಿಸಲು ಹೊರಟ ಬಿಜೆಪಿಯ ಗೋರಕ್ಷಕರು'

ಬೆಂಗಳೂರು: ತಮ್ಮನ್ನು ತಾವು ಗೋರಕ್ಷಕರು ಎಂದು ಸ್ವಯಂಘೋಷಿಸಿಕೊಂಡಿರುವ ಬಿಜೆಪಿ ನಾಯಕರು, ರಾಜ್ಯದ ವಿವಿಧೆಡೆ ಇರುವ ಲಕ್ಷಾಂತರ ಎಕರೆ ಗೋಮಾಳವನ್ನು ಕಬಳಿಸಲು ಹೊಂಚು ಹಾಕಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಆರೋಪಿಸಿದ್ದಾರೆ.



ಇರುವ ನಿಯಮಗಳನ್ನು ತಮ್ಮ ಭೂ ಕಬಳಿಕೆಗೆ ಅನುಕೂಲವಾಗುವಂತೆ ಬದಲಾಯಿಸಲು ಹೊರಟಿರುವುದು ಆಕ್ಷೇಪಾರ್ಹ. ಪಶುಗಳಿಗೆ ಮೇವು ಸಿಗುವ ತಾಣವನ್ನು ಲಪಟಾಯಿಸುತ್ತಿರುವುದು ವಿಪರ್ಯಾಸ ಎಂದಿದ್ದಾರೆ.

ಗೋರಕ್ಷಣೆ ಮಾಡುವುದಾಗಿ ಹೇಳುತ್ತಿರುವ ಬಿಜೆಪಿ ನಾಯಕರು, ಗೋಮಾಳದ ಭೂಮಿಯನ್ನು ಆರ್‌ಎಸ್‌ಎಸ್ ಶಿಕ್ಷಣ ಸಂಸ್ಥೆಗಳಿಗೆ ಅತ್ಯಂತ ಕಡಿಮೆ ದರಕ್ಕೆ ನೀಡಲು ಹೊರಟಿರುವುದು ಖಂಡನೀಯ. ಪಶು ಸಂಗೋಪನೆಗೆ ಪೂರಕವಾದ ಗೋಮಾಳದ ಭೂಮಿಯನ್ನು ಆಕ್ರಮಿಸುವ ನೀತಿಗಳನ್ನು ಸರ್ಕಾರವು ಕೈಬಿಡಬೇಕು ಎಂದು ಆಗ್ರಹಿಸಿದ್ದಾರೆ.

ಭೂಮಾಪನ ಶುಲ್ಕ ಏರಿಸಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತಾತ್ಮಕ ವೆಚ್ಚ, ನಿರ್ವಹಣಾ ವೆಚ್ಚ ಮತ್ತು ಖಾಸಗಿ ಭೂಮಾಪಕರ ಸೇವಾ ಶುಲ್ಕದ ಹೆಚ್ಚಳದ ಹೊರೆಯನ್ನು ಜಮೀನುಗಳ ಮಾಲೀಕರಿಗೆ ವರ್ಗಾಯಿಸಿರುವ ಕಂದಾಯ ಇಲಾಖೆ, ಭೂಮಾಪನ ಶುಲ್ಕದಲ್ಲಿ ಭಾರಿ ಏರಿಕೆ ಮಾಡಿದೆ. ಫೆಬ್ರುವರಿ 1ರಿಂದಲೇ ಪರಿಷ್ಕೃತ ದರ ಜಾರಿಯಾಗಿದ್ದು, ಶುಲ್ಕದಲ್ಲಿ ಹತ್ತರಿಂದ ನೂರು ಪಟ್ಟುನಷ್ಟು ಏರಿಕೆ ಮಾಡಲಾಗಿದೆ.

11–ಇ ನಕ್ಷೆ, ಭೂ ಪರಿವರ್ತನೆ ಪೂರ್ವ ನಕ್ಷೆ ಮತ್ತು ತತ್ಕಾಲ್ ಪೋಡಿ ಅರ್ಜಿಗಳ ಶುಲ್ಕದಲ್ಲಿ ಹೆಚ್ಚಳ ಮಾಡಿ 2021ರ ಡಿಸೆಂಬರ್ 23ರಂದು ಆದೇಶ ಹೊರಡಿಸಲಾಗಿತ್ತು. ಹದ್ದುಬಸ್ತು ಪ್ರಕ್ರಿಯೆಯ ಭೂಮಾಪನ ಶುಲ್ಕದಲ್ಲೂ ಹೆಚ್ಚಳ ಮಾಡಿ 2022ರ ಜನವರಿ 19ರಂದು ಆದೇಶ ಹೊರಡಿಸಲಾಗಿದೆ.

11– ಇ ನಕ್ಷೆ, ಭೂ ಪರಿವರ್ತನೆ ಪೂರ್ವ ನಕ್ಷೆ ಮತ್ತು ತತ್ಕಾಲ್ ಪೋಡಿ ಭೂಮಾಪನ ಶುಲ್ಕವನ್ನು 2014ರಲ್ಲಿ ಪರಿಷ್ಕರಿಸಲಾಗಿತ್ತು. ಗ್ರಾಮೀಣ ಪ್ರದೇಶದಲ್ಲಿ ಎರಡು ಎಕರೆಗೆ ₹ 1,200 ಮತ್ತು ನಂತರದ ಪ್ರತಿ ಎಕರೆಗೆ ತಲಾ ₹ 100ರಂತೆ ಗರಿಷ್ಠ ₹ 2,500 ನಿಗದಿಪಡಿಸಲಾಗಿತ್ತು. ನಗರ ಪ್ರದೇಶದಲ್ಲಿ ಒಂದು ಸರ್ವೆ ನಂಬರ್‌ಗೆ ₹ 1,200 ನಂತರದ ಪ್ರತಿ ಹೆಚ್ಚುವರಿ ಸರ್ವೆ ನಂಬರ್‌ಗೆ ತಲಾ ₹ 200 ಶುಲ್ಕ ನಿಗದಿಪಡಿಸಲಾಗಿತ್ತು.

ಈ ಶುಲ್ಕವನ್ನು ಪರಿಷ್ಕರಣೆ ಮಾಡಿರುವ ಕಂದಾಯ ಇಲಾಖೆ, ಎರಡು ಎಕರೆಗೆ ₹ 2,000 ಹಾಗೂ ನಂತರದ ಪ್ರತಿ ಎಕರೆಗೆ ₹ 400ರಂತೆ ಗರಿಷ್ಠ 4,000ದವರೆಗೂ ಶುಲ್ಕ ವಿಧಿಸಲು ಅವಕಾಶ ಕಲ್ಪಿಸಿದೆ. ನಗರ ಪ್ರದೇಶದಲ್ಲಿ ಎರಡು ಎಕರೆವರೆಗೂ ₹ 2,500 ಮತ್ತು ನಂತರದ ಪ್ರತಿ ಎಕರೆಗೆ ₹ 1,000ದಂತೆ ಗರಿಷ್ಠ ₹ 5,000ದವರೆಗೂ ಶುಲ್ಕ ವಿಧಿಸಲು ಅನುಮತಿ ನೀಡಲಾಗಿದೆ.

ಶುಲ್ಕ ಏರಿಕೆ ಹಿಂಪಡೆಯಲು ಆಗ್ರಹ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್. ಅಶೋಕ ಅವರಿಗೆ ಪತ್ರ ಬರೆದಿರುವ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ, ಭೂಮಾಪನ ಶುಲ್ಕದ ದರ ಏರಿಕೆ ಹಿಂಪಡೆಯುವಂತೆ ಆಗ್ರಹಿಸಿದ್ದಾರೆ. 'ಕೋವಿಡ್‌ನಿಂದ ರೈತರು ಸಂಕಷ್ಟದಲ್ಲಿದ್ದಾರೆ. ಈ ಸ್ಥಿತಿಯಲ್ಲಿ ಭೂಮಾಪನ ಶುಲ್ಕವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿರುವುದು ಸರಿಯಲ್ಲ. ರೈತರು ಮತ್ತು ಸಾಮಾನ್ಯ ಜನರನ್ನು ಸಂಕಷ್ಟಕ್ಕೆ ಸಿಲುಕಿಸುವ ಈ ಆದೇಶವನ್ನು ತಕ್ಷಣ ರದ್ದು ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.


ದಿನೇಶ್ ಗೂಳಿಗೌಡ

ಹದ್ದುಬಸ್ತು ಭೂಮಾಪನದ ಪರಿಷ್ಕೃತ ಅರ್ಜಿ ಶುಲ್ಕ

ಗ್ರಾಮೀಣ ಪ್ರದೇಶ	
2 ಎಕರೆವರೆಗೆ	₹1,500
2 ಎಕರೆಗಿಂತ ಹೆಚ್ಚು	ಪ್ರತಿ ಎಕರೆಗೆ ₹300ರಂತೆ ಗರಿಷ್ಠ ₹3,000
ನಗರ ಪ್ರದೇಶ	
2 ಎಕರೆವರೆಗೆ	₹2,000
2 ಎಕರೆಗಿಂತ ಹೆಚ್ಚು	ಪ್ರತಿ ಎಕರೆಗೆ ₹400ರಂತೆ ಗರಿಷ್ಠ ₹4,000

ಕೆರೆ ಅಂಚಿನಲ್ಲಿ ಇದ್ದ ಅಕ್ರಮ ಶೆಡ್‌ಗಳ ತೆರವು

ಕೆಂಗೇರಿ: ಇಲ್ಲಿನ ಸರ್ಕಾರಿ ಭೂಮಿಯಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ 10 ಶೆಡ್‌ಗಳನ್ನು ಪೊಲೀಸರ ನೆರವಿನೊಂದಿಗೆ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ತೆರವುಗೊಳಿಸಿದರು.

ಕೆಂಗೇರಿ ಬಳಿಯ ವಳಗೇರಹಳ್ಳಿ ಹೊಸಕೆರೆ ಅಂಚಿಗಿರುವ ಸರ್ಕಾರಿ ಭೂಮಿಯಲ್ಲಿ 10 ಕುಟುಂಬಸ್ಥರು ಅನಧಿಕೃತವಾಗಿ ಶೆಡ್ ನಿರ್ಮಾಣ ಮಾಡಿ ವಾಸಿಸುತ್ತಿದ್ದರು. ಬುಧವಾರ ಬೆಳಿಗ್ಗೆ 250ಕ್ಕೂ ಹೆಚ್ಚು ಪೊಲೀಸರ ರಕ್ಷಣೆಯೊಂದಿಗೆ ಕಾರ್ಯಾಚರಣೆಗಿಳಿದ ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಸರ್ಕಾರಿ ಭೂಮಿ ವಶಪಡಿಸಿಕೊಂಡರು.

ಅಕ್ರಮವಾಗಿ ವಾಸವಾಗಿದ್ದ ಫಲಾನುಭವಿಗಳಿಗೆ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಬಹುಮಹಡಿ ಕಟ್ಟಡ ಮನೆ ನಿರ್ಮಾಣ ಮಾಡಿ 2 ದಶಕಗಳ ಹಿಂದೆಯೇ ವಸತಿ ಸೌಲಭ್ಯ ಕಲ್ಪಿಸಲಾಗಿತ್ತು. ಈ ವಸತಿಗಳನ್ನು ಪರಭಾರೆ ಹಾಗೂ ಭೋಗ್ಯ ಮಾಡಿರುವ ಕೆಲ ಮಂದಿ, ಪಕ್ಕದಲ್ಲಿಯೇ ಇರುವ ಸರ್ಕಾರಿ ಭೂಮಿಯಲ್ಲಿ ಮತ್ತೆ ಶೆಡ್ ನಿರ್ಮಿಸಿದ್ದರು. ಕೊಳಚೆ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಹಲವಾರು ಬಾರಿ ಮನವಿ ಮಾಡಿದ್ದರೂ ನಿವೇಶನ ತೆರವುಗೊಳಿಸಿರಲಿಲ್ಲ ಎಂದು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹನುಮಂತರೆಡ್ಡಿ ಹೇಳಿದರು.


ಅಕ್ರಮ ಶೆಡ್‌ಗಳನ್ನು ಜೆಸಿಬಿ ಮೂಲಕ ನೆಲಸಮಗೊಳಿಸಲಾಯಿತು

ಚರ್ಚ್ ತೆರವು: 40 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ಚರ್ಚ್ ತೆರವುಗೊಳಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಕೆಲ ಸ್ಥಳೀಯ ಕ್ರೈಸ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. 'ಯಾವುದೇ ನೋಟಿಸ್ ನೀಡದೆ ಧಾರ್ಮಿಕ ಕೇಂದ್ರವನ್ನು ತೆರವುಗೊಳಿಸಲಾಗಿದೆ. ಭೂ ದಾಖಲಾತಿ ಹೊಂದಿರುವ ಧಾರ್ಮಿಕ ಕೇಂದ್ರವನ್ನು ನೆಲಸಮಗೊಳಿಸಿದರೆ ಧಾರ್ಮಿಕ ಕಲಹಕ್ಕೆ ನಾಂದಿಯಾಗುತ್ತದೆ' ಎಂದು ಅಖಿಲ ಕರ್ನಾಟಕ ಕ್ರೈಸ್ತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಪ್ರಜ್ವಲ್ ಸ್ವಾಮಿ ಕಿಡಿಕಾರಿದರು.

'ಸ್ಥಳೀಯರ ಮನವೊಲಿಸಿ ಸರ್ಕಾರಿ ಭೂಮಿಯನ್ನು ಸುಪರ್ದಿಗೆ ಪಡೆದುಕೊಳ್ಳಲಾಗಿದೆ. ಸರ್ಕಾರಿ ಭೂಮಿಯಲ್ಲಿ ಧಾರ್ಮಿಕ ಕೇಂದ್ರ ನಿರ್ಮಾಣ ಮಾಡುವುದು ಕಾನೂನಿಗೆ ವಿರುದ್ಧ. ಹೀಗಾಗಿ, ಅಕ್ರಮ ಶೆಡ್‌ಗಳೊಂದಿಗೆ ಚರ್ಚ್ ತೆರವುಗೊಳಿಸಲಾಗಿದೆ' ಎಂದು ಕಾರ್ಯಾಚರಣೆ ನೇತೃತ್ವ ವಹಿಸಿದ್ದ ಎಸಿಪಿ ಕೋದಂಡರಾಮ್ ಹೇಳಿದರು.

ವಾಯುಸೇನೆ ನಿವೃತ್ತ ಪೈಲಟ್ ಕೊಲೆ ಆರೋಪಿ ಬಂಧನ: ಸಹಚರ ಪರಾರಿ

ಹಣದ ಆಸೆಗೆ ಮಾಲೀಕರ ಹತ್ಯೆ!

ರಾಮನಗರ: ಹಣದ ಆಸೆಗೆ ಬಿದ್ದು ತನಗೆ ಉದ್ಯೋಗ ಕೊಟ್ಟಿದ್ದ ಮನೆ ಮಾಲೀಕರನ್ನೇ ಹತ್ಯೆ ಮಾಡಿದ ಆರೋಪಿ ಇದೀಗ ಜೈಲಿನಲ್ಲಿ ಉಳಿದ ಜೀವನ ಕಳೆಯುವಂತೆ ಆಗಿದೆ.

ಈಗಲ್‌ಟನ್ ಲೇಔಟ್ ಆವರಣದಲ್ಲಿರುವ ಸಿ–21 ವಿಲ್ಲಾದಲ್ಲಿ ಮಂಗಳವಾರ ದಂಪತಿ ಹತ್ಯೆ ಮಾಡಿದ್ದ ಬಿಹಾರ ಮೂಲದ ಜೋಗಿಂದರ್ ಕುಮಾರ್ ಯಾದವ್ (21) ಎಂಬ ಆರೋಪಿಯನ್ನು ಘಟನೆ ನಡೆದ 24 ಗಂಟೆ ಒಳಗೆ ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ. ಈ ಕೃತ್ಯಕ್ಕೆ ಸಹಕರಿಸಿದ್ದ ಮತ್ತೊಬ್ಬ ಆರೋಪಿ ರವಿ ಕುಮಾರ್ ಯಾದವ್ ತಲೆಮರಿಸಿಕೊಂಡಿದ್ದಾನೆ.

ತನಗೆ ಹಣದ ಅವಶ್ಯಕತೆ ಇದ್ದು, ರಾಜನ್ ಬಳಿ ಭಾರಿ ಹಣ ಇದೆ ಎಂದು ಹತ್ಯೆ ಮಾಡಿದ್ದಾಗಿ ಆರೋಪಿ ಪೊಲೀಸ್ ವಿಚಾರಣೆ ವೇಳೆ ಬಾಯಿ ಬಿಟ್ಟಿದ್ದಾನೆ.

ಚೆನ್ನೈನವರಾದ ರಘುರಾಮ್ ರಾಜನ್ (65) ವಾಯುಪಡೆಯಲ್ಲಿ ಪೈಲಟ್ ಆಗಿ ಸೇವೆ ಸಲ್ಲಿಸಿ ನಿವೃತ್ತಿಯಾದ ಬಳಿಕ ಪತ್ನಿ ಆಶಾ ರಾಜನ್ (60) ಜೊತೆ ಈಗಲ್‌ಟನ್ ಲೇಔಟ್‌ನ ವಿಲ್ಲಾವೊಂದರಲ್ಲಿ ವಾಸ್ತವ್ಯ ಹೂಡಿದ್ದರು.

ಆರೋಪಿ ಜೋಗಿಂದರ್ ಕುಮಾರ್ ಯಾದವ್ ಬಿಹಾರದಿಂದ ಇಲ್ಲಿಗೆ ವಲಸೆ ಬಂದಿದ್ದು, ಕಳೆದ 20 ವರ್ಷದಿಂದ ಈಗಲ್‌ಟನ್ ಲೇಔಟ್ ಸುತ್ತಮುತ್ತಲಿನ ಮನೆಗಳಲ್ಲಿ ಕೆಲಸ ಮಾಡಿಕೊಂಡು ಇದ್ದಾರೆ. ಜೋಗಿಂದರ್ ಬಿಹಾರದ ಮೂಲದವನಾಗಿದ್ದು, ಮೂರು ವರ್ಷದ ಹಿಂದೆ ರಾಜನ್‌ರ ಮನೆಯಲ್ಲಿ ಸಹಾಯಕನಾಗಿ ಕೆಲಸಕ್ಕೆ ಸೇರಿದ್ದ.

ತಿಂಗಳ ಹಿಂದೆ ಹಣ ಡ್ರಾ: ತಿಂಗಳ ಹಿಂದೆ ಕೆಲಸದ ವೇಳೆ ಆರೋಪಿಯು ರಾಜನ್‌ರಿಗೆ ಗೊತ್ತಾಗದಂತೆ ಅವರ ಮೊಬೈಲ್ ಬಳಸಿ ಅವರ ಗೂಗಲ್ ಪೇ ಖಾತೆಯಿಂದ ತನ್ನ ಸ್ನೇಹಿತನ ಖಾತೆಗೆ ₹70 ಸಾವಿರ ಹಣ ವರ್ಗಾಯಿಸಿಕೊಂಡಿದ್ದ. ರಾಜನ್ ದಂಪತಿ ಖಾತೆಯಲ್ಲಿ ಭಾರಿ ಹಣ ಇರಬಹುದು ಎಂಬ ನಿರ್ಧಾರಕ್ಕೆ ಬಂದ ಆರೋಪಿ ಆ ಹಣ ಲಪಟಾಯಿಸುವ ಸಲುವಾಗಿ ಸ್ನೇಹಿತನ ಜೊತೆಗೂಡಿ ಕೊಲೆಗೆ ಸಂಚು ರೂಪಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ

ಒಡವೆ ಗಂಟು ಬಿಟ್ಟು ಹೋದರು!

ರಾಜನ್ ದಂಪತಿ ಬ್ಯಾಂಕ್ ಖಾತೆಗಳಲ್ಲಿ ಭಾರಿ ಮೊತ್ತದ ಹಣ ಹಾಗೂ ಮನೆಯಲ್ಲಿ ನಗದು, ಒಡವೆ ಇದೆ ಎಂಬ ಆಸೆಯಿಂದ ಆರೋಪಿ ಜೋಗಿಂದರ್ ಹತ್ಯೆಗೆ ಸಂಚು ರೂಪಿಸಿದ್ದ. ಮೊದಲ ಬಾರಿ ರಾಜನ್ ಮೊಬೈಲ್‌ನಿಂದ ಹಣ ವರ್ಗಾವಣೆ ಮಾಡಿಕೊಳ್ಳುವ ವೇಳೆ ಯಾವುದೇ ಪಾಸ್‌ವರ್ಡ್ ಕೇಳಿರಲಿಲ್ಲ, ಆದರೆ ಎರಡನೇ ಬಾರಿ ಪಾಸ್‌ವರ್ಡ್ ಬದಲಾಗಿದ್ದು, ಆ್ಯಪ್ ಲಾಕ್ ಆದ ಕಾರಣಕ್ಕೆ ಹಣ ವರ್ಗಾವಣೆ ಸಾಧ್ಯವಾಗಲಿಲ್ಲ. ಕಡೆಗೆ ಮನೆಯಲ್ಲಿದ್ದ ಒಡವೆಗಳನ್ನು ಗಂಟು ಕಟ್ಟಿಟ್ಟುಕೊಂಡಿದ್ದ ಆರೋಪಿ, ಭದ್ರತಾ ಸಿಬ್ಬಂದಿ ಮನೆಗೆ ಬಂದ ಕಾರಣಕ್ಕೆ ಗಾಬರಿಯಲ್ಲಿ ಒಡವೆ ಗಂಟು ಅಲ್ಲಿಯೇ ಬಿಟ್ಟು ₹50 ಸಾವಿರ ನಗದು ಜೊತೆ ಅಲ್ಲಿಂದ ಪರಾರಿ ಆಗಿದ್ದ.

ಕನ್ನಡ ಪರ ಸಂಘಟನೆಗಳ ಮುಖಂಡರಿಗೆ ಎಚ್‌.ಡಿ. ಕುಮಾರಸ್ವಾಮಿ ಸಲಹೆ

'ಚುನಾವಣೆಗೆ ಕನ್ನಡ ಚಳವಳಿಗಾರರು ಸಜ್ಜಾಗಿ'

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ಬುಧವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ಕನ್ನಡ ಪರ ಸಂಘಟನೆಗಳ ಮುಖಂಡರಿಗೆ ನಮಸ್ಕರಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪ್ರಾದೇಶಿಕ ಅಸ್ಮಿತೆ ಕಾಪಾಡಲು ಕನ್ನಡ ಚಳವಳಿಗಾರರು 2023ರ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಸಿದ್ಧರಾಗಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ನಾಡು, ನುಡಿ, ಜಲ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ಪರ ಸಂಘಟನೆಗಳ ಮುಖಂಡರ ಜತೆ ಬುಧವಾರ ನಡೆಸಿದ ಸಂವಾದದಲ್ಲಿ ಮಾತನಾಡಿದ ಅವರು, 'ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಕನ್ನಡ ಪರ ಸರ್ಕಾರ ತರುವ ನಿಟ್ಟಿನಲ್ಲಿ ಎಲ್ಲ ಕನ್ನಡ ಸಂಘಟನೆಗಳು ಒಟ್ಟಾಗಿ ಹೋರಾಟ ಮಾಡಿದರೆ ಯಶಸ್ಸು ಸಾಧ್ಯ' ಎಂದು ಸಲಹೆ ನೀಡಿದರು.

'ನಾವು ವಿರೋಧ ಪಕ್ಷದಲ್ಲೇ ಏಕೆ ಇರಬೇಕು. ಬಹುಮತ ಪಡೆಯಲು ನಮ್ಮಿಂದ ಸಾಧ್ಯವಿಲ್ಲವೇ? ಇನ್ನೊಬ್ಬರ ಮನೆ ಬಾಗಿಲಿಗೆ ಏಕೆ ಹೋಗಬೇಕು. ಜನರ ಪರವಾಗಿ ನಿಮ್ಮಿಂದಲೇ ಆಡಳಿತ ಮಾಡಿಸುತ್ತೇನೆ. ನಾಡು-ನುಡಿಗಾಗಿ ಹೋರಾಟ ನಡೆಸುವುದಕ್ಕಾಗಿ ದಾಖಲೆಯಿರುವ ಮೊಕದ್ದಮೆಗಳನ್ನು ತೆಗೆದು ಹಾಕುವ ವ್ಯವಸ್ಥೆಯನ್ನು ನೀವೇ ಮಾಡಿಕೊಳ್ಳಿ' ಎಂದು ಕನ್ನಡ ಪರ ಸಂಘಟನೆಗಳ ಮುಖಂಡರಿಗೆ ಹೇಳಿದರು.

'ಜನರ ವಿಶ್ವಾಸ ಗಳಿಸಿ ಚುನಾವಣೆಗೆ ಸ್ಪರ್ಧಿಸುವುದಾದರೆ ಆರ್ಥಿಕ ಶಕ್ತಿ ತುಂಬುತ್ತೇನೆ. ಇದಕ್ಕೆ ಭಿಕ್ಷೆ ಬೇಡಲು ಸಹ ಸಿದ್ಧ. ಎಷ್ಟು ದಿನ ಬೀದಿಯಲ್ಲಿ ಹೋರಾಟ ಮಾಡುತ್ತೀರಿ? ವಿಧಾನಸಭೆಗೆ ಬನ್ನಿ. ಅಲ್ಲಿ ಕನ್ನಡಿಗರ ಪರ ದನಿಯಾಗಿ. ಬೆಂಗಳೂರಿನಲ್ಲಿ 8–10 ಕ್ಷೇತ್ರ ಇಲ್ಲಿ ನೀವು ನನಗೆ ಶಕ್ತಿ ತುಂಬಿ. ರೈತ ಸಂಘಟನೆಗಳು ಮತ್ತು ನೀರಾವರಿ ಹೋರಾಟಗಾರರಿಗೂ ಇದೇ ರೀತಿಯ ಅವಕಾಶ ಕಲ್ಪಿಸುತ್ತೇವೆ' ಎಂದರು.

'ಕನ್ನಡ ನೆಲ, ಜಲಕ್ಕೆ ಧಕ್ಕೆಯಾದಾಗ ವಿರೋಧಿಗಳಿಗೆ ಮಸಿ ಬಳಿಯುವುದಕ್ಕೆ ಮಾತ್ರ ಸೀಮಿತರಾಗಬೇಡಿ. ಹೋರಾಟಕ್ಕೆ ಹಲವು ಮಾರ್ಗಗಳಿವೆ. ಭಿನ್ನಾಭಿಪ್ರಾಯಗಳನ್ನು ತೊರೆದು ಸಂಘಟಿತರಾಗಿ ಸ್ಪರ್ಧಿಸಿದರೆ ಯಾವ ರಾಷ್ಟ್ರೀಯ ಪಕ್ಷವೂ ನಿಮ್ಮ ಜತೆ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ.'

'ಮುಂದಿನ ಚುನಾವಣೆಯಲ್ಲಿ ಪತ್ನಿ ಸ್ಪರ್ಧಿಸುವುದಿಲ್ಲ'

'ಮುಂದಿನ ಚುನಾವಣೆಗೆ ಪತ್ನಿ ಅನಿತಾ ಕುಮಾರಸ್ವಾಮಿಯನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಪಕ್ಷ ಉಳಿಸಿಕೊಳ್ಳುವ ಪರಿಸ್ಥಿತಿಯಿಂದಾಗಿ ಈ ಹಿಂದಿನ ಚುನಾವಣೆಯಲ್ಲಿ ಅವರು ಸ್ಪರ್ಧಿಸಿದ್ದರು' ಎಂದು ಎಚ್‌.ಡಿ. ಕುಮಾರಸ್ವಾಮಿ ತಿಳಿಸಿದರು.

'ಮಧುಗಿರಿಗೂ ಅನಿವಾರ್ಯ ಸಂದರ್ಭದಲ್ಲಿ ಪತ್ನಿ ಸ್ಪರ್ಧಿಸಿದ್ದರು. ಆಗ ಮಧುಗಿರಿಯಲ್ಲಿ ಸ್ಪರ್ಧಿಸಲು ಅಭ್ಯರ್ಥಿಗಳು ಇರಲಿಲ್ಲ. ನಾನು ಒತ್ತಾಯಿಸಿದ್ದರಿಂದ ಅವರು ರಾಜಕೀಯ ಪ್ರವೇಶಿಸಿದರು. ಆಗ ಮಗ ಸಹ ವಿರೋಧಿಸಿದ್ದ. ನಾನು ರಾಜಕೀಯಕ್ಕೆ ಬರದಿದ್ದರೆ ಜೆಡಿಎಸ್ ಪಕ್ಷವೇ ಇರುತ್ತಿರಲಿಲ್ಲ. ದೇವರೇ ನನ್ನನ್ನು ತಂದಿದ್ದಾನೆ. ಪಕ್ಷ ಉಳಿಸುವ ಸಲುವಾಗಿ ನಮ್ಮ ಕುಟುಂಬದ ತಲೆ ನೀಡಿದ್ದೇವೆ. ಕುಟುಂಬ ರಾಜಕಾರಣದ ವ್ಯಾಮೋಹಕ್ಕಿಂತ ರಾಜ್ಯ ಮುಖ್ಯ' ಎಂದರು.

ತಮಿಳುನಾಡಿನಲ್ಲಿ ಆ ನೆಲದವರಿಗೆ ಉದ್ಯೋಗ ಕಲ್ಪಿಸಲು ಆದ್ಯತೆ ನೀಡಲಾಗಿದೆ. ಅದೇ ರೀತಿ ಕನ್ನಡಿಗರಿಗೆ ಕನ್ನಡ ನಾಡಿನಲ್ಲೇ **ಉದ್ಯೋಗ ದೊರೆಯಬೇಕು.**

ಪ್ರವೀಣ್ ಶೆಟ್ಟಿ, ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ

ಬಹುಸಂಖ್ಯಾತರು, ಅಲ್ಪಸಂಖ್ಯಾತರು ಎನ್ನುವ ಭಿನ್ನಾಭಿಪ್ರಾಯ ಬೇಡ. ಹಿಂದೂ-ಮುಸ್ಲಿಂ ಎನ್ನುವುದಕ್ಕಿಂತ ಕನ್ನಡಿಗರು ಎನ್ನುವುದು ಮುಖ್ಯ.

ಎಚ್‌.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಅನುಭವ ಮಂಟಪ: ಪರಿಷ್ಕೃತ ಅಂದಾಜಿಗೆ ಒಪ್ಪಿಗೆ

ಬೆಂಗಳೂರು: ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣ ಯೋಜನೆಯ ಪರಿಷ್ಕೃತ ಅಂದಾಜು ಪಟ್ಟಿಗೆ ಸಂಪುಟ ಸಭೆ ಬುಧವಾರ ಒಪ್ಪಿಗೆ ನೀಡಿದೆ.

'₹ 500 ಕೋಟಿ ವೆಚ್ಚದಲ್ಲಿ ಅನುಭವ ಮಂಟಪ ನಿರ್ಮಿಸುವ ಪ್ರಸ್ತಾವಕ್ಕೆ ಹಿಂದೆ ಒಪ್ಪಿಗೆ ನೀಡಲಾಗಿತ್ತು. ಪರಿಷ್ಕೃತ ಅಂದಾಜಿನಲ್ಲಿ ಯೋಜನಾ ವೆಚ್ಚ ₹ 560 ಕೋಟಿಗೆ ಏರಿಕೆಯಾಗಿದೆ. ಹೆಚ್ಚುವರಿ ವೆಚ್ಚವನ್ನು ಒಳಗೊಂಡಿರುವ ಪರಿಷ್ಕೃತ ಅಂದಾಜು ಪಟ್ಟಿಗೆ ಸಂಪುಟ ಅನುಮೋದನೆ ನೀಡಿದೆ' ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಬೆಸಗರಹಳ್ಳಿ ರಾಮಣ್ಣ ಪ್ರಶಸ್ತಿಗೆ ಆಹ್ವಾನ

ಬೆಂಗಳೂರು: ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ನೀಡುವ 'ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿ'ಗೆ 2021ನೇ ಸಾಲಿನಲ್ಲಿ ಪ್ರಕಟವಾದ ಕಥಾ ಸಂಕಲನಗಳನ್ನು ಆಹ್ವಾನಿಸಲಾಗಿದೆ. ಪ್ರಶಸ್ತಿಯು ₹25 ಸಾವಿರ ನಗದು ಬಹುಮಾನ ಒಳಗೊಂಡಿದೆ. ದೂರವಾಣಿ ಸಂಖ್ಯೆ 9980305837.

ಬೆಳೆ ಪರಿಹಾರ: ಹೆಚ್ಚುವರಿಯಾಗಿ ₹ 1,135.49 ಕೋಟಿ ಬಿಡುಗಡೆ

ಬೆಂಗಳೂರು: 'ಬೆಳಗಾವಿ ಅಧಿವೇಶನದಲ್ಲಿ ಬೆಳೆ ಪರಿಹಾರ ಮೊತ್ತವನ್ನು ಪರಿಷ್ಕರಿಸಲಾಗಿದ್ದು, ಹೆಚ್ಚುವರಿ ಮೊತ್ತ ₹ 1,135.49 ಕೋಟಿಯನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. ಮುಂದಿನ 48 ಗಂಟೆಯ ಒಳಗೆ ಈ ಹಣ ರೈತರ ಖಾತೆಗೆ ಜಮಾ ಆಗಲಿದೆ' ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

'18.02 ಲಕ್ಷ ರೈತರ ಬ್ಯಾಂಕ್ ಖಾತೆಗೆ ಈಗಾಗಲೇ ಒಟ್ಟು ₹ 1,252.89 ಕೋಟಿ ಇನ್‌ಪುಟ್ ಸಬ್ಸಿಡಿ ನೇರವಾಗಿ ಜಮೆ ಆಗಿದೆ. ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಇದೀಗ ಹೆಚ್ಚುವರಿ ಪರಿಹಾರ ಬಿಡುಗಡೆ ಮಾಡಲಾಗಿದೆ. ಆ ಮೂಲಕ, ರಾಜ್ಯದಲ್ಲಿ 2021ನೇ ಸಾಲಿನಲ್ಲಿ ಬಿದ್ದ ಅಕಾಲಿಕ ಮಳೆ, ಪ್ರವಾಹದಿಂದ ಬೆಳೆ ಹಾನಿಗೆ ಒಳಗಾದ ರೈತರಿಗೆ ಈವರೆಗೆ ₹ 2,388.39 ಕೋಟಿ ಪರಿಹಾರ ನೀಡಿದಂತಾಗಿದೆ' ಎಂದರು.

'2021ನೇ ಸಾಲಿನಲ್ಲಿ ಬಿದ್ದ ಅಕಾಲಿಕ ಮಳೆ, ಪ್ರವಾಹದಿಂದ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿ ಉಂಟಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ನಿಗದಿಯಾದ ದರದಲ್ಲಿ ಬೆಳೆ ಹಾನಿಗೆ ಇನ್‌ಪುಟ್ ಸಬ್ಸಿಡಿ ಮೊತ್ತವನ್ನು ದಾಖಲೆಯ ಸಮಯದಲ್ಲಿ ವಿತರಣೆ ಮಾಡಲಾಗಿದೆ. ಬೆಳೆ ಹಾನಿಗೆ ಹೆಚ್ಚಿನ ಆರ್ಥಿಕ ನೆರವು ನೀಡಬೇಕೆಂಬ ಉದ್ದೇಶದಿಂದ ಬೆಳಗಾವಿಯಲ್ಲಿ ಅಧಿವೇಶನದಲ್ಲಿ ಇನ್‌ಪುಟ್ ಸಬ್ಸಿಡಿ ಮೊತ್ತವನ್ನು ಪರಿಷ್ಕರಿಸಿ ಘೋಷಿಸಲಾಗಿತ್ತು' ಎಂದು ಅವರು ವಿವರಿಸಿದರು.

ರಾಜಕೀಯ ಲಾಭಕ್ಕಾಗಿ ಮಕ್ಕಳನ್ನು ಹಾಳು ಮಾಡುತ್ತಿದ್ದಾರೆ – ಡಿ.ಕೆ ಶಿವಕುಮಾರ್ ಆರೋಪ

‘ಕೇಸರಿ ಶಾಲು, ಪೇಟ ಹಂಚಿದ ಸಚಿವರ ಮಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿವಮೊಗ್ಗ ಜಿಲ್ಲೆಯಲ್ಲಿ ವಿದ್ಯಾರ್ಥಿಗಳಿಗೆ ಸಚಿವರೊಬ್ಬರ ಮಗ ಕೇಸರಿ ಶಾಲು ಮತ್ತು ಪೇಟಗಳನ್ನು ಹಂಚಿದ್ದಾರೆ. ಸೂರತ್‌ನಿಂದ 50 ಲಕ್ಷ ಕೇಸರಿ ಶಾಲುಗಳನ್ನು ತರಿಸಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಶಾಲುಗಳನ್ನು ಬಿಜೆಪಿ ಕಾರ್ಯಕರ್ತರು ಹಂಚುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ಮಕ್ಕಳನ್ನು ಹಾಳು ಮಾಡುತ್ತಿದ್ದಾರೆ’ ಎಂದು ದೂರಿದರು.

‘ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಿ ವಿದ್ಯಾವಂತರನ್ನು ತಯಾರು ಮಾಡಬೇಕೇ ಹೊರತು ಅವರಲ್ಲಿ ಜಾತಿ, ಧರ್ಮದ ವಿಷಬೀಜ ಬಿತ್ತುವುದಲ್ಲ’ ಎಂದರು.

‘ಹಿಜಾಬ್ ವಿವಾದದ ಹಿಂದೆ ಕಾಂಗ್ರೆಸ್ ಪಿತೂರಿ ಇದೆ’ ಎಂಬ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಪಿತೂರಿ ಯಾರು ಎಲ್ಲಿಂದ ಮಾಡುತ್ತಿದ್ದಾರೆ? ಮಂಡ್ಯ, ಶಿವಮೊಗ್ಗ, ಬೇರೆ ಕಡೆಗಳಲ್ಲಿ ಪಿತೂರಿ ಮಾಡುತ್ತಿರುವವರು ಯಾರು ಎನ್ನುವುದು ಗೊತ್ತಿದೆ. ವಿದ್ಯಾರ್ಥಿಗಳು ಕೇಸರಿ ಶಾಲು, ಪೇಟ ಮನೆಯಿಂದ ತಂದಿದ್ದರಾ? ಅವರೇನು ಹಣ ಕೊಟ್ಟು ಖರೀದಿಸಿದ್ದರಾ? ರಾತ್ರೋ ರಾತ್ರಿ ಅಷ್ಟೊಂದು ಪೇಟಗಳು ಎಲ್ಲಿಂದ ಬಂದುವು’ ಎಂದೂ ಪ್ರಶ್ನಿಸಿದರು.

‘ರಾಷ್ಟ್ರಧ್ವಜಕ್ಕೆ ಅದರದ್ದೇ ಆದ ಕಾಯ್ದೆ ಇದೆ. ರಾಷ್ಟ್ರಧ್ವಜದ ಕಂಬದ ಮೇಲೆ ಎಲ್ಲ ಧ್ವಜವನ್ನು ಹಾರಿಸಲು ಸಾಧ್ಯವಿಲ್ಲ. ಅದು ಸರ್ಕಾರ ಆಸ್ತಿ. ಸರ್ಕಾರದ ಆಸ್ತಿಯಲ್ಲಿ ಈ ರೀತಿ ಬೇರೆ ಧ್ವಜ ಹಾರಿಸಿರುವುದನ್ನು ನೋಡಿ ಸರ್ಕಾರ ಏನು ಮಾಡುತ್ತಿದೆ? ಈ ರೀತಿ ಆಗಿರುವುದು ತಪ್ಪು ಎಂದು ಸಚಿವ ಅಶೋಕ ಒಪ್ಪಿಕೊಂಡಿರುವುದು ಅವರ ದೊಡ್ಡತನ’ ಎಂದರು.

ಮಹಿಳೆಯರ ಉಡುಪು ಅವರ ಇಚ್ಛೆ ಎಂಬ ಪ್ರಿಯಾಂಕಾ ಗಾಂಧಿ ಹೇಳಿಕೆಗೆ, ‘ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಕೊಟ್ಟಿರುವ ಹಕ್ಕಿನ ಬಗ್ಗೆ ಅವರು ಮಾತನಾಡಿದ್ದಾರೆ’ ಎಂದರು.

ಮಹಿಳೆಯರ ಬಟ್ಟೆ ನೋಡಿ ಪುರುಷರು ಉದ್ರೇಕಕ್ಕೆ ಒಳಗಾಗುತ್ತಾರೆ ಎಂಬ ಶಾಸಕ ರೇಣುಕಾಚಾರ್ಯ ಹೇಳಿಕೆಗೆ, ‘ಆ ಮುತ್ತು ರಾಜನ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ’ ಎಂದು ವ್ಯಂಗ್ಯವಾಡಿದರು.



ನಾನು ಶಾಲು ಹಂಚಿದ್ದೇನೆ ಎಂದು ಹೇಳಲು ಹೋಗುವುದಿಲ್ಲ. ಆದರೆ, ಕೇಸರಿ ಶಾಲು ಹಂಚಿರುವುದರಲ್ಲಿ ತಪ್ಪೇನಿಲ್ಲ? ನನಗಿರುವ ಸ್ವಾತಂತ್ರ್ಯವನ್ನು ಪ್ರಶ್ನಿಸಲು ಡಿಕೆಶಿ ಯಾರು?

ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ



ನಾನು ಒಬ್ಬ ಹಿಂದು. ನಾನು ದಿನಬೆಳಗಾದರೆ ದೇವರಿಗೆ ನಮಸ್ಕಾರ ಮಾಡಿ, ಹಣೆಗೆ ಕುಂಕುಮ ಇಟ್ಟುಕೊಳ್ಳುತ್ತೇನೆ. ಕೆಲವರು ನೀನು ಕುಂಕುಮ ಹಾಕಬೇಡ, ಮೂಗುತಿ ಹಾಕಬೇಡ ಎಂದರೆ ಹೇಗೆ?

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

‘ಭಗವಾಧ್ವಜ ಮುಂದೆ ರಾಷ್ಟ್ರಧ್ವಜ ಆಗಬಹುದು’

ಬೆಂಗಳೂರು: ‘ಇನ್ನು ನೂರು, ಐನೂರು ವರ್ಷದ ನಂತರ ಭಗವಾಧ್ವಜವೇ ರಾಷ್ಟ್ರಧ್ವಜ ಆಗಬಹುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಧ್ವಜಸ್ತಂಭದಲ್ಲಿ ಕೇಸರಿ ಬಾವುಟ ಹಾರಿಸಿದ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ತ್ರಿವರ್ಣ ಧ್ವಜ ಇಳಿಸಿ ಕೇಸರಿ ಧ್ವಜ ಹಾರಿಸಿದ್ದಾರೆ ಎನ್ನುವ ಆರೋಪ ಸುಳ್ಳು. ಬೆಂಕಿ ಹಚ್ಚುವ ಹೇಳಿಕೆಯನ್ನು ಕಾಂಗ್ರೆಸ್‌ನವರು ನೀಡುತ್ತಿದ್ದಾರೆ’ ಎಂದು ಟೀಕಿಸಿದರು.

ಹಿಜಾಬ್ ವಿವಾದದಲ್ಲಿ ಸಂಘಪರಿವಾರದ ಕೈವಾಡ ಎಂಬ ಸಿದ್ದರಾಮಯ್ಯ ಆರೋಪಕ್ಕೆ, ‘ಯಾರೋ ಕುಡುಕ ಹೇಳಿದ್ದಾನೆ. ಸಿದ್ದರಾಮಯ್ಯ ಕುಡುಕನಂತೆ ಹೇಳಿದರೆ ಅದನ್ನು ಒಪ್ಪಲು ಆಗುತ್ತದೆಯೇ?’ ಎಂದರು.‘ಲಿಂಗಾಯತ ಧರ್ಮ ಒಡೆದಿದ್ದು ಯಾರು?’ ಎಂದು ಪ್ರಶ್ನಿಸಿದ ಈಶ್ವರಪ್ಪ, ‘ಹಿಂದೂ, ಮುಸ್ಲಿಂ ಅಣ್ಣ ತಮ್ಮಂದಿರಂತೆ ಇದ್ದೇವೆ. ಒಡೆಯುವ ಪ್ರಯತ್ನಿಸಬೇಡಿ’ ಎಂದರು.

ಡಿ.ಕೆ.ಶಿವಕುಮಾರ್ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಕೇಸರಿ ಶಾಲು ಕೊಟ್ಟರೆ ತಪ್ಪೇನು? ಎಷ್ಟು ಲೋಡ್ ಕೇಸರಿ ಶಾಲು ಕಳುಹಿಸಿದ್ದೇವೆ ಎಂಬ ಲೆಕ್ಕ ಅವರ ಬಳಿ ಇರಬಹುದು’ ಎಂದರು.

‘ರಜೆ ಮುಂದುವರಿಸುವ ತೀರ್ಮಾನ ಕೈಗೊಂಡಿಲ್ಲ’

ಬೆಂಗಳೂರು: ‘ಸಮವಸ್ತ್ರ ಕಡ್ಡಾಯಗೊಳಿಸಿರುವ ಸರ್ಕಾರದ ಕ್ರಮ ಪ್ರಶ್ನಿಸಿರುವ ಪ್ರಕರಣ ಹೈಕೋರ್ಟ್‌ನ ವಿಸ್ತೃತ ಪೀಠಕ್ಕೆ ವರ್ಗಾವಣೆಯಾಗಿದ್ದು, ಯಾವುದೇ ಮಧ್ಯಂತರ ಆದೇಶ ನೀಡಿಲ್ಲ. ಹೀಗಾಗಿ, ಸರ್ಕಾರದ ಸುತ್ತೋಲೆ ಜಾರಿಯಲ್ಲಿದ್ದು, ವಿದ್ಯಾರ್ಥಿಗಳು ನಿಯಮಾನುಸಾರ ಶನಿವಾರ ಶಾಲೆ- ಕಾಲೇಜಿಗೆ ಬರಬೇಕು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮನವಿ ಮಾಡಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಮೂರು ದಿನಗಳ ರಜೆಯನ್ನು ಮುಂದುವರಿಸುವ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಮುಖ್ಯಮಂತ್ರಿ ಮತ್ತು ಗೃಹ ಸಚಿವರ ಜೊತೆ ಚರ್ಚಿಸಿ ನಿರ್ಧರಿಸಲಾಗುವುದು’ ಎಂದರು.

‘ಕುರಾನ್ ಪ್ರಕಾರ ಕೆಲವು ವಿಷಯಗಳು ಇರಬಾರದು. ಶುಕ್ರವಾರ ಪರೀಕ್ಷೆ ನಡೆಸಬಾರದು ಎನ್ನುತ್ತಾರೆ. ಹಾಗೆಲ್ಲಾ ಮಾಡಲು ಸಾಧ್ಯವೇ? ಸಂವಿಧಾನದ ಪ್ರಕಾರ ಸರ್ಕಾರ ಆಡಳಿತ ನಡೆಸುತ್ತದೆ. ನ್ಯಾಯಾಲಯ ಯಾವ ನಿರ್ಣಯ ಕೈಗೊಳ್ಳುತ್ತದೊ ಅದರಂತೆ ಸರ್ಕಾರ ನಡೆದುಕೊಳ್ಳಲಿದೆ’ ಎಂದರು.

‘ಭವಿಷ್ಯ ಹಾಳು ಮಾಡಿಕೊಳ್ಳಬೇಡಿ’

ಬೆಂಗಳೂರು: ‘ಕೆಲವೇ ಕೆಲವು ದುಷ್ಟರ ಸ್ವಹಿತಾಸಕ್ತಿಗಾಗಿ ನಿಮ್ಮ ಭವಿಷ್ಯ ಹಾಳು ಮಾಡಿಕೊಳ್ಳಬೇಡಿ. ವಿವಿಧತೆಯಲ್ಲಿ ಏಕತೆ ಎಂಬ ತತ್ವವನ್ನು ಎತ್ತಿ ಹಿಡಿದು, ಒಟ್ಟಾಗಿ ಶಿಕ್ಷಣದ ಕಡೆಗೆ ಗಮನಹರಿಸಿ’ ಎಂದು ರಾಜ್ಯದ ವಿದ್ಯಾರ್ಥಿಗಳಿಗೆ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರು ಬುಧವಾರ ಬಹಿರಂಗ ಪತ್ರ ಬರೆದಿದ್ದಾರೆ.

ರಾಜ್ಯದಲ್ಲಿ ಭುಗಿಲೆದ್ದಿರುವ ಹಿಜಾಬ್–ಕೇಸರಿ ಶಾಲು ವಿವಾದದ ಹಿನ್ನೆಲೆಯಲ್ಲಿ ಅವರು ಈ ಪತ್ರ ಬರೆದಿದ್ದಾರೆ.



ಪ್ರತಿಭಟನೆ ಹಿಜಾಬ್ ಪರವಾಗಿ ಕಲಬುರಗಿಯಲ್ಲಿ ಜಿಲಾನಾಬಾದ್ ಪ್ರದೇಶದ ನಿವಾಸಿಗಳು ಬುಧವಾರ ಪ್ರತಿಭಟನೆ ನಡೆಸಿದರು

ಕಲ್ಲು ತೂರಾಟ: ಹಲವರ ಬಂಧನ

ಪ್ರಜಾವಾಣಿ ವಾರ್ತೆ

ರಬಕವಿ ಬನಹಟ್ಟಿ (ಬಾಗಲಕೋಟೆ ಜಿಲ್ಲೆ): ಸ್ಥಳೀಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಮಂಗಳವಾರ ಕೇಸರಿ ಶಾಲು–ಹಿಜಾಬ್ ವಿವಾದದ ಪ್ರತಿಭಟನೆಯ ಸಂದರ್ಭದಲ್ಲಿ ನಡೆದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿ 15 ಜನರನ್ನು ಬುಧವಾರ ಬಂಧಿಸಲಾಗಿದೆ.

ಬಂಧಿತರು ಮುಸ್ಲಿಂ ಸಮುದಾಯದವರು. ಆದರೆ ಯಾವುದೇ ಸಂಘಟನೆಗೆ ಸೇರಿಲ್ಲ. ಪ್ರಚೋದನೆಗೆ ಒಳಗಾಗಿ ಕಲ್ಲು ತೂರಾಟ ನಡೆಸಿದ್ದಾರೆ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ. ಇದೇ ವೇಳೆ ಕಾಲೇಜು ವಿದ್ಯಾರ್ಥಿಗಳು ಕಲ್ಲು ತೂರಾಟ ನಡೆಸಿದ್ದು, 20 ಮಂದಿಯನ್ನು ಗುರುತಿಸಲಾಗಿದೆ. ಅವರು ವಯಸ್ಕರಲ್ಲದ ಕಾರಣ ವಿವರ ಬಹಿರಂಗಪಡಿಸಲು ಆಗುವುದಿಲ್ಲ. ಮಕ್ಕಳ ಕಲ್ಯಾಣ ಸಮಿತಿ ಎದುರು ಹಾಜರುಪಡಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ 'ಪ್ರಜಾವಾಣಿ'ಗೆ ತಿಳಿಸಿದರು.

ಬಂದ್ ಆಚರಣೆ: ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆದ ಕಲ್ಲು ತೂರಾಟ ಪ್ರಕರಣ ಖಂಡಿಸಿ ರಬಕವಿ–ಬನಹಟ್ಟಿ ಅವಳಿ ಪಟ್ಟಣದಲ್ಲಿ ಶ್ರೀರಾಮ ಸೇನೆ ಸಂಘಟನೆ ನೇತೃತ್ವದಲ್ಲಿ ಬುಧವಾರ ಸ್ವಯಂ ಘೋಷಿತ ಬಂದ್ ನಡೆಯಿತು.

9 ವಿದ್ಯಾರ್ಥಿಗಳ ಬಂಧನ (ಶಿವಮೊಗ್ಗ ವರದಿ): ಜಿಲ್ಲೆಯಲ್ಲಿ ಮಂಗಳವಾರ ಕಲ್ಲು ತೂರಾಟ, ಹಲ್ಲೆ ಪ್ರಕರಣಗಳಿಗೆ ಸಂಬಂಧಿಸಿದಂತೆ 9 ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಜಿಲ್ಲೆಯ ವಿವಿಧೆಡೆ ನಡೆದ ಗಲಭೆಗಳಿಗೆ ಸಂಬಂಧಿಸಿದಂತೆ ಒಟ್ಟು ಐದು ಪ್ರಕರಣಗಳು ದಾಖಲಾಗಿವೆ. ಬಾಪೂಜಿ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ನಡೆದ ಕಲ್ಲು ತೂರಾಟ, ಹಲ್ಲೆ, ಪೊಲೀಸ್ ವಾಹನ ಜಖಂಗೊಳಿಸಿದ ಆರೋಪದ ಮೇಲೆ ಆರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಕಾಲೇಜಿನಿಂದ ಹೊರಗೆ ನಡೆದ ಹಲ್ಲೆ ಪ್ರಕರಣಗಳಲ್ಲಿ ಮೂವರನ್ನು ಬಂಧಿಸಲಾಗಿದೆ.

ಬಂಧಿತ 9 ವಿದ್ಯಾರ್ಥಿಗಳಲ್ಲಿ ಇಬ್ಬರು 18 ವರ್ಷದ ಒಳಗಿನವರು. ಬಂಧಿತರಲ್ಲಿ ಏಳು ವಿದ್ಯಾರ್ಥಿಗಳು ಮುಸ್ಲಿಂ ಸಮುದಾಯಕ್ಕೆ ಸೇರಿದವರು. ಟ್ಯಾಂಕ್ ಮೊಹಲ್ಲಾದಲ್ಲಿ ಯುವಕನ ಮೇಲೆ ನಡೆದ ಹಲ್ಲೆ, ಸಾಗರ ಮತ್ತು ಶಿಕಾರಿಪುರದಲ್ಲಿ ನಡೆದ ಹಲ್ಲೆ ಸಂಬಂಧ 3 ಪ್ರಕರಣಗಳು ದಾಖಲಾಗಿವೆ.

ಹಾಸ್ಟೆಲ್‌ಗೆ ನುಗ್ಗಿ ಹಲ್ಲೆ; ಆರು ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಕುಶಾಲನಗರ (ಕೊಡಗು): ಕೇಸರಿ ಶಾಲು ಧರಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದನ್ನು ಪ್ರಶ್ನಿಸಿದ ವಿಚಾರವಾಗಿ ಇಲ್ಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಕ್ಕೆ ನುಗ್ಗಿ ವಿದ್ಯಾರ್ಥಿ ಮೇಲೆ ಹಲ್ಲೆ ನಡೆಸಿರುವ ಆರೋಪದ ಮೇಲೆ ಬಿಜೆಪಿ ಹಾಗೂ ಹಿಂದೂ ಜಾಗರಣಾ ವೇದಿಕೆ ಮುಖಂಡರು ಸೇರಿದಂತೆ ಆರು ಮಂದಿ ವಿರುದ್ಧ ಪಟ್ಟಣ ಠಾಣೆಯಲ್ಲಿ ಮಂಗಳವಾರ ರಾತ್ರಿ ಎಫ್‌ಐಆರ್ ದಾಖಲಾಗಿದೆ.

ಬಿಜೆಪಿ ಯುವ ಘಟಕದ ಕಾರ್ಯದರ್ಶಿ ನವನೀತ್, ಹಿಂದೂ ಜಾಗರಣಾ ವೇದಿಕೆ ಮುಖಂಡರಾದ ಮಧು, ಲಕ್ಷ್ಮೀನಾರಾಯಣ, ಅವರ ಬೆಂಬಲಿಗರಾದ ಸಂದೀಪ್, ಅನಂತನಾರಾಯಣ, ಗಣಪತಿ ಹಾಗೂ ಮಧು ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ, ಠಾಣಾ ಜಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಮಂಗಳವಾರ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳು ಹಿಜಾಬ್ ವಿರೋಧಿಸಿ, ಕೇಸರಿ ಶಾಲು ಧರಿಸಿ ಪ್ರತಿಭಟಿಸಿದ್ದರು. ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಆಂಥೋಣಿ ಪ್ರಜ್ವಲ್ ಕೇಸರಿ ಶಾಲು ಧರಿಸಿ ಪಾಲ್ಗೊಂಡು, ವಾಪಸ್ಸಾದಾಗ ವಿದ್ಯಾರ್ಥಿಗಳಾದ ಆಸ್ಕರ್, ಮಹಮ್ಮದ್ ಪ್ರಶ್ನಿಸಿದ್ದರು. ಆಗ ಮೂವರ ನಡುವೆ ಗಲಾಟೆ ನಡೆದಿತ್ತು. ಗಲಾಟೆ ವಿಚಾರವನ್ನು ಆಂಥೋಣಿ, ಹಿಂದೂ ಸಂಘಟನೆ ಮುಖಂಡರಿಗೆ ತಿಳಿಸಿದ್ದರಿಂದ ಅವರು ಹಾಸ್ಟೆಲ್‌ಗೆ ನುಗ್ಗಿ ಹಲ್ಲೆ ನಡೆಸಿದರು ಎನ್ನಲಾಗಿದೆ.

‘ಹಾಸ್ಟೆಲ್‌ಗೆ ನುಗ್ಗಿ ಆರು ಮಂದಿ ನಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ಮಹಮ್ಮದ್ ದೂರು ನೀಡಿದ್ದರು. ಆಂಥೋಣಿ ಕೂಡ ಮಹಮ್ಮದ್, ಆಸ್ಕರ್ ಸೇರಿ ಆರು ಮಂದಿ ವಿರುದ್ಧ ಪ್ರತಿದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿಲ್ಲ.

ಹಿಜಾಬ್ ವಿರೋಧಿಸಿ ಸ್ಟೇಟಸ್ ಹಾಕಿಕೊಂಡಿದ್ದ ಯುವಕನ ಮೇಲೆ ಹಲ್ಲೆ

ಮಲೇಬೆನ್ನೂರು: ಹಿಜಾಬ್ ವಿರೋಧಿಸಿ ವಿವಾದಾತ್ಮಕ ಸಂದೇಶ ಇರುವ ಫೋಟೊವನ್ನು ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಹಾಕಿಕೊಂಡಿದ್ದ, ಪಟ್ಟಣದ ಜಿಗಳಿ ವೃತ್ತದಲ್ಲಿ ಅಂಗಡಿ ನಡೆಸುತ್ತಿದ್ದ ಯುವಕನೊಬ್ಬನ ಮೇಲೆ ಬುಧವಾರ ಗುಂಪೊಂದು ಹಲ್ಲೆ ನಡೆಸಿದ್ದು, ಹರಿತವಾದ ಆಯುಧದಿಂದ ಇರಿದು ಗಾಯಗೊಳಿಸಿದೆ.

ದಿಲೀಪ್ ಮಾಳಗಿಮಾನೆ ಹಲ್ಲೆಗೊಳಗಾದ ಯುವಕ. ಗಾಯಗೊಂಡಿದ್ದ ದಿಲೀಪ್ ಅವರಿಗೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ದಾವಣಗೆರೆ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು.

300ಕ್ಕೂ ಹೆಚ್ಚು ಯುವಕರು ಬಂದು ದಿಲೀಪ್ ಅವರನ್ನು ಅಂಗಡಿಯಿಂದ ಎಳೆದು ಹೊರಗೆ ತಂದು ಹಲ್ಲೆ ನಡೆಸಿದ್ದಾರೆ. ರಕ್ಷಿಸಲು ಮುಂದಾದ ಪೊಲೀಸರ ಮೇಲೂ ಯುವಕರು ಹಲ್ಲೆಗೆ ಮುಂದಾಗಿದ್ದಾರೆ.

ಘಟನೆಗೆ ಸಂಬಂಧಿಸಿ ಮೂವರನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಜಿಗಳಿ, ನಂದಿಗುಡಿ ರಸ್ತೆ ಅಂಗಡಿ, ಹೋಟೆಲ್‌ಗಳ ಬಾಗಿಲು ಹಾಕಿಸಿದರು. ಘಟನೆಗೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ದಾಖಲಾಗಿವೆ. ಈ ಘಟನೆ ಹಿನ್ನೆಲೆಯಲ್ಲಿ ಹರಿಹರ ತಾಲ್ಲೂಕಿನಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

‘ಕಾಂಗ್ರೆಸ್ ನಾಯಕರು ಬೆಂಕಿಗೆ ತುಪ್ಪ ಸುರಿಯುತ್ತಿದ್ದಾರೆ’

ಬೆಂಗಳೂರು: ಶಾಲಾ ಸಮವಸ್ತ್ರದ ವಿಷಯದಲ್ಲಿ ಕಾಂಗ್ರೆಸ್ ನಾಯಕರು ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿದ್ದಾರೆ. ಇದೇ ರೀತಿಯಲ್ಲಿ ಮುಂದುವರಿದರೆ ಜನರು ಆ ಪಕ್ಷಕ್ಕೆ ತಕ್ಕ ಪಾಠ ಕಲಿಸುತ್ತಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿದ್ಯಾರ್ಥಿಗಳು ಶಿವಮೊಗ್ಗದಲ್ಲಿ ರಾಷ್ಟ್ರಧ್ವಜ ಇಳಿಸಿ ಕೇಸರಿ ಧ್ವಜ ಏರಿಸಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸುಳ್ಳು ಮಾಹಿತಿ ನೀಡಿದ್ದಾರೆ. ಕಾಲೇಜು ಆವರಣದಲ್ಲಿ ರಾಷ್ಟ್ರಧ್ವಜ ಹಾರುತ್ತಿರಲಿಲ್ಲ. ಡಿಕೆಶಿ ಬೇಜವಾಬ್ದಾರಿಯಿಂದ ಮಾತನಾಡಿದ್ದಾರೆ. ಆ ಮೂಲಕ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡಿದ್ದಾರೆ’ ಎಂದರು.

ದಾಳಿಯ ಯತ್ನವನ್ನು ಧೈರ್ಯದಿಂದ ಎದುರಿಸಿದೆ: ಮುಸ್ಕಾನ್

ಒಂದನೇ ಪುಟದಿಂದ...

‘ಎಂದಿನಂತೆ ಬುರ್ಖಾ, ಹಿಜಾಬ್ ಧರಿಸಿ ಬಂದಿದ್ದೆ. ಅಂಥ ಸಂದರ್ಭ ಎದುರಾಗುತ್ತದೆ ಎಂದುಕೊಂಡಿರಲಿಲ್ಲ. ನೂರಾರು ವಿದ್ಯಾರ್ಥಿಗಳು ನನ್ನ ಹಿಂದೆ ಓಡಿ ಬಂದಾಗ ಉಪನ್ಯಾಸಕರು, ಕಾಲೇಜು ಸಿಬ್ಬಂದಿ ರಕ್ಷಿಸಿದರು’ಎಂದರು.

‘ಕಾಲೇಜು ಗೇಟ್‌ನಲ್ಲೂ ವಿದ್ಯಾರ್ಥಿಗಳು ತಡೆದಿದ್ದರು. ಬುರ್ಖಾ ತೆಗಿ, ತೆಗೆಯದಿದ್ದರೆ ವಾಪಸ್ ಹೋಗು ಎಂದು ತಾಕೀತು ಮಾಡಿದ್ದರು. ಅದನ್ನೂ ಎದುರಿಸಿ ನಾನು ಒಳಗೆ ಬಂದಿದ್ದೆ. ನನ್ನತ್ತ ಬಂದು ಜೈಶ್ರೀರಾಮ್ ಎಂದು ಕೂಗಿದರು. ನನ್ನನ್ನು ರಕ್ಷಿಸಿಕೊಳ್ಳಲು ಅಲ್ಲಾಹು ಅಕ್ಬರ್ ಎಂದೆ. ಭಾರತ ಹಲವು ರಾಜ್ಯ, ಧರ್ಮಗಳ ಒಕ್ಕೂಟ. ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯವಿದೆ. ಬುರ್ಖಾ, ಹಿಜಾಬ್ ಧರಿಸುವುದು ನಮ್ಮ ಸ್ವಾತಂತ್ರ್ಯ, ಅದನ್ನು ಆಚರಿಸಲು ಬಿಡಬೇಕು’ ಎಂದರು.

ಮೆಚ್ಚುಗೆ: ಬೀಬಿ ಮುಸ್ಕಾನ್ ಖಾನ್ ಅವರ ದಿಟ್ಟತನಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ. ನೆಟ್ಟಿಗರು ಆಕೆಯನ್ನು ‘ಐರನ್ ಲೇಡಿ’ ಎಂದು ಹೊಗಳಿದ್ದಾರೆ. ವಿದ್ಯಾರ್ಥಿನಿಗೆ ಮುಸ್ಲಿಂ ಸಂಘಟನೆಗಳು ₹ 5 ಲಕ್ಷ ಬಹುಮಾನ ಘೋಷಿಸಿವೆ’ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದಕ್ಕೆ ಪ್ರತಿಕ್ರಿಯಿಸಿದ ವಿದ್ಯಾರ್ಥಿನಿ ‘ಆ ವಿಷಯ ಗೊತ್ತಿಲ್ಲ, ಆ ಬಗ್ಗೆ ಯಾರೂ ತಿಳಿಸಿಲ್ಲ’ ಎಂದು ಹೇಳಿದರು.

‘ಕೇಸರಿ ಶಾಲು ಧರಿಸಿದ್ದವರ ಪ್ರತಿಭಟನೆಗೆ ಪ್ರತಿಯಾಗಿ ಪ್ರತಿಭಟಿಸಲು ನಿರ್ಧರಿಸಿದ್ದ ಮುಸ್ಲಿಂ ವಿದ್ಯಾರ್ಥಿನಿಯರನ್ನು ಉಪನ್ಯಾಸಕರು ಹೊರಗೆ ಬಿಡದೆ ತರಗತಿಯೊಳಗೆ ಕೂರಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

ಬಿಕಿನಿ ಪದ ಬಳಕೆ; ಪ್ರಿಯಾಂಕಾ ಗಾಂಧಿ ಮಹಿಳೆಯರ ಬಳಿ ಕ್ಷಮೆ ಕೋರಲಿ

‘ತುಂಡುಡುಗೆಯಿಂದ ಅತ್ಯಾಚಾರ ಹೆಚ್ಚಳ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮಹಿಳೆಯರು ಧರಿಸುವ ತುಂಡುಡುಗೆಯನ್ನು ನೋಡಿಯೇ ಪುರುಷರು ಉದ್ರೇಕಗೊಳ್ಳುತ್ತಾರೆ. ಅತ್ಯಾಚಾರ ಪ್ರಕರಣಗಳು ಹೆಚ್ಚುವುದಕ್ಕೆ ಇದೇ ಕಾರಣವಾಗಿದೆ’ ಎಂದು ಹೊನ್ನಾಳಿ ಶಾಸಕ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅಭಿಪ್ರಾಯಪಟ್ಟರು.



ರೇಣುಕಾಚಾರ್ಯ

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಕಿನಿ ಅಥವಾ ಹಿಜಾಬ್ ಧರಿಸುವುದು ಮಹಿಳೆಯರ ಹಕ್ಕು’ ಎಂಬ ಪ್ರಚೋದನಕಾರಿ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಸಮಸ್ತ ಮಹಿಳಾ ಸಮುದಾಯದ ಕ್ಷಮೆ ಕೋರಬೇಕು ಎಂದು ಕೋರಿದರು.

ಹಿಜಾಬ್ ಅನ್ನು ಬೆಂಬಲಿಸುವ ಭರದಲ್ಲಿ ಅವರು ಬಿಕನಿ ಧರಿಸುವುದೂ ಹಕ್ಕು ಎಂಬ ಹೇಳಿಕೆ ನೀಡಿರುವುದು ಸಮಂಜಸವಲ್ಲ. ಬಿಕಿನಿ ಎನ್ನುವ ಕೀಳು ಮಟ್ಟದ ಶಬ್ದ ಬಳಸಿರುವ ಅವರು ಕೂಡಲೇ ಆ ಹೇಳಿಕೆ ಹಿಂದೆ ಪಡೆಯಬೇಕು ಎಂದು ಅವರು ಆಗ್ರಹಿಸಿದರು.

‘ಮಹಿಳೆಯರು ಮತ್ತು ವಿದ್ಯಾರ್ಥಿನಿಯರ ಮೇಲಿನ ಗೌರವದಿಂದಲೇ ಈ ಒತ್ತಾಯ ಮಾಡುತ್ತಿದ್ದೇನೆ. ಸೀರೆ ತೊಟ್ಟು, ಮೂಗುಬೊಟ್ಟು, ಕುಂಕುಮ ಧರಿಸುವುದು ನಮ್ಮ ಸಂಸ್ಕೃತಿ. ಅದನ್ನು ಬಿಡುವುದರಿಂದಲೇ ಅನಾಹುತ ಆಗುತ್ತದೆ. ಹಾಗಾಗಿ ಬಿಕಿನಿ ಹಾಕುವಂತೆ ಪ್ರಚೋದಿಸುವುದು ಎಷ್ಟು ಸರಿ?’ ಎಂದು ಅವರು ಪ್ರಶ್ನಿಸಿದರು.

‘ಭಾರತದಲ್ಲಿ ಮಹಿಳೆಯರಿಗೆ ವಿಶೇಷ ಗೌರವ, ತಾಯಿಯ ಸ್ಥಾನ ಇದೆ. ಪ್ರಿಯಾಂಕಾ ಅವರಿಗೆ ನಮ್ಮ ದೇಶದ ಸಂಸ್ಕೃತಿ, ಪರಂಪರೆ, ಧರ್ಮ ಅರ್ಥವಾಗಿಲ್ಲ. ಹೇಳಿಕೇಳಿ ಅವರ ತಾಯಿಯದ್ದು ಇಟಲಿ ಸಂಸ್ಕೃತಿ. ಅವರು ಮದುವೆ ಆಗಿದ್ದು ವೈಯಕ್ತಿಕ. ಮನಬಂದಂತೆ ಹೇಳಿಕೆಗಳನ್ನು ನೀಡುತ್ತ ಹೋದರೆ ಅಪಾರ್ಥ ಉಂಟಾಗುತ್ತದೆ’ ಎಂದು ಅವರು ಟೀಕಿಸಿದರು.

ಹಿಜಾಬ್ ವಿವಾದಕ್ಕೆ ಮೂಲ ಕಾರಣವಾದ ಎಸ್‌ಡಿಪಿಐ ಮತ್ತು ಪಿಎಫ್‌ಐ ಸಂಘಟನೆಗಳನ್ನು ನಿಷೇಧಿಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡಲಾಗುವುದು ಎಂದ ಅವರು, ದಲಿತರು, ಹಿಂದುಳಿದವರು ಓಲೈಕೆ ರಾಜಕಾರಣಕ್ಕೆ ಬೇಸತ್ತು ಕಾಂಗ್ರೆಸ್‌ನಿಂದ ವಿಮುಖರಾಗಿದ್ದು, ಅಲ್ಪಸಂಖ್ಯಾತರೂ ದೂರವಾಗಲಿದ್ದಾರೆ ಎಂದು ಅವರು ಹೇಳಿದರು.

‘ನಮ್ಮ ದೇಶದ ಗಾಳಿ, ನೀರು ಸೇವಿಸಿ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗುವ ಕೆಲವರನ್ನು ಪಾಕಿಸ್ತಾನಕ್ಕೆ ಹೋಗುವಂತೆ ಹೇಳಿದ್ದರಲ್ಲಿ ತಪ್ಪಿಲ್ಲ. ಇಲ್ಲಿರುವ ಮುಸ್ಲಿಮರು ಒರಿಜಿನಲ್ ಮುಸ್ಲಿಮರಲ್ಲ. ಪಾಕಿಸ್ತಾನದವರೂ ಇವರನ್ನು ನಂಬುವುದಿಲ್ಲ’ ಎಂದು ಅವರು ತಿಳಿಸಿದರು.

ಅವರ ಹೇಳಿಕೆಯು ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ, ‘ಅತ್ಯಾಚಾರ ಪ್ರಕರಣಗಳು ಹೆಚ್ಚಲು ಮಹಿಳೆಯರ ತುಂಡು ಉಡುಗೆಯೇ ಕಾರಣ ಎಂಬ ಹೇಳಿಕೆ ನೀಡಿರುವುದು ದುರುದ್ದೇಶದಿಂದ ಅಲ್ಲ. ಈ ಹೇಳಿಕೆಯಿಂದ ಮಹಿಳೆಯರಿಗೆ ನೋವಾದಲ್ಲಿ ಕ್ಷಮೆ ಕೋರುವೆ’ ಎಂದು ಅವರು ಸ್ಪಷ್ಟಪಡಿಸಿದರು.

‘ಪಾಕಿಸ್ತಾನಕ್ಕೆ ಹೋಗಿ ಎನ್ನುವವರೇ ಪಾಕ್ ಏಜೆಂಟರು’

ನವದೆಹಲಿ: ‘ಮುಸ್ಲಿಮರನ್ನು ಪಾಕಿಸ್ತಾನಕ್ಕೆ ತೆರಳುವಂತೆ ಪದೇಪದೇ ಹೇಳಿಕೆ ನೀಡುವವರೆಲ್ಲ ಪಾಕಿಸ್ತಾನದ ಏಜೆಂಟರು’ ಎಂದು ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ ಸೈಯ್ಯದ್ ನಾಸಿರ್ ಹುಸೇನ್ ಆರೋಪಿಸಿದರು.

ಬುಧವಾರ ಇಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ‘ಭಾರತದಲ್ಲಿನ ಮುಸ್ಲಿಮರ ಬಗ್ಗೆ ನಂಬಿಕೆ ಇಲ್ಲದಂತೆ ವರ್ತಿಸುವ ಕೆಲವರು ಪಾಕಿಸ್ತಾನಕ್ಕೆ ಹೋಗಿ ಎಂದು ಹೇಳುತ್ತಾರೆ. ಅಂಥವರೇ ಪಾಕಿಸ್ತಾನದ ಪರ ಇರುವ ಏಜೆಂಟರು’ ಎಂದರು.

ಹಿಜಾಬ್ ವಿಷಯಕ್ಕೆ ಸಂಬಂಧಿಸಿದ ವಿಷಯ ವಿವಾದದ ಸ್ವರೂಪ ಪಡೆದಿದೆ. ಕೋವಿಡ್‌ನಿಂದಾಗಿ 2 ವರ್ಷ ಮುಚ್ಚಿದ್ದ ಶಾಲೆ–ಕಾಲೇಜುಗಳು ಪುನಾರಂಭವಾಗಿವೆ. ಆದರೆ, ಹಿಜಾಬ್ ವಿಚಾರವನ್ನೇ ಮುನ್ನಲೆಗೆ ತಂದು ಶೈಕ್ಷಣಿಕ ವಾತಾವರಣ ಹದಗೆಡಿಸಲಾಗುತ್ತಿದೆ ಎಂದು ದೂರಿದರು.

ಹಿಜಾಬ್ ಧರಿಸುವುದು ಅನೇಕ ವರ್ಷಗಳಿಂದ ಆಚರಣೆಯಲ್ಲಿರುವ ಪದ್ಧತಿ. ಈ ಸಂಪ್ರದಾಯವನ್ನು ಈಗ ವಿರೋಧಿಸಲು ಬಿಜೆಪಿಯೇ ಕಾರಣ ಎಂದು ರಾಜ್ಯಸಭೆಯ ಇನ್ನೊಬ್ಬ ಕಾಂಗ್ರೆಸ್ ಸದಸ್ಯ ಡಾ.ಎಲ್.ಹನುಮಂತಯ್ಯ ಹೇಳಿದರು.

ರಾಜ್ಯದ ಕರಾವಳಿಗೆ ಸೀಮಿತವಾಗಿದ್ದ ವಿವಾದ ಎಲ್ಲ ಜಿಲ್ಲೆಗಳಿಗೆ ಹಬ್ಬುವುದಕ್ಕೆ ಬಿಜೆಪಿಯ ಧರ್ಮ ರಾಜಕಾರಣವೇ ಮೂಲ ಕಾರಣ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಮಾಜಿ ಸಚಿವ ಆರ್.ಬಿ. ತಿಮ್ಮಾಪುರ ಹಾಜರಿದ್ದರು.

‘ವಿದ್ಯಾರ್ಥಿನಿಯರಿಗೆ ಗುಪ್ತಸ್ಥಳದಲ್ಲಿ ತರಬೇತಿ’

ಪ್ರಜಾವಾಣಿ ವಾರ್ತೆ

ಉಡುಪಿ: ‘ಇಲ್ಲಿನ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿ ತರಗತಿ ಪ್ರವೇಶಕ್ಕೆ ಒತ್ತಾಯಿಸುತ್ತಿರುವ ವಿದ್ಯಾರ್ಥಿನಿಯರಿಗೆ ಧಾರ್ಮಿಕ ವಿಚಾರಗಳ ಬಗ್ಗೆ ಗುಪ್ತಸ್ಥಳದಲ್ಲಿ ತರಬೇತಿ ನೀಡಲಾಗಿದೆ’ ಎಂದು ಶಾಸಕ ರಘುಪತಿ ಭಟ್ ಆರೋಪಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿರುವ ಶಾಸಕರು, ‘ಆರಂಭದಲ್ಲಿ ಉಡುಪಿ ಕಾಲೇಜಿನ 12 ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅನುಮತಿ ಕೋರಿ ಮನವಿ ನೀಡಿದ್ದರು. ಅವರಲ್ಲಿ 6 ವಿದ್ಯಾರ್ಥಿನಿಯರು ನಿರ್ಧಾರದಿಂದ ಹಿಂದೆ ಸರಿದರು. ಉಳಿದ 6 ವಿದ್ಯಾರ್ಥಿನಿಯರ ತಲೆಗೆ ಧಾರ್ಮಿಕ ವಿಚಾರಗಳನ್ನು ತುಂಬಲಾಗಿದೆ’ ಎಂದರು.

‘ವಿದ್ಯಾರ್ಥಿನಿಯರು, ಪೋಷಕರು ಯಾರ ಜತೆ ಸಂಪರ್ಕ ಹೊಂದಿದ್ದರು, ಹಣಕಾಸು ವ್ಯವಹಾರ ನಡೆದಿದೆಯೇ ಎಂಬೆಲ್ಲ ಮಾಹಿತಿಗಳು ತನಿಖೆಯಿಂದ ಬಯಲಾಗಲಿವೆ’ ಎಂದು ಹೇಳಿದರು.

ಫೋಟೊ ದಾಖಲೆ ಬಿಡುಗಡೆ: ಹಿಜಾಬ್ ಧರಿಸಲು ಅನುಮತಿ ಕೋರಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿನಿಯರು ಹಿಂದೆ ಶಾಲಾ ನಿಯಮಾವಳಿಗಳಿಗೆ ಒಪ್ಪಿ ಪತ್ರಕ್ಕೆ ಸಹಿ ಹಾಕಿದ ಬಳಿಕವೂ ಹಿಜಾಬ್ ಧರಿಸಲು ಪಟ್ಟು ಹಿಡಿದಿದ್ದಾರೆ. ಪ್ರತಿಭಟನಾ ನಿರತ ವಿದ್ಯಾರ್ಥಿನಿಯರ ಪೈಕಿ ಅಲಿಯಾ ಬಾನು ಎಂಬಾಕೆ ಈ ಹಿಂದೆ ಕಾಲೇಜಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಹಿಜಾಬ್ ಇಲ್ಲದೆ ಭಾಗವಹಿಸಿದ್ದಾರೆ. ಈ ಬಗ್ಗೆ ಫೋಟೊ ದಾಖಲೆಗಳಿವೆ ಎಂದು ತಿಳಿಸಿದ್ದಾರೆ.

ಉಡುಪಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹಿಂದಿನಿಂದಲೂ ವಿದ್ಯಾರ್ಥಿನಿಯರು ಹಿಜಾಬ್ ಧರಿಸುತ್ತಿರಲಿಲ್ಲ. ಈಚೆಗೆ 6 ವಿದ್ಯಾರ್ಥಿನಿಯರು ವಿವಾದ ಸೃಷ್ಟಿಸಿದ್ದಾರೆ ಎಂದು ಹಲವು ಫೋಟೊ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ.

‘ಶಾಸಕರಿಂದ ಪ್ರಚೋದನಾಕಾರಿ ಹೇಳಿಕೆ’

ಉಡುಪಿ: ‘ಹಿಜಾಬ್ ವಿವಾದದಲ್ಲಿ ಶಾಸಕ ರಘುಪತಿ ಭಟ್ ಪ್ರಚೋದನಾಕಾರಿ ಹೇಳಿಕೆ ನೀಡದಿದ್ದರೆ ಕೇಸರಿ ಶಾಲು ಹೊರಗೆ ಬರುತ್ತಿರಲಿಲ್ಲ’ ಎಂದು ವಿದ್ಯಾರ್ಥಿನಿ ಆಸ್ರಫ್ ಶಿಫಾ ಆರೋಪಿಸಿದರು.

ಬುಧವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ‘ಹಿಜಾಬ್ ವಿವಾದ ಕೋಮುಬಣ್ಣ ಪಡೆದುಕೊಳ್ಳಲು ಶಾಸಕರು ಕಾರಣ. ಶಾಲಾ ಮಟ್ಟದಲ್ಲಿ ಬಗೆಹರಿಯಬಹುದಾಗಿದ್ದ ಹಿಜಾಬ್ ವಿವಾದವನ್ನು ದೊಡ್ಡದು ಮಾಡಲಾಗಿದೆ. ಇದೇ ತಿಂಗಳು ಪ್ರಾಯೋಗಿಕ ಲ್ಯಾಬ್ ಪರೀಕ್ಷೆ ಇದ್ದು, ಮನೆಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ ಓದಲಾಗುತ್ತಿಲ್ಲ’ ಎಂದು ಅಳಲು ತೋಡಿಕೊಂಡರು.

‘ಹಿಂದೆ, ಕಾಲೇಜಿನಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸುತ್ತಿರಲಿಲ್ಲ ಎಂದು ಶಾಸಕರು ಬಿಡುಗಡೆ ಮಾಡಿರುವ ಭಾವಚಿತ್ರಗಳಲ್ಲಿ ಪ್ರತಿಭಟನಾ ನಿರತ ಮುಸ್ಲಿಂ ವಿದ್ಯಾರ್ಥಿನಿಯರು ಇಲ್ಲ ಎಂದು ದೂರಿದ ಶಿಫಾ, ನ್ಯಾಯಾಲಯ ಶೀಘ್ರ ಹಿಜಾಬ್ ವಿವಾದ ಪ್ರಕರಣದಲ್ಲಿ ತೀರ್ಪು ನೀಡಬೇಕು. ತೀರ್ಪು ನಮ್ಮ ಪರವಾಗಿ ಬರುವ ವಿಶ್ವಾಸವಿದೆ’ ಎಂದರು.

ವೈಷಮ್ಯದಿಂದ ಚಾಕು ಇರಿತ

ಕುಶಾಲನಗರ (ಕೊಡಗು): ‘ಪಟ್ಟಣದಲ್ಲಿ ಮಂಗಳವಾರ ನಡೆದಿದ್ದ ಚಾಕು ಇರಿತ ಪ್ರಕರಣಕ್ಕೆ ಹಳೇ ವೈಷಮ್ಯವೇ ಕಾರಣ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಂತಿಮ ಬಿ.ಎ ವಿದ್ಯಾರ್ಥಿ, ಬೈಲುಕೊಪ್ಪೆಯ ಸಂದೀಪ್‌ಗೆ ಪ್ರಥಮ ವರ್ಷದ ಬಿ.ಕಾಂ ವಿದ್ಯಾರ್ಥಿಗಳಾದ ಗುಮ್ಮನಕೊಲ್ಲಿಯ ಧನುಷ್ ಹಾಗೂ ವಿಕ್ರಂ ಎಂಬುವರು ಚಾಕುವಿನಿಂದ ಇರಿದಿದ್ದರು.

‘ಪ್ರೇಮ ಪ್ರಕರಣಕ್ಕೆ ಸಂಬಂಧಿಸಿದಂತೆ ಹಳೇ ವೈಷಮ್ಯ ಹೊಂದಿದ್ದ ಯುವಕರು, ಹಿಜಾಬ್ ವಿರೋಧಿಸಿ ನಡೆದ ಪ್ರತಿಭಟನೆ ಸಂದರ್ಭವನ್ನು ಬಳಸಿಕೊಂಡು ಇರಿದಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬಿಕಿನಿ ಆಗಲೀ, ಹಿಜಾಬ್ ಆಗಲೀ ಧರಿಸುವುದು ಮಹಿಳೆಯ ಹಕ್ಕು’

ನವದೆಹಲಿ: ಬಿಕಿನಿಯಾಗಲೀ ಅಥವಾ ಹಿಜಾಬ್ ಆಗಲೀ ತನಗೆ ಬೇಕಾದುದನ್ನು ಧರಿಸುವುದು ಮಹಿಳೆಯ ಹಕ್ಕು ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.



ಪ್ರಿಯಾಂಕಾ ಗಾಂಧಿ

ರಾಜ್ಯದಲ್ಲಿ ನಡೆಯುತ್ತಿರುವ ಹಿಜಾಬ್ ಮತ್ತು ಕೇಸರಿ ಶಾಲು ಸಂಘರ್ಷದ ಬಗ್ಗೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, ಅದು ಬಿಕಿನಿಯಾಗಿರಲಿ, ಘೂಂಘಟ್ (ಮುಸುಕು) ಆಗಿರಲಿ, ಜೀನ್ಸ್ ಆಗಿರಲಿ ಅಥವಾ ಹಿಜಾಬ್ ಆಗಿರಲಿ, ತಾನು ಏನು ಧರಿಸಬೇಕೆಂದು ನಿರ್ಧರಿಸುವುದು ಮಹಿಳೆಯ ಹಕ್ಕು ಎಂದು ಅವರು ಹೇಳಿದ್ದಾರೆ.

ಈ ಹಕ್ಕನ್ನು ಭಾರತೀಯ ಸಂವಿಧಾನವು ಖಾತರಿಪಡಿಸಿದೆ. ಮಹಿಳೆಯರಿಗೆ ಕಿರುಕುಳ ನೀಡುವುದನ್ನು ನಿಲ್ಲಿಸಿ. #ಲಡ್ಕಿಹೂನ್ ಲಡ್‌ಸಕ್ತಿಹೂನ್ ಎಂಬ ಹ್ಯಾಶ್ ಟ್ಯಾಗ್ ನೀಡಿ ಅವರು ಟ್ವೀಟ್ ಮಾಡಿದ್ದಾರೆ.

ಕಂಪನಿಗಳ ವಿಲೀನ ಶುಲ್ಕ ಇಳಿಕೆ: ಮಸೂದೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಪನಿಗಳ ವಿಲೀನ ಪ್ರಕ್ರಿಯೆಯ ಶುಲ್ಕವನ್ನು ಗರಿಷ್ಠ ₹ 25 ಕೋಟಿಗೆ ಮಿತಿಗೊಳಿಸಲು ನೋಂದಣಿ ಮತ್ತು ಮುದ್ರಾಂಕ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

‘ಕಂಪನಿಗಳ ಮೌಲ್ಯದ ಆಧಾರದಲ್ಲಿ ಶುಲ್ಕ ನಿಗದಿ ಮಾಡುವ ವ್ಯವಸ್ಥೆ ಇದೆ. ಇದರಿಂದಾಗಿ ಹೆಚ್ಚಿನ ಉದ್ಯಮಿಗಳು ಕಂಪನಿಗಳ ವಿಲೀನ ಪ್ರಕ್ರಿಯೆಯನ್ನು ರಾಜ್ಯದಲ್ಲಿ ನೋಂದಣಿ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಈ ಕಾರಣದಿಂದ ಮಹಾರಾಷ್ಟ್ರ ಮಾದರಿಯಲ್ಲಿ ಗರಿಷ್ಠ 25 ಕೋಟಿ ಮಿತಿ ವಿಧಿಸಲು ತಿದ್ದುಪಡಿ ತರಲಾಗುತ್ತಿದೆ’ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಸಕ್ಕರೆ ಕಾರ್ಖಾನೆ ಗುತ್ತಿಗೆಗೆ: ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ರನ್ನ ನಗರದಲ್ಲಿರುವ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗಿರಿಜಾ ರಮಣ ಇಂಪೆಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ₹ 320 ಕೋಟಿಗೆ 40 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವ ನಿರ್ಧಾರವನ್ನೂ ಸಂಪುಟ ಅನುಮೋದಿಸಿದೆ ಎಂದರು.

ವಿಜಯಪುರ ಪಾಲಿಕೆಯಲ್ಲಿ ದೀರ್ಘಾವಧಿ ಗುತ್ತಿಗೆ ನೀಡಿರುವ 366 ಆಸ್ತಿಗಳನ್ನು ಸರ್ಕಾರ ಈಗಾಗಲೇ ನಿಗದಿಪಡಿಸಿರುವ ದರದ ಜತೆಗೆ ಬಡ್ಡಿ ಮೊತ್ತ ಸೇರಿಸಿ ಖರೀದಿಗೆ ನೀಡುವ ಪ್ರಸ್ತಾವಕ್ಕೂ ಒಪ್ಪಿಗೆ ನೀಡಲಾಗಿದೆ ಎಂದರು.

ಇತರ ತೀರ್ಮಾನಗಳು:

- ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಮಾಸ್ತಿ ಗ್ರಾಮದಲ್ಲಿನ ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಸತಿ ಶಾಲೆ ಕಟ್ಟಡ ನಿರ್ಮಾಣಕ್ಕೆ ₹ 17 ಕೋಟಿ.
- ಬೆಳಗಾವಿ ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ₹ 28.63 ಕೋಟಿ ವೆಚ್ಚದ ಆರು ರಸ್ತೆ ಕಾಮಗಾರಿಗಳ ಸ್ಥಳ ಬದಲಾವಣೆಗೆ ಒಪ್ಪಿಗೆ.
- ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಝುಂಝುರವಾಡ ಗ್ರಾಮದ ಬಳಿ ಕೃಷ್ಣಾ ನದಿಯಿಂದ ಏತ ನೀರಾವರಿ ಮೂಲಕ ನೀರು ಎತ್ತಿ ಯಲ್ಲಮ್ಮನವಾಡಿ ಕೆರೆಗೆ ನೀರು ತುಂಬಿಸುವ ₹ 49.51 ಕೋಟಿ ವೆಚ್ಚದ ಯೋಜನೆಗೆ ಅನುಮೋದನೆ.

ಬೆಂಗಳೂರಿನ ಶಾಲಾ–ಕಾಲೇಜು ಸುತ್ತ 14 ದಿನ ನಿಷೇಧಾಜ್ಞೆ

ಬೆಂಗಳೂರು: ‘ಹಿಜಾಬ್–ಕೇಸರಿ ಶಾಲಿನ ‘ವಸ್ತ್ರ ರಾಜಕೀಯ’ ವಿವಾದ ಸಂಘರ್ಷಕ್ಕೆ ತಿರುಗಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ನಗರದಲ್ಲಿ ಒಟ್ಟು 14 ದಿನ ಶಾಲೆ ಹಾಗೂ ಕಾಲೇಜುಗಳ ಸನಿಹ ಪ್ರತಿಭಟನೆ ನಡೆಸುವುದನ್ನು ನಿಷೇಧಿಸಲಾಗಿದೆ. ‘ನಿಯಮ ಮೀರಿ ಗುಂಪು ಸೇರಿದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಎಚ್ಚರಿಸಿದ್ದಾರೆ.

‘ಇದೇ 9 ರಿಂದ 22ರವರೆಗೆ ಶಾಲೆ, ಪದವಿ ಪೂರ್ವ ಹಾಗೂ ಪದವಿ ಕಾಲೇಜುಗಳು ಮತ್ತು ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಯಾರೂ ಗುಂಪು ಸೇರುವಂತಿಲ್ಲ’ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಹಿಜಾಬ್–ಕೇಸರಿ ಶಾಲಿನ ವಿಚಾರಕ್ಕಾಗಿ ಯಾರಾದರೂ ಹೋರಾಟಕ್ಕಿಳಿದರೆ ಅವರನ್ನು ಕೂಡಲೇ ವಶಕ್ಕೆ ಪಡೆಯಲಾಗುತ್ತದೆ. ದುಷ್ಕರ್ಮಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ. ಸದ್ಯ ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಹೀಗಿದ್ದರೂ ನಮ್ಮ ಸಿಬ್ಬಂದಿ ಗಸ್ತು ತಿರುಗಲಿದ್ದಾರೆ. ಅನುಮಾನಾಸ್ಪದವಾಗಿ ಓಡಾಡುವ ವ್ಯಕ್ತಿಗಳನ್ನು ವಶಕ್ಕೆ ಪಡೆಯಲಿದ್ದಾರೆ’ ಎಂದು ಹೇಳಿದರು.

ಬೀಚ್‌ಗಳಲ್ಲಿ ಬಿಕಿನಿ ಧರಿಸಿ, ಶಾಲೆಗಳಲ್ಲಿ ಅಲ್ಲ: ಸುಮಲತಾ



ನವದೆಹಲಿ: ‘ಬೀಚ್‌ಗಳಲ್ಲಿ ಅಥವಾ ಈಜುಕೊಳದಲ್ಲಿ ಬಿಕಿನಿ ಧರಿಸಬಹುದು. ಶಾಲೆಗಳಲ್ಲಿ ಅಲ್ಲ. ಪ್ರತಿಯೊಂದು ಸ್ಥಳಕ್ಕೂ ಸಂಬಂಧಪಟ್ಟಂತೆ ವಸ್ತ್ರಸಂಹಿತೆ ಎಂಬುದು ಇದೆ’ ಎಂದು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಬುಧವಾರ ಇಲ್ಲಿ ಹೇಳಿದರು.

ಹಿಜಾಬ್ ಕುರಿತ ವಿವಾದಕ್ಕೆ ಪ್ರತಿಕ್ರಿಯಿಸಿದ ಅವರು, ‘ಮನೆಯಲ್ಲಿ ಧಾರ್ಮಿಕ ಆಚರಣೆಗಳನ್ನು ಅನುಸರಿಸಬೇಕು, ಶಾಲೆಗಳಲ್ಲಿ ಅಲ್ಲ. ಪ್ರತಿಯೊಬ್ಬರು ಶಿಕ್ಷಣಕ್ಕಾಗಿಯೇ ಶಾಲೆಗೆ ಬರುತ್ತಾರೆ’ ಎಂದರು.

‘ಯುವಜನತೆ ಛಿದ್ರವಾದುದನ್ನು ನೋಡಲು ಬೇಸರವಾಗುತ್ತದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳ ಶಾಲಾ–ಕಾಲೇಜುಗಳಲ್ಲಿ ನಡೆದ ಹಿಜಾಬ್–ಕೇಸರಿ ಶಾಲು ಸಂಘರ್ಷದ ಕುರಿತು ಟ್ವೀಟ್ ಮೂಲಕ ಪ್ರತಿಕ್ರಿಯೆ ನೀಡಿರುವ ನಟಿ, ಮಾಜಿ ಸಂಸದೆ ರಮ್ಯಾ ಅವರು, ‘ಭಾರತದ ಯುವಜನತೆ ಈ ರೀತಿ ಛಿದ್ರವಾಗಿರುವುದನ್ನು ನೋಡಲು ಬೇಸರವಾಗುತ್ತದೆ’ ಎಂದಿದ್ದಾರೆ.

ಈ ಟ್ವೀಟ್ ಜೊತೆಗೆ ಹಿಜಾಬ್, ಬುರ್ಕಾ ಧರಿಸಿದ್ದ ವಿದ್ಯಾರ್ಥಿನಿಯರ ಎದುರು ಕೇಸರಿ ಶಾಲು ಹಿಡಿದು ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ವಿಡಿಯೊವೊಂದನ್ನು ರಮ್ಯಾ ಅಪ್‌ಲೋಡ್ ಮಾಡಿದ್ದಾರೆ. ಕರ್ನಾಟಕದಲ್ಲಿ ನಡೆಯುತ್ತಿರುವ ಘಟನೆಗಳ ಕುರಿತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಾಡಿರುವ ಟ್ವೀಟ್ ಅನ್ನು ಬೆಂಬಲಿಸಿ ರಮ್ಯಾ ರಿಟ್ವೀಟ್ ಮಾಡಿದ್ದಾರೆ.



ರಮ್ಯಾ

‘ಅದು ಒಳವಸ್ತ್ರವೇ ಆಗಿರಲಿ, ಗೂಂಗಟ್ (ಮುಸುಕು), ಜೀನ್ಸ್ ಅಥವಾ ಹಿಜಾಬ್ ಆಗಿರಲಿ, ತಾನು ಏನು ಧರಿಸಬೇಕು ಎನ್ನುವುದನ್ನು ನಿರ್ಧರಿಸುವುದು ಆಯಾ ಮಹಿಳೆಯ ಹಕ್ಕು. ಭಾರತೀಯ ಸಂವಿಧಾನವು ಈ ಹಕ್ಕನ್ನು ನೀಡಿದೆ. ಮಹಿಳೆಯ ಮೇಲಿನ ದೌರ್ಜನ್ಯ ನಿಲ್ಲಿಸಿ. #ladkihoonladsaktihoon’ ಎಂಬ ಹ್ಯಾಷ್‌ಟ್ಯಾಗ್‌ನಡಿ ಪ್ರಿಯಾಂಕಾ ಗಾಂಧಿ ವಾದ್ರ ಬುಧವಾರ ಬೆಳಗ್ಗೆ ಟ್ವೀಟ್ ಮಾಡಿದ್ದರು.

ಈ ಟ್ವೀಟ್ ಜೊತೆಗೆ ‘ಸರ್ಕ್ಯಾಸ್ಟಿಕ್ ಶೆಟ್ಟಿ’ ಎಂಬ ಹ್ಯಾಂಡಲ್‌ನ ಪೋಸ್ಟ್ ಒಂದನ್ನು ಸ್ಕ್ರೀನ್‌ಶಾಟ್ ತೆಗೆದು ರಮ್ಯಾ ಮತ್ತೊಂದು ಟ್ವೀಟ್ ಮಾಡಿದ್ದಾರೆ.

ಉತ್ತರ ಪ್ರದೇಶದ ಪಶ್ಚಿಮ ಭಾಗದ 58 ಕ್ಷೇತ್ರಗಳಲ್ಲಿ ಮೊದಲ ಹಂತದ ಮತದಾನ

ಜಯಂತ್, ಬಿಜೆಪಿ ಸಚಿವರ ಭವಿಷ್ಯ ಇಂದು ನಿರ್ಧಾರ

ಸಂಜಯ್ ಪಾಂಡೆ

ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ, ರಾಜ್ಯದ ಪಶ್ಚಿಮ ಭಾಗದ 11 ಜಿಲ್ಲೆಗಳ 58 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಈ ಮತದಾನವು, ಸಮಾಜವಾದಿ ಪಕ್ಷದ ಜತೆಗೆ ಮೈತ್ರಿ ಮಾಡಿಕೊಂಡಿರುವ ರಾಷ್ಟ್ರೀಯ ಲೋಕ ದಳದ (ಆರ್‌ಎಲ್‌ಡಿ) ಮುಖ್ಯಸ್ಥ ಜಯಂತ್ ಚೌಧರಿ ಮತ್ತು ಯೋಗಿ ಆದಿತ್ಯನಾಥ್ ಅವರ ಸಂಪುಟದ 9 ಸಚಿವರ ಭವಿಷ್ಯವನ್ನು ನಿರ್ಧರಿಸಲಿದೆ.

2017ರ ಚುನಾವಣೆಯಲ್ಲಿ ಬಿಜೆಪಿಯು ಈ 58 ಕ್ಷೇತ್ರಗಳಲ್ಲಿ, 53 ಕ್ಷೇತ್ರಗಳನ್ನು ತನ್ನದಾಗಿಸಿಕೊಂಡಿತ್ತು. ಈ ಭಾಗದಲ್ಲಿ ಜಾಟ ಸಮುದಾಯದವರು ಬಹುಸಂಖ್ಯಾತರಾಗಿದ್ದು, ಅವರೆಲ್ಲರೂ ಬಿಜೆಪಿಯನ್ನು ಬೆಂಬಲಿಸಿದ್ದರು. ಜತೆಗೆ ಯಾದವರನ್ನು ಹೊರತುಪಡಿಸಿದ ಇತರೆ ಹಿಂದುಳಿದ ವರ್ಗಗಳ ಮತದಾರರೂ ಬಿಜೆಪಿಯನ್ನು ಬೆಂಬಲಿಸಿದ್ದರು. ಹೀಗಾಗಿ ಬಿಜೆಪಿ ಜಯಭೇರಿ ಬಾರಿಸಿತ್ತು.


ಜಯಂತ್ ಚೌಧರಿ, ಅಖಿಲೇಶ್ ಯಾದವ್ ಅವರ ಜಂಟಿ ಪ್ರಚಾರ ರ‍್ಯಾಲಿಗಳಲ್ಲಿ ಸಾವಿರಾರು ಜನರು ಸೇರುವುದು ಸಾಮಾನ್ಯ ದೃಶ್ಯವಾಗಿತ್ತು —ಪಿಟಿಐ ಚಿತ್ರ

ಆದರೆ ಈಗ, ಈ ಪ್ರದೇಶದಲ್ಲಿ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಕೇಂದ್ರದ ಕೃಷಿ ಕಾಯ್ದೆಗಳ ಕಾರಣ, ಜಾಟರು ಬಿಜೆಪಿ ವಿರುದ್ಧ ತಿರುಗಿಬಿದ್ದಿದ್ದಾರೆ. ಜಾಟರ ಸಂಪೂರ್ಣ ಬೆಂಬಲ ಹೊಂದಿರುವ ಆರ್‌ಎಲ್‌ಡಿ ಈಗ ಬಿಜೆಪಿಯಿಂದ ದೂರ ಸರಿದಿದೆ. ವಿರೋಧ ಪಕ್ಷವಾದ ಸಮಾಜವಾದಿ ಪಕ್ಷದ ಜತೆ ಮೈತ್ರಿ ಮಾಡಿಕೊಂಡಿದೆ. ಮರಳಿ ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆರ್‌ಎಲ್‌ಡಿ ಮುಖ್ಯಸ್ಥರನ್ನು ಪದೇ ಪದೇ ಕೇಳಿಕೊಂಡಿದ್ದಾರೆ. ಆದರೆ, ಆರ್‌ಎಲ್‌ಡಿ ಈ ಮನವಿಯನ್ನು ತಿರಸ್ಕರಿಸಿದೆ.

ಈ ಬಾರಿ ಜಾಟರು, ಯಾದವರು, ಯಾದವರನ್ನು ಹೊರತುಪಡಿಸಿದ ಇತರೆ ಹಿಂದುಳಿದ ವರ್ಗಗಳು ಮತ್ತು ಮುಸ್ಲಿಂ ಮತದಾರರನ್ನು ಆರ್‌ಎಲ್‌ಡಿ ಮತ್ತು ಸಮಾಜವಾದಿ ಪಕ್ಷದ ಮೈತ್ರಿಕೂಟವು ಒಗ್ಗೂಡಿಸಿದೆ. ಹೀಗಾಗಿ ಈ ಮೈತ್ರಿಕೂಟವು ಇಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಇದೆ. ಈ ಮೈತ್ರಿಕೂಟವು ಪಡೆದುಕೊಳ್ಳುವ ಪ್ರತಿ ಕ್ಷೇತ್ರವೂ, ಬಿಜೆಪಿಯಿಂದ ಕಸಿದುಕೊಂಡದ್ದಾಗಿರುತ್ತದೆ. ಹೀಗಾಗಿ ಬಿಜೆಪಿಗೆ ಈ ಕ್ಷೇತ್ರಗಳಲ್ಲಿ ಗೆಲುವು ಸುಲಭವಲ್ಲ ಎಂದು ವಿಶ್ಲೇಷಿಸಲಾಗಿದೆ.

ಕೃಷಿ ಕಾಯ್ದೆಗಳ ವಿರುದ್ಧ ಉತ್ತರ ಪ್ರದೇಶದ ರೈತ ಸಮುದಾಯವನ್ನು ಒಗ್ಗೂಡಿಸಿದ್ದ ಭಾರತೀಯ ಕಿಸಾನ್ ಯೂನಿಯನ್, ಯಾವ ಪಕ್ಷಕ್ಕೂ ನೇರವಾಗಿ ಬೆಂಬಲ ಘೋಷಿಸಿಲ್ಲ. ಆದರೆ ಬಿಜೆಪಿ ವಿರುದ್ಧ ಪ್ರಚಾರ ನಡೆಸಿದೆ. ಯಾವ ಸರ್ಕಾರ ಬಂದರೆ ರೈತರಿಗೆ ಅನುಕೂಲವಾಗಲಿದೆ ಎಂದು ರೈತರಿಗೆ ಮನವರಿಕೆ ಮಾಡಿಕೊಡುತ್ತಿದೆ. ಇದು ಬಿಜೆಪಿಗೆ ಮುಳುವಾಗುವ ಮತ್ತು ಆರ್‌ಎಲ್‌ಡಿ–ಎಸ್‌ಪಿ ಮೈತ್ರಿಕೂಟಕ್ಕೆ ಅನುಕೂಲವಾಗುವ ಸಾಧ್ಯತೆ ಇದೆ.

ಈ ಕ್ಷೇತ್ರಗಳಲ್ಲಿ ಜಾಟರು ಬಿಜೆಪಿಯಿಂದ ದೂರ ಸರಿಯುತ್ತಿರುವುದನ್ನು ಅರ್ಥಮಾಡಿಕೊಂಡ ಬಿಜೆಪಿ ಧಾರ್ಮಿಕ ಧ್ರುವೀಕರಣಕ್ಕೆ ಯತ್ನಿಸಿದೆ. 2013ರಲ್ಲಿ ಮುಜಫ್ಫರ್‌ನಗರದಲ್ಲಿ ನಡೆದಿದ್ದ ಗಲಭೆಯ ಬಗ್ಗೆ ಬಿಜೆಪಿಯ ಎಲ್ಲಾ ನಾಯಕರು ದೊಡ್ಡ ದನಿಯಲ್ಲಿ ಮಾತನಾಡುತ್ತಿದ್ದಾರೆ. ಆದರೆ ಜಯಂತ್ ಚೌಧರಿ ಮತ್ತು ಅಖಿಲೇಶ್ ಯಾದವ್ ಅವರು ಬಿಜೆಪಿಯ ಈ ತಂತ್ರಗಾರಿಕೆಗೆ ಪ್ರತಿತಂತ್ರ ರೂಪಿಸಿದ್ದಾರೆ.

ಈ ಇಬ್ಬರೂ ನಾಯಕರು ಬಿಜೆಪಿ ನಾಯಕರ ಆರೋಪಗಳಿಗೆ ಪ್ರತಿಕ್ರಿಯೆ ನೀಡುತ್ತಲೇ ಇಲ್ಲ. ಬದಲಿಗೆ ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳು ಮತ್ತು ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಮಾತನಾಡುತ್ತಿದ್ದಾರೆ. ಇದು ಕೆಲಸ ಮಾಡುತ್ತಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಬಿಜೆಪಿ ಶಾಸಕರು ಮತ್ತು ಸಚಿವರು ಪ್ರಚಾರಕ್ಕೆ ಹೋದೆಡೆಯೆಲ್ಲಾ ಜನರ ಪ್ರತಿಭಟನೆ ಎದುರಿಸಿದ್ದಾರೆ. ಬಿಜೆಪಿ ನಾಯಕರನ್ನು ಜನರು ಅಟ್ಟಾಡಿಸಿ ಓಡಿಸಿದ್ದಾರೆ.

ಪರಿಸ್ಥಿತಿ ಹೀಗಿದ್ದ ಮಾತ್ರಕ್ಕೆ ಆರ್‌ಎಲ್‌ಡಿ–ಎಸ್‌ಪಿ ಮೈತ್ರಿಕೂಟಕ್ಕೆ ಎಲ್ಲವೂ ಅನುಕೂಲಕಾರಿಯಾಗಿಯೇ ಇದೆ ಎಂದಲ್ಲ. ಇಲ್ಲಿನ ಎಲ್ಲಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಆದರೆ ಇದಕ್ಕಿಂತ ಮುಖ್ಯವಾಗಿರುವುದು ಬಿಎಸ್‌ಪಿ. ದಲಿತ ಮತ್ತು ಮುಸ್ಲಿಂ ಮತದಾರರ ಬೆಂಬಲ ಹೊಂದಿರುವ ಬಿಎಸ್‌ಪಿಯು ಇಲ್ಲಿನ ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಬಿಎಸ್‌ಪಿ ಹೆಚ್ಚು ಮತ ಪಡೆದಷ್ಟೂ, ಬಿಜೆಪಿಗೆ ಅನುಕೂಲವಾಗುತ್ತದೆ. ಆದರೆ, ಜಾಟರ–ದಲಿತರ–ಮುಸ್ಲಿಮರ ಮೈತ್ರಿಕೂಟವನ್ನು ಬೆಂಬಲಿಸಿದರೆ ಅದರ ಹೊಡೆತ ಬೀಳುವುದೂ ಬಿಜೆಪಿಗೆ.

'ಗೂಂಡಾ' ಎಂದವರಿಗೆ ಎಸ್‌ಪಿ ಮಣೆ: ಮೋದಿ



ಲಖನೌ (ಪಿಟಿಐ): ಉತ್ತರ ಪ್ರದೇಶದ ಜನರನ್ನು 'ಗೂಂಡಾಗಳು' ಎಂದು ಕರೆದಿದ್ದ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರನ್ನು ಚುನಾವಣಾ ಪ್ರಚಾರಕ್ಕೆ ಕರೆಸಿದ ಸಮಾಜವಾದಿ ಪಕ್ಷದ ನಿಲುವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಪ್ರಶ್ನಿಸಿದ್ದಾರೆ. ಉತ್ತರ ಪ್ರದೇಶ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದ ಪರವಾಗಿ ಮಮತಾ ಅವರು ಪ್ರತ್ಯೇಕವಾಗಿ ಚುನಾವಣಾ ಪ್ರಚಾರ ನಡೆಸಿದ್ದನ್ನು ಅವರು ಆಕ್ಷೇಪಿಸಿದ್ದಾರೆ.

ರಾಜ್ಯದ ಜನರ ಮೇಲೆ ಅವರಿಗೆ ಗೌರವವಿದ್ದಿದ್ದರೆ, ಗೂಂಡಾಗಳು ಎಂದು ಕರೆಯುತ್ತಿರಲಿಲ್ಲ. ಅವರಿಗೆ ಉತ್ತರ ಪ್ರದೇಶ ಹಾಗೂ ಜನರ ಬಗ್ಗೆ ಯಾವುದೇ ಗೌರವವಿಲ್ಲ ಎಂದು ಪ್ರಧಾನಿ ಆರೋಪಿಸಿದರು. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಸಮಯದಲ್ಲಿ ತಮ್ಮ ಪಕ್ಷದ ಅಧಿಕಾರವನ್ನು ಕಿತ್ತುಕೊಳ್ಳಲು ಬಿಹಾರ ಹಾಗೂ ಉತ್ತರ ಪ್ರದೇಶದಿಂದ ಗೂಂಡಾಗಳನ್ನು ಬಿಜೆಪಿ ಕರೆಸಿತ್ತು ಎಂದು ಮಮತಾ ಗಂಭೀರ ಆರೋಪ ಮಾಡಿದ್ದರು.

ನಾನು ತ್ರಿವಳಿ ತಲಾಖ್ ಕೊನೆಗೊಳಿಸಿದೆ. ಲಕ್ಷಾಂತರ ಸೋದರಿಯರಿಗೆ ಅವರ ಮಗಳು ತ್ರಿವಳಿ ತಲಾಖ್‌ನಿಂದ ತಕ್ಷಣಕ್ಕೆ ಮನೆಗೆ ಹಿಂತಿರುಗುವುದಿಲ್ಲ ಎಂಬ ಭರವಸೆ ಮೂಡಿಸಿದೆ
ನರೇಂದ್ರ ಮೋದಿ, ಪ್ರಧಾನಿ

ಮುಸ್ಲಿಮರ ಓಲೈಕೆ ಯತ್ನ: ಎರಡನೇ ಹಂತದಲ್ಲಿ ಚುನಾವಣೆ ನಡೆಯಲಿರುವ ಕ್ಷೇತ್ರಗಳ ಮುಸ್ಲಿಂ ಮತದಾರರನ್ನು ಉದ್ದೇಶಿಸಿ ವರ್ಚುವಲ್ ರ‍್ಯಾಲಿಯಲ್ಲಿ ಮಾತನಾಡಿದರು. ತ್ರಿವಳಿ ತಲಾಖ್ ನಿಷೇಧ ಪ್ರಸ್ತಾಪಿಸಿದ ಅವರು, 'ಇದನ್ನು ಸಾಧ್ಯವಾಗಿಸಲು ಮುಸ್ಲಿಂ ಮಹಿಳೆಯರು ನನಗೆ ಶಕ್ತಿ ನೀಡಿದರು' ಎಂದರು. ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳು ಹಾಗೂ ತಾಯಂದಿರು ತಮ್ಮ ಪರವಾಗಿ ನಿಂತಿದ್ದನ್ನು ಪ್ರಧಾನಿ ಶ್ಲಾಘಿಸಿದರು.

ಚನ್ನಿ ಸಂಬಂಧಿ ಬಂಧನ ಅವಧಿ ವಿಸ್ತರಣೆ

ಜಲಂಧರ್ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಸಂಬಂಧಿ ಭೂಪಿಂದರ್ ಸಿಂಗ್ (ಹನಿ) ಅವರ, ಜಾರಿ ನಿರ್ದೇಶನಾಲಯದ (ಇ.ಡಿ.) ಬಂಧನದ ಅವಧಿಯನ್ನು ಜಲಂಧರ್ ನ್ಯಾಯಾಲಯವು ಫೆಬ್ರುವರಿ 11ರವರೆಗೆ ವಿಸ್ತರಿಸಿದೆ.

ಮರಳು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಮೊಕದ್ದಮೆಯಲ್ಲಿ ಭೂಪಿಂದರ್ ಸಿಂಗ್ ಅವರನ್ನು ಜಾರಿ ನಿರ್ದೇಶನಾಲಯವು ಇದೇ 3ರಂದು ಬಂಧಿಸಿತ್ತು. ಮಂಗಳವಾರದವರೆಗೂ ಅವರನ್ನು ಇ.ಡಿ. ವಶಕ್ಕೆ ನೀಡಲಾಗಿತ್ತು.

ಅವರ ಬಂಧನದ ಅವಧಿ ಮುಕ್ತಾಯವಾದ ಕಾರಣ ಅವರನ್ನು ನ್ಯಾಯಾಲಯದ ಎದುರು ಇ.ಡಿ. ಹಾಜರುಪಡಿಸಿತ್ತು. ಹಲವಾರು ದಾಖಲೆಗಳ ಸಂಬಂಧ ಭೂಪಿಂದರ್ ಅವರನ್ನು ವಿಚಾರಣೆಗೆ ಒಳಪಡಿಸಬೇಕಿದೆ. ಹಾಗಾಗಿ ಬಂಧನದ ಅವಧಿ ವಿಸ್ತರಿಸುವಂತೆ ಇ.ಡಿ. ಮನವಿ ಮಾಡಿತ್ತು.

ಭೂಪಿಂದರ್ ಬಂಧನವನ್ನು ಕಾಂಗ್ರೆಸ್ ಕಳೆದ ವಾರವೇ ವಿರೋಧಿಸಿತ್ತು. ಮುಖ್ಯಮಂತ್ರಿ ಮತ್ತು ಅವರ ಸಂಬಂಧಿಗಳ ವಿರುದ್ಧ ಇ.ಡಿ. ಯನ್ನು ಬಿಟ್ಟಿರುವುದು ಬಿಜೆಪಿಯ ರಾಜಕೀಯ ತಂತ್ರವಾಗಿದೆ. ಕೇಂದ್ರ ಸರ್ಕಾರ ಜಾರಿ ಮಾಡಿದ್ದ ಮೂರು ಕೃಷಿ ನೀತಿಗಳ ವಿರುದ್ಧ ರೈತರು ನಡೆಸಿದ ಹೋರಾಟಕ್ಕೆ ಪಂಜಾಬ್ ಜನರು ಬೆಂಬಲ ನೀಡಿದ್ದ ಕಾರಣ ಅವರ ವಿರುದ್ಧ ಬಿಜೆಪಿ ಪ್ರತಿಕಾರ ತೀರಿಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ದೂರಿತ್ತು.


ಭೂಪಿಂದರ್ ಸಿಂಗ್ (ಹಳದಿ ಅಂಗಿ ಹಾಕಿರುವವರು) ಅವರನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆತಂದರು —ಪಿಟಿಐ ಚಿತ್ರ

ಮರಳು ಅಕ್ರಮ ಗಣಿಗಾರಿಕೆ ಸಂಬಂಧಿಸಿದಂತೆ ಜ.18ರಂದು ಇಡಿ ಚನ್ನಿ ಸಂಬಂಧಿಕರಿಗೆ ಸೇರಿದ ಆಸ್ತಿ ಮೇಲೆ ದಾಳಿ ನಡೆಸಿತ್ತು. ಈ ವೇಳೆ ಸುಮಾರು ₹10 ಕೋಟಿ ನಗದು ವಶಪಡಿಸಿಕೊಂಡಿತ್ತು.

ಮುಖ್ಯಾಂಶಗಳು
- ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿ ಭೂಪಿಂದರ್ ಸಿಂಗ್
- ಫೆಬ್ರುವರಿ 11ರವರೆಗೆ ಇ.ಡಿ. ಬಂಧನ ವಿಸ್ತರಿಸಿದ ನ್ಯಾಯಾಲಯ
- ವಿಚಾರಣೆಗೆ ಹೆಚ್ಚಿನ ಕಾಲಾವಕಾಶ ಕೋರಿದ್ದ ಜಾರಿ ನಿರ್ದೇಶನಾಲಯ

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ

'ರೈತರ ಸಾಲಮನ್ನಾ, 20 ಲಕ್ಷ ಸರ್ಕಾರಿ ಉದ್ಯೋಗ'


ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷವು ಪ್ರಣಾಳಿಕೆ ಬಿಡುಗಡೆ ಮಾಡಿದ್ದು, 10 ದಿನಗಳಲ್ಲಿ ರೈತರ ಸಾಲ ಮನ್ನಾ, 20 ಲಕ್ಷ ಸರ್ಕಾರಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು 'ಉನ್ನತಿ ವಿಧಾನ' ಹೆಸರಿನ ಪ್ರಣಾಳಿಕೆಯನ್ನು ಬುಧವಾರ ಬಿಡುಗಡೆ ಮಾಡಿದ್ದು, ಇದನ್ನು 'ಜನಘೋಷಣ ಪತ್ರ' ಎಂದು ಕರೆದಿದ್ದಾರೆ. ಮೊದಲ ಹಂತದ ಚುನಾವಣೆಯ ಮುನ್ನಾದಿನ ಪ್ರಣಾಳಿಕೆ ಪ್ರಕಟಗೊಂಡಿದೆ. ಇದಕ್ಕೂ ಮುನ್ನ, ಮಹಿಳೆಯರಿಗಾಗಿ 'ಶಕ್ತಿ ವಿಧಾನ' ಮತ್ತು ಯುವಜನತೆಗಾಗಿ 'ಭಾರತಿ ವಿಧಾನ' ಎಂಬ ಪ್ರಣಾಳಿಕೆಗಳನ್ನು ಪಕ್ಷ ಬಿಡುಗಡೆ ಮಾಡಲಾಗಿತ್ತು.

ಕ್ವಿಂಟಲ್‌ಗೆ ₹2,500 ದರದಲ್ಲಿ ಗೋಧಿ ಹಾಗೂ ಭತ್ತ ಖರೀದಿ ಮಾಡಲಾಗುವುದು ಎಂದು ತಿಳಿಸಿರುವ ಕಾಂಗ್ರೆಸ್, ಕ್ವಿಂಟಲ್‌ಗೆ ₹400 ದರದಲ್ಲಿ ಕಬ್ಬು ಖರೀದಿಸುವ ಪ್ರಸ್ತಾವ ಇರಿಸಿದೆ. ಪ್ರಣಾಳಿಕೆ ತಯಾರಿಯಲ್ಲಿ ಹಣದುಬ್ಬರ ಹಾಗೂ ನಿರುದ್ಯೋಗ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, 20 ಲಕ್ಷ ಸರ್ಕಾರಿ ಉದ್ಯೋಗಗಳನ್ನು ಸೃಷ್ಟಿಸಲಾಗುವುದು ಎಂದು ಪ್ರಿಯಾಂಕಾ ತಿಳಿಸಿದ್ದಾರೆ. ಈ ಪೈಕಿ 12 ಲಕ್ಷ ಖಾಲಿ ಹುದ್ದೆಗಳು ಹಾಗೂ 8 ಲಕ್ಷ ಹೊಸ ಹುದ್ದೆಗಳು ಸೇರಿವೆ. ಹೊರಗುತ್ತಿಗೆ ಪದ್ಧತಿಯನ್ನು ಹಂತಹಂತವಾಗಿ ತೆಗೆದುಹಾಕಿ, ಗುತ್ತಿಗೆ ನೌಕರರನ್ನು ಕಾಯಂಗೊಳಿಸುವ ಉದ್ದೇಶವನ್ನು ಪಕ್ಷ ಹೊಂದಿದೆ.

ಮಹಿಳಾ ಪರ ಕ್ರಮಗಳು
- ಸರ್ಕಾರಿ ನೇಮಕಾತಿಯಲ್ಲಿ ಮಹಿಳೆಯರಿಗೆ ಶೇ 40ರಷ್ಟು ಮೀಸಲಾತಿ
- ವಿಧವೆಯರಿಗೆ ₹1,000 ಸಹಾಯಧನ
- ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ವೇತನ ₹10,000ಕ್ಕೆ ಏರಿಕೆ
- ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ, ವರ್ಷಕ್ಕೆ ಮೂರು ಉಚಿತ ಎಲ್‌ಪಿಜಿ ಸಿಲಿಂಡರ್



ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು 'ಉನ್ನತಿ ವಿಧಾನ' ಹೆಸರಿನ ಪಕ್ಷದ ಪ್ರಣಾಳಿಕೆಯನ್ನು ಬುಧವಾರ ಬಿಡುಗಡೆ ಮಾಡಿದರು—ಪಿಟಿಐ ಚಿತ್ರ

'ಗೋಧನ ನ್ಯಾಯ ಯೋಜನೆ' ಆರಂಭಿಸಿ, ಹಸುವಿನ ಸಗಣಿಯನ್ನು ಕೆ.ಜಿಗೆ ₹2 ದರದಲ್ಲಿ ಖರೀದಿಸುವ ಪ್ರಸ್ತಾಪ ಮಾಡಲಾಗಿದೆ. ಬೀದಿ ದನಗಳು ಫಸಲು ಹಾಳು ಮಾಡಿದರೆ, ಬೆಳೆ ಪರಿಹಾರವಾಗಿ ರೈತರಿಗೆ ₹3,000 ನೀಡುಲಾಗುವುದು ಎಂದು ಪ್ರಣಾಳಿಕೆ ಉಲ್ಲೇಖಿಸಿದೆ. ವಿದ್ಯುತ್ ಶುಲ್ಕದಲ್ಲಿ ಅರ್ಧ ವಿನಾಯಿತಿ ನೀಡುವುದರ ಜೊತೆಗೆ, ಕೋವಿಡ್‌ನಿಂದ ತೊಂದರೆಗೊಳಗಾದ ಕುಟುಂಬಗಳಿಗೆ ₹25 ಸಾವಿರ ಪರಿಹಾರ ನೀಡುವ ವಾಗ್ದಾನ ನೀಡಲಾಗಿದೆ.

ಬಿಜೆಪಿ ಹಾಗೂ ಸಮಾಜವಾದಿ ಪಕ್ಷಗಳು ತಮ್ಮ ಪಕ್ಷಗಳ ಪ್ರಣಾಳಿಕೆಯನ್ನು ಮಂಗಳವಾರ ಹೊರತಂದಿದ್ದವು.

ಹಿಂದೂ–ಮುಸ್ಲಿಂ ಮತ ವಿಭಜನೆಗೆ ಬಿಜೆಪಿ ಯತ್ನ: ಜಯಂತ್

ಗಾಜಿಯಾಬಾದ್: ಹಿಂದೂ ಹಾಗೂ ಮುಸ್ಲಿಮರ ಮತಗಳನ್ನು ವಿಭಜಿಸಲು ಬಿಜೆಪಿ ಯತ್ನಿಸುತ್ತಿದೆ ಎಂದು ಆರೋಪಿಸಿರುವ ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರು, ಜನರು ಒಗ್ಗಟ್ಟಾಗಿ ಇರುವಂತೆ ಕರೆ ನೀಡಿದರು.

ಸಾದರ್‌ಪುರದಲ್ಲಿ ಪಕ್ಷದ ಅಭ್ಯರ್ಥಿ ಪರವಾಗಿ ಚುನಾವಣಾ ಪ್ರಚಾರ ನಡೆಸುವ ವೇಳೆ ಮಾತನಾಡಿದ ಅವರು, ಎಸ್‌ಪಿ–ಆರ್‌ಎಲ್‌ಡಿ ಮೈತ್ರಿಕೂಟ ಅಸ್ತಿತ್ವಕ್ಕೆ ಬಂದರೆ ರೈತರು ಹಾಗೂ ಕಾರ್ಮಿಕರ ಅಭಿವೃದ್ಧಿಗೆ ಇರುವ ಯಾವ ಅವಕಾಶವನ್ನೂ ಬಿಡುವುದಿಲ್ಲ ಎಂದು ಭರವಸೆ ನೀಡಿದರು.


ಲಾಕ್‌ಡೌನ್ ಸಮಯದಲ್ಲಿ ನೂರಾರು ಮೈಲಿ ನಡೆದುಬಂದ ಕಾರ್ಮಿಕರಿಗೆ ವಾಹನ ಸೌಲಭ್ಯ ಒದಗಿಸುವಲ್ಲಿ ಸರ್ಕಾರ ವಿಫಲವಾಯಿತು. ನಿರುದ್ಯೋಗಿ ಯುವಕರು ಹಾಗೂ ಪ್ರತಿಭಟನನಿರತ ರೈತರನ್ನು ಸರ್ಕಾರ ಸರಿಯಾಗಿ ನಡೆಸಿಕೊಳ್ಳಲಿಲ್ಲ ಎಂದು ಅವರು ಆರೋಪಿಸಿದರು.

'ರೈತರಿಗೆ ₹25,000 ಮಾಸಿಕ ಆದಾಯ'

ಚಂಡೀಗಡ (ಪಿಟಿಐ): ರೈತರು ಮತ್ತು ಯುವಕರಿಗೆ ₹25,000 ಮಾಸಿಕ ಆದಾಯ ದೊರೆಯುವಂತೆ ಮಾಡುವುದಾಗಿ ಮತ್ತು ಬಡ್ಡಿರಹಿತ ಸಾಲ ನೀಡುವುದಾಗಿ ರೈತ ಸಂಘಟನೆಗಳ ರಾಜಕೀಯ ಪಕ್ಷ 'ಸಂಯುಕ್ತ ಸಮಾಜ್ ಮೋರ್ಚಾ' (ಎಸ್‌ಎಸ್‌ಎಂ) ತನ್ನ ಪ್ರಣಾಳಿಕೆಯಲ್ಲಿ ಹೇಳಿದೆ. ಮಂಗಳವಾರ ಬಿಡುಗಡೆ ಮಾಡಿದ ಪ್ರಣಾಳಿಕೆಯಲ್ಲಿ ರೈತರಿಗೆ ಹಲವು ಯೋಜನೆಗಳನ್ನು ಪಕ್ಷ ಘೋಷಿಸಿದೆ. ರಾಜಕಾರಣಿಗಳು ಮತ್ತು ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ತನಿಖೆ ನಡೆಸಲು ಆಯೋಗ, ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ 'ರೈತರನ್ನು ಉಳಿಸಿ ಆಯೋಗ'ವನ್ನು ಸ್ಥಾಪಿಸಲಾಗುವುದು ಎಂದು ಪಕ್ಷವು ತಿಳಿಸಿದೆ.

'ಮಹಾ ಸರ್ಕಾರ ಉರುಳಿಸಲು ನೆರವಾಗುವಂತೆ ಸಂಪರ್ಕಿಸಿದ್ದರು'

ಮುಂಬೈ (ಪಿಟಿಐ): ಮಹಾರಾಷ್ಟ್ರದ 'ಮಹಾವಿಕಾಸ ಅಘಾಡಿ' (ಎಂವಿಎ) ಸರ್ಕಾರವನ್ನು ಉರುಳಿಸಲು ನೆರವಾಗುವಂತೆ 'ಕೆಲವರು' ಇತ್ತೀಚೆಗೆ ನನ್ನನ್ನು ಸಂಪರ್ಕಿಸಿದ್ದರು ಎಂದು ಆರೋಪಿಸಿರುವ ಶಿವಸೇನಾ ಪಕ್ಷದ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್, ಈ ಕುರಿತು ಉಪರಾಷ್ಟ್ರಪತಿಯೂ ಆಗಿರುವ ರಾಜ್ಯಸಭಾ ಸಭಾಪತಿ ಎಂ. ವೆಂಕಯ್ಯನಾಯ್ಡು ಅವರಿಗೆ ಪತ್ರ ಬರೆದಿದ್ದಾರೆ.


ಸಂಜಯ್ ರಾವುತ್

ಮಹಾರಾಷ್ಟ್ರದಲ್ಲಿ ಪ್ರಜಾಸತ್ತಾತ್ಮಕವಾಗಿ ರಚನೆಯಾಗಿರುವ ಸರ್ಕಾರವನ್ನು ಉರುಳಿಸುವ ದುರುದ್ದೇಶವನ್ನು ಜಾರಿ ನಿರ್ದೇಶನಾಲಯ (ಇಡಿ) ಮತ್ತು ಕೇಂದ್ರ ಸರ್ಕಾರದ ಇತರ ಏಜೆನ್ಸಿಗಳು ಹೊಂದಿವೆ. ಶಿವಸೇನಾ ಪಕ್ಷವು ಬಿಜೆಪಿಯೊಂದಿಗಿನ ಮೈತ್ರಿ ತೊರೆದು ಎನ್‌ಸಿಪಿ, ಕಾಂಗ್ರೆಸ್ ಪಕ್ಷಗಳೊಂದಿಗೆ ಸೇರಿ ಎಂವಿಎ ಸರ್ಕಾರ ರಚಿಸಿದ ಬಳಿಕ ಈ ಏಜೆನ್ಸಿಗಳು ಶಿವಸೇನಾ ನಾಯಕರನ್ನು ವ್ಯವಸ್ಥಿತವಾಗಿ ಗುರಿಯಾಗಿಸುತ್ತಿವೆ ಎಂದು ಅವರು ಪತ್ರದಲ್ಲಿ ದೂರಿದ್ದಾರೆ.

ಈ ರೀತಿಯ ಅಧಿಕಾರ ದುರ್ಬಳಕೆ ಮತ್ತು ರಾಜ್ಯಸಭಾ ಸದಸ್ಯರ ಮೇಲೆ ನಡೆಯುತ್ತಿರುವ ಶೋಷಣೆಯ ವಿರುದ್ಧ ಮಾತನಾಡುವುದರ ಜತೆಗೆ, ಸಂಬಂಧಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ರಾವುತ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕೇಂದ್ರ ಸರ್ಕಾರದ ಏಜೆನ್ಸಿಗಳ ಒತ್ತಡಗಳಿಗೆ ಹೆದರುವುದೂ ಇಲ್ಲ, ತಲೆಬಾಗುವುದೂ ಇಲ್ಲ. ಅಲ್ಲದೆ ಈ ಕುರಿತ ಸತ್ಯವನ್ನು ಸಭೆಯ ಒಳಗೆ ಮತ್ತು ಹೊರಗೆ ಹೇಳುವುದನ್ನು ಮುಂದುವರಿಸುತ್ತೇನೆ ಎಂದು ಅವರು ಹೇಳಿದ್ದಾರೆ.

ಈ ಪತ್ರದ ಪ್ರತಿಗಳನ್ನು ರಾವುತ್ ಅವರು, ಕಾಂಗ್ರೆಸ್‌ನ ರಾಹುಲ್ ಗಾಂಧಿ ಮತ್ತು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಅವರಿಗೂ ಕಳುಹಿಸಿದ್ದಾರೆ.

'ಈ ಪತ್ರ ಕೇವಲ ಟ್ರೈಲರ್ ಆಗಿದೆ ಎಂದಿರುವ ಅವರು, ಜಾರಿ ನಿರ್ದೇಶನಾಲಯದ ಸಿಬ್ಬಂದಿ ಹೇಗೆ ಬಿಜೆಪಿಯ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ ಎಂಬುದನ್ನು ಬಹಿರಂಗಪಡಿಸುವೆ' ಎಂದು ರಾವುತ್ ಸುದ್ದಿಗಾರರಿಗೆ ಬುಧವಾರ ತಿಳಿಸಿದರು.

'ಮಹಾರಾಷ್ಟ್ರದ ಸರ್ಕಾರವನ್ನು ಉರುಳಿಸಲು ಸಹಾಯ ಮಾಡುವಂತೆ ತಿಂಗಳ ಹಿಂದೆ ಕೆಲವರು ನನ್ನನ್ನು ಸಂಪರ್ಕಿಸಿದ್ದರು. ಮಹಾರಾಷ್ಟ್ರದಲ್ಲಿ ಮಧ್ಯಂತರ ಚುನಾವಣೆ ನಡೆಸಬೇಕು ಎಂಬ ದುರುದ್ದೇಶ ಅವರದ್ದಾಗಿತ್ತು ಎಂಬುದನ್ನು ಪತ್ರದಲ್ಲಿ ಉಲ್ಲೇಖಿಸಿರುವುದಾಗಿ' ಅವರು ಹೇಳಿದರು.

'ಅವರ ಈ ರಹಸ್ಯ ಕಾರ್ಯಸೂಚಿಯಲ್ಲಿ ಭಾಗಿಯಾವುದಕ್ಕೆ ನಾನು ನಿರಾಕರಿಸಿದೆ. ಇದಕ್ಕೆ ಪ್ರತಿಯಾಗಿ ಅವರು, ಭಾರಿ ದಂಡ ತೆರಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ' ಎಂದು ಅವರು ವಿವರಿಸಿದರು.

'ಜೈಲಿನಲ್ಲಿ ಹಲವು ವರ್ಷಗಳು ಕಳೆದ ರೈಲ್ವೆಯ ಮಾಜಿ ಸಚಿವರೊಬ್ಬರಿಗೆ ಬಂದ ಸಂಕಷ್ಟಗಳು ನಿಮಗೂ ಎದುರಾಗಬಹುದು ಎಂದು ಅವರು ಎಚ್ಚರಿಸಿದರು. ಅಲ್ಲದೆ ಮಹಾರಾಷ್ಟ್ರ ಸರ್ಕಾರದ ಇಬ್ಬರು ಹಿರಿಯ ಸಚಿವರೂ ಸೇರಿದಂತೆ ಹಲವು ನಾಯಕರು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಜೈಲು ಸೇರಬೇಕಾಗುತ್ತದೆ ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ' ಎಂದು ರಾವುತ್ ಆರೋಪಿಸಿದರು.

ಸ್ಪರ್ಧಾ ವಾಣಿ



ಯುಪಿಎಸ್‌ಸಿ ಪರೀಕ್ಷೆ

ಹೀಗಿರಲಿ ಸಿದ್ಧತೆ

ಕೇಂದ್ರ ಲೋಕಸೇವಾ ಆಯೋಗ ನಡೆಸುವಂತಹ ಸ್ವರ್ಧಾತ್ಮಕ ಪರೀಕ್ಷೆಗಳಲ್ಲಿ ಮುನ್ನಡೆ ಸಾಧಿಸಲು ಕಠಿಣ ಪರಿಶ್ರಮದ ಜೊತೆಗೆ, ಸಮಯದ ಚೌಕಟ್ಟಿನೊಂದಿಗೆ ಅಗತ್ಯ ಸಿದ್ಧತೆಗಳನ್ನು ನಡೆಸಬೇಕು. ಯಾವುದಕ್ಕೆ ಎಷ್ಟು ಸಮಯ ಕೊಡಬೇಕು? ಏನನ್ನು ಓದಬೇಕು? ಈ ಕುರಿತ ಮಾಹಿತಿ ಇಲ್ಲಿದೆ.

ಬೇದ್ರೆ ಮಂಜುನಾಥ

ಪ್ರಸಕ್ತ ಸಾಲಿನ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಸಿವಿಲ್ ಸರ್ವೀಸ್ ಮತ್ತು ಫಾರೆಸ್ಟ್ ಸರ್ವೀಸ್ ಹುದ್ದೆಗಳಿಗೆ ಜೂನ್ 5 ರಂದು ಪೂರ್ವಭಾವಿ ಪರೀಕ್ಷೆ (ಪ್ರಿಲಿಮ್ಸ್) ನಡೆಯುತ್ತಿದೆ. ಈ ಕುರಿತು ಲೋಕಸೇವಾ ಆಯೋಗ ಇತ್ತೀಚೆಗೆ ಅಧಿಸೂಚನೆ ಹೊರಡಿಸಿದೆ. ಫೆ. 22 ಅರ್ಜಿ ಸಲ್ಲಿಕೆಗೆ ಕೊನೆ ದಿನ. ಸೆ.16ರಂದು ಮುಖ್ಯ ಪರೀಕ್ಷೆ ನಡೆಯಲಿದೆ.

ಐಎಎಸ್/ಐಪಿಎಸ್/ಐಎಫ್‌ಎಸ್/ಐಆರ್‌ಎಸ್ ಸೇರಿದಂತೆ ಕೇಂದ್ರ ಸರ್ಕಾರದ ವಿವಿಧ ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೆ ಆಯ್ಕೆಯಾಗಲು ಬಯಸುವ ಅಭ್ಯರ್ಥಿಗಳು ಕೇಂದ್ರ ಲೋಕಸೇವಾ ಆಯೋಗ ನಡೆಸುವ ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಸಂದರ್ಶನದ ಹಂತಗಳನ್ನು ದಾಟಬೇಕು. ಅಭ್ಯರ್ಥಿಗಳು ಸಿವಿಲ್ ಸರ್ವೀಸಸ್ ಮತ್ತು ಇಂಡಿಯನ್ ಫಾರೆಸ್ಟ್ ಸರ್ವೀಸಸ್ ಇವುಗಳಲ್ಲಿ ಯಾವುದಾದರೂ ಒಂದನ್ನು ಅಥವಾ ಎರಡನ್ನೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಎರಡನ್ನೂ ಆಯ್ಕೆಮಾಡಿಕೊಳ್ಳುವವರ ಅನುಕೂಲಕ್ಕಾಗಿ ಸಿವಿಲ್ ಸರ್ವೀಸಸ್ ಮತ್ತು ಇಂಡಿಯನ್ ಫಾರೆಸ್ಟ್ ಸರ್ವೀಸಸ್ ಮುಖ್ಯ ಪರೀಕ್ಷೆಗಳನ್ನು ಪ್ರತ್ಯೇಕ ದಿನಾಂಕಗಳಂದು ನಡೆಸಲಾಗುತ್ತದೆ.

ಪ್ರಿಲಿಮ್ಸ್‌ಗೆ ಏನೇನು ಪಠ್ಯಕ್ರಮ?

ಪ್ರಿಲಿಮ್ಸ್ ಪರೀಕ್ಷೆಗೆ ಎರಡು ವಿಷಯಗಳ ಪ್ರಶ್ನೆ ಪತ್ರಿಕೆಗಳಿರುತ್ತವೆ. ಮೊದಲನೆಯ ವಿಷಯ– ಸಾಮಾನ್ಯ ಜ್ಞಾನ. ಇದರಲ್ಲಿ ಅಭ್ಯರ್ಥಿಗಳು ಎರಡು ಗಂಟೆ ಅವಧಿಯಲ್ಲಿ, 200 ಅಂಕಗಳಿಗೆ ಪರೀಕ್ಷೆ ಬರೆಯಬೇಕು. ಈ ಪತ್ರಿಕೆಯಲ್ಲಿ ಕೆಳಗೆ ಉಲ್ಲೇಖಿಸಿರುವ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ.

- ಪ್ರಚಲಿತ ವಿದ್ಯಮಾನ - ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಂಗತಿಗಳು
- ಭಾರತದ ಪ್ರಾಚೀನ-ಮಧ್ಯಕಾಲೀನ-ಆಧುನಿಕ ಇತಿಹಾಸ ಮತ್ತು ಭಾರತೀಯ ಸ್ವಾತಂತ್ರ್ಯ ಸಂಗ್ರಾಮ, ರಾಷ್ಟ್ರೀಯತೆ
- ಭಾರತ ಮತ್ತು ಪ್ರಪಂಚದ ಭೌಗೋಳಿಕ, ಸಾಮಾಜಿಕ, ಆರ್ಥಿಕ ಅಂಶಗಳು
- ಭಾರತದ ರಾಜಕೀಯ ವ್ಯವಸ್ಥೆ ಮತ್ತು ಆಡಳಿತ ವ್ಯವಸ್ಥೆ - ಸಂವಿಧಾನ, ರಾಜಕೀಯ ಪದ್ಧತಿ, ಪಂಚಾಯತ್ ರಾಜ್, ಸಾರ್ವಜನಿಕ ಯೋಜನೆಗಳು, ಹಕ್ಕುಗಳು, ಪ್ರಚಲಿತ ಸಂಗತಿಗಳಿರುತ್ತವೆ.
- ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ - ಸುಸ್ಥಿರ ಅಭಿವೃದ್ಧಿ, ಬಡತನ ನಿರ್ಮೂಲನೆ, ಜನಸಂಖ್ಯೆ, ಸಾಮಾಜಿಕ ಕ್ಷೇತ್ರದ ವಿವಿಧ ಯೋಜನೆಗಳು ಇತ್ಯಾದಿ.
- ಪರಿಸರ ಅಧ್ಯಯನ, ಜೀವಿ ಪರಿಸರ, ಜೈವಿಕ ವೈವಿಧ್ಯ, ಹವಾಮಾನ ವೈಪರೀತ್ಯ, ಇತ್ಯಾದಿಗಳಿಗೆ ಸಂಬಂಧಿಸಿದ ಸಂಗತಿಗಳು, ಸಮಸ್ಯೆಗಳು ಇತ್ಯಾದಿ.
- ಸಾಮಾನ್ಯ ವಿಜ್ಞಾನ - ಭೌತ-ಜೀವ-ರಸಾಯನ ಶಾಸ್ತ್ರ, ತಂತ್ರಜ್ಞಾನ, ವಿಜ್ಞಾನ ಕ್ಷೇತ್ರದಲ್ಲಿನ ಇತ್ತೀಚಿನ ಪ್ರಗತಿ ಇತ್ಯಾದಿ.

ಎರಡನೇ ಪ್ರಶ್ನೆ ಪತ್ರಿಕೆ, ಸಿವಿಲ್ ಸರ್ವೀಸ್ ಆ್ಯಪ್ಟಿಟ್ಯೂಡ್ ವಿಷಯಕ್ಕೆ ಸಂಬಂಧಿಸಿದ್ದು. ಇದೂ ಕೂಡ 200 ಅಂಕಗಳ ಪ್ರಶ್ನೆ ಪತ್ರಿಕೆ. ಎರಡು ಗಂಟೆ ಕಾಲಾವಧಿ. ಈ ಪತ್ರಿಕೆಯಲ್ಲಿ ಕೆಳಕಂಡಂತೆ ಪ್ರಶ್ನೆಗಳಿರುತ್ತವೆ.

- ಕಾಂಪ್ರಹೆನ್ಷನ್ (ಮಾಹಿತಿಯನ್ನು ಅರ್ಥೈಸಿಕೊಂಡು ಉತ್ತರಿಸುವುದು)
- ಸಂವಹನ ಕೌಶಲಗಳು ಮತ್ತು ಇಂಟರ್‌ನಲ್ ಸ್ಕಿಲ್ಸ್ (ವೈಯಕ್ತಿಕ ಕೌಶಲಗಳು)
- ತಾರ್ಕಿಕ ಆಲೋಚನೆ ಮತ್ತು ತುಲನಾತ್ಮಕ ಸಾಮರ್ಥ್ಯ
- ತೀರ್ಮಾನ ಕೈಗೊಳ್ಳುವಿಕೆ / ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ
- ಸಾಮಾನ್ಯ ಬೌದ್ಧಿಕ ಸಾಮರ್ಥ್ಯ
- ಸಂಖ್ಯಾ ಮೂಲಾಂಶಗಳು (ಸಂಖ್ಯೆಗಳು ಮತ್ತು ಅವುಗಳಿಗಿರುವ ಸಂಬಂಧ, ಏರಿಕೆ ಮತ್ತು ಇಳಿಕೆ ಕ್ರಮ, ಇತ್ಯಾದಿ), ದತ್ತಾಂಶ ವಿಶ್ಲೇಷಣೆ (ಚಾರ್ಟ್, ಗ್ರಾಫ್, ಟೇಬಲ್ ಇತ್ಯಾದಿ).
- ಇಂಗ್ಲಿಷ್ ಭಾಷೆಯಲ್ಲಿರುವ ಪ್ಯಾರಾಗ್ರಾಫ್ ಅನ್ನು ಅರ್ಥೈಸಿಕೊಂಡು ಉತ್ತರಿಸುವ ಕೌಶಲ.
- ಇಂಗ್ಲಿಷ್ ಕಾಂಪ್ರೆಹೆನ್ಷನ್

ಪರೀಕ್ಷೆ ಸಿದ್ಧತೆ ಹೀಗಿರಲಿ..

ಸೌಲಭ್ಯಗಳ ಸಬೂಬು ಹೇಳದೇ, ಪರೀಕ್ಷೆಗೆ ಸಿದ್ಧತೆ ನಡೆಸಬೇಕು. ಈ ಬಗ್ಗೆ ಐಎಎಸ್ ಅಧಿಕಾರಿ ಸತ್ಯಪ್ರಕಾಶ್ ಹೀಗೆ ಹೇಳುತ್ತಾರೆ; 'ನಮ್ಮೂರು ಊರು ಚಿಕ್ಕದು, ಲೈಬ್ರರಿ ಇಲ್ಲ.. ಇಂಥ ನೆಪಗಳು ಪರೀಕ್ಷೆ ಸಿದ್ಧತೆಗೆ ಮುಖ್ಯವಾಗುವುದಿಲ್ಲ. ಕಷ್ಟಪಟ್ಟು ಓದಿ, ಇಷ್ಟಪಟ್ಟು ಓದಿ. ಯಶಸ್ಸು ಗಳಿಸಲೇ ಬೇಕೆಂದು ಗುರಿ ಇಟ್ಟುಕೊಂಡು, ದೃಢ ನಿರ್ಧಾರದಿಂದ ಓದಬೇಕು'.

ಅಂದ ಹಾಗೆ, ಶಿವಮೊಗ್ಗ ಮೂಲದ ಸತ್ಯಪ್ರಕಾಶ್, ಮೊದಲ ಪ್ರಯತ್ನದಲ್ಲೇ ಸಿವಿಲ್ ಸರ್ವೀಸ್ ಪರೀಕ್ಷೆಗಳಲ್ಲಿ 2ನೇ ರ‍್ಯಾಂಕ್‌ನೊಂದಿಗೆ ಐಎಎಸ್ ಹುದ್ದೆಗೆ ಆಯ್ಕೆಯಾದವರು. ಹರಿಯಾಣ ರಾಜ್ಯದ ವಿವಿಧ ಇಲಾಖೆಗಳ ಆಯುಕ್ತರಾಗಿ, ಜಿಲ್ಲಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ.

'ಪ್ರಿಲಿಮ್ಸ್ ಅಥವಾ ಮುಖ್ಯಪರೀಕ್ಷೆಗೆ ಸಿದ್ಧರಾಗುವವರು ಇಂಗ್ಲಿಷ್ ಮತ್ತು ಕನ್ನಡದ ದಿನಪತ್ರಿಕೆಗಳನ್ನು ಕಡ್ಡಾಯವಾಗಿ ಓದಬೇಕು. ಕೆಲವು ವಾರಪತ್ರಿಕೆಗಳು, ಮಾಸಪತ್ರಿಕೆಗಳು, ಸಾಮಾನ್ಯ ಜ್ಞಾನ ಕೈಪಿಡಿಗಳು, ವ್ಯಕ್ತಿತ್ವ ವಿಕಾಸದ ಪುಸ್ತಕಗಳನ್ನು ಅಧ್ಯಯನ ಮಾಡಿ. ಮೂಲಭೂತ ಅಂಕಿ–ಅಂಶಗಳನ್ನು ಸಂಗ್ರಹಿಸಿಕೊಂಡು, ಟಾರ್ಗೆಟ್ ಓರಿಯಂಟೆಡ್ ಆಗಿ ಓದಬೇಕು. ದೊಡ್ಡದನ್ನು ಸಾಧಿಸುವ, ಎಲ್ಲರಿಗೂ ಹೆಮ್ಮೆ ಎನಿಸುವಂತೆ ಬೆಳೆಯ ಬೇಕೆಂದು ಕನಸು ಕಟ್ಟಿಕೊಂಡು ಓದಲು ಆರಂಭಿಸಿ' ಎಂದು ಸತ್ಯಪ್ರಕಾಶ್ ಸಲಹೆ ನೀಡುತ್ತಾರೆ. ಕನಿಷ್ಠ ಒಂದು ನೂರು ದಿನಗಳ ಕಾಲ ಏಕಾಗ್ರತೆಯಿಂದ ಸತತ ಅಭ್ಯಾಸ (ಫೋಕಸ್ಡ್ ಸ್ಟಡಿ) ಮಾಡಿದರೆ ಪೂರ್ವಭಾವಿ ಪರೀಕ್ಷೆ ಪಾಸು ಮಾಡಬಹುದು' ಎನ್ನುತ್ತಾರೆ ಅವರು.

ಯಾವುದಕ್ಕೆ ಎಷ್ಟು ಸಮಯ?

- ಕೇಂದ್ರೀಯ ವಿದ್ಯಾಲಯಗಳ 6 ರಿಂದ 12 ನೇ ತರಗತಿವರೆಗಿರುವ ಪುಸ್ತಕಗಳಲ್ಲಿರುವ ಮಾಹಿತಿಯನ್ನು ಒಮ್ಮೆ ತಿರುವಿ ಹಾಕಿ. ಇದಕ್ಕೆ ಎರಡು ವಾರಗಳ ಕಾಲಾವಧಿ ಸಾಕು.
- ವಾರ್ಷಿಕ ಪುಸ್ತಕಗಳು, ಐಚ್ಛಿಕ ವಿಷಯದ ಪುಸ್ತಕ ಮತ್ತು ನೋಟ್ಸ್ ತಿರುವಿ ಹಾಕಲು ಎರಡು ತಿಂಗಳು ಬೇಕಾಗುತ್ತದೆ.
- ಉಳಿದ ಸಮಯವನ್ನು ಹಳೆಯ ಪ್ರಶ್ನೆಪತ್ರಿಕೆಗಳನ್ನು ಬಿಡಿಸಲು ಉಪಯೋಗಿಸುವುದು ಲಾಭದಾಯಕ.

ಕೇವಲ ಪೂರ್ವಭಾವಿ ಪರೀಕ್ಷೆಗೆ ಸಿದ್ಧತೆ ನಡೆಸುವುದಕ್ಕೆ ಬದಲಾಗಿ ಮುಖ್ಯ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆಗೂ ಜೊತೆ ಜೊತೆಯಲ್ಲಿಯೇ ನೋಟ್ಸ್ ಮಾಡಿಕೊಳ್ಳುತ್ತಾ ಅಧ್ಯಯನ ಮಾಡಿದರೆ, ಖಂಡಿತಾ ಸಂದರ್ಶನಕ್ಕೆ ಹಾಜರಾಗುವಷ್ಟು ಅರ್ಹತೆ ಗಳಿಸುತ್ತಾರೆ ಎನ್ನುವುದು ಸತ್ಯಪ್ರಕಾಶ್ ಅವರ ಅಭಿಪ್ರಾಯ. ❖

ಕೇಂದ್ರ ಲೋಕಸೇವಾ ಆಯೋಗವು ನಡೆಸುವ ಸ್ಪರ್ಧಾತ್ಮ ಪರೀಕ್ಷೆಗೆ ಅಗತ್ಯವಾದ ವಿದ್ಯಾರ್ಹತೆ, ಮತ್ತಿತರ ಮಾಹಿತಿಗಾಗಿ ಈ ಜಾಲತಾಣಗಳನ್ನು ನೋಡಿ: www.upsc.gov.in www.iasexamportal.com www.vajiramandravi.com, www.careerindia.com

ಮಾದರಿ ಪ್ರಶ್ನೋತ್ತರಗಳು

ಸಹಾಯಕ ಪ್ರಾಧ್ಯಾಪಕರ ಹುದ್ದೆ ಹಾಗೂ ಕೆಎಸ್‌ಆರ್‌ಪಿ-ಐಆರ್‌ಬಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ

ಭಾಗ–8

ಸಾಮಾನ್ಯ ಜ್ಞಾನ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್-ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹುದ್ದೆಗಳು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳು ಶೀಘ್ರದಲ್ಲೇ ನಡೆಯಲಿವೆ. ಎರಡೂ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ದೇಶದಲ್ಲೇ ಅತಿ ದೊಡ್ಡ ನದಿ ಬಯಲನ್ನು ಹೊಂದಿರುವ ಗಂಗಾನದಿಯನ್ನು __________ರಲ್ಲಿ ರಾಷ್ಟ್ರೀಯ ನದಿ (ನ್ಯಾಷನಲ್ ರಿವರ್) ಎಂದು ಘೋಷಿಸಲಾಗಿದೆ

ಎ) 2008 ಬಿ) 2014 ಸಿ) 2018 ಡಿ) 2001

ಉತ್ತರ:ಎ

2) ಜನವರಿ 10, 2022ರ ಹೊತ್ತಿಗೆ ದೇಶದಲ್ಲಿ ಸುಮಾರು 61,400 ಸ್ಟಾರ್ಟ್‌ಅಪ್‌ಗಳನ್ನು ಗುರುತಿಸಲಾಗಿದೆ. ಬೆಂಗಳೂರಿಗಿಂತ ಹೆಚ್ಚು ಸ್ಟಾರ್ಟ್‌ಅಪ್‌ಗಳು ದೆಹಲಿಯಲ್ಲಿವೆ. ಹಾಗಾದರೆ ಯಾವ ರಾಜ್ಯದಲ್ಲಿ ಅತಿ ಹೆಚ್ಚು ಸ್ಟಾರ್ಟ್‌ಅಪ್‌ಗಳು ಕಾರ್ಯನಿರ್ವಹಿಸುತ್ತಿವೆ?

ಎ) ಕರ್ನಾಟಕ ಬಿ) ಮಹಾರಾಷ್ಟ್ರ
ಸಿ) ಆಂಧ್ರಪ್ರದೇಶ ಡಿ) ದೆಹಲಿ

ಉತ್ತರ:ಬಿ

3) ಯಾವ ವರ್ಷವನ್ನು 'ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷ' ಎಂದು ಘೋಷಿಸಲಾಗಿದೆ?

ಎ) 2022 ಬಿ) 2023
ಸಿ) 2024 ಡಿ) 2025

4) '1938ರ ವಿಮಾ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಎಫ್‌ಡಿಐ ಮಿತಿಯನ್ನು ಶೇ 49 ರಿಂದ ಶೇ __________ ಕ್ಕೆ ಹೆಚ್ಚಿಸಲು ಹಾಗೂ ಸುರಕ್ಷತೆಗಳೊಂದಿಗೆ ವಿದೇಶಿ ಮಾಲೀಕತ್ವಕ್ಕೆ ಮತ್ತು ನಿಯಂತ್ರಣಕ್ಕೆ ಅವಕಾಶ ನೀಡಲಾಗುವುದು' ಎಂದು ಬಜೆಟ್ ಭಾಷಣದಲ್ಲಿ ನಿರ್ಮಲಾ ಸೀತಾರಾಮ್ ಅವರು ತಿಳಿಸಿದ್ದಾರೆ.

ಎ) ಶೇ 74 ಬಿ) ಶೇ 85 ಸಿ) ಶೇ 65 ಡಿ) ಶೇ 100

ಉತ್ತರ:ಎ

5) ಬ್ಲಾಕ್‌ಚೈನ್ ತಂತ್ರಜ್ಞಾನ ಬಳಸಿ ಶೀಘ್ರದಲ್ಲೇ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಡಿಜಿಟಲ್ ರೂಪಾಯಿಯಾದ ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿ (ಸಿಬಿಡಿಸಿ) ವಿತರಿಸಲಿದೆ. ಡಿಜಿಟಲ್ ರೂಪದಲ್ಲಿ ಕರೆನ್ಸಿ ತರಲು ಯಾವ ಕಾಯ್ದೆಗೆ ತಿದ್ದುಪಡಿ ತರಲಾಗುವುದು?

ಎ) 1935ರ ಆರ್‌ಬಿಐ ಕಾಯ್ದೆ
ಬಿ) 1944ರ ಆರ್‌ಬಿಐ ಕಾಯ್ದೆ
ಸಿ) 1934ರ ಆರ್‌ಬಿಐ ಕಾಯ್ದೆ
ಡಿ) 1947ರ ಆರ್‌ಬಿಐ ಕಾಯ್ದೆ

ಉತ್ತರ: ಸಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ನಿಮಗಿದು ಗೊತ್ತೆ?

ಬ್ಲಾಕ್ ಬಾಕ್ಸ್

60ರ ದಶಕದಿಂದ ಅಂತರರಾಷ್ಟ್ರೀಯ ವಿಮಾನಗಳಲ್ಲಿ ಎರಡು ಮುಖ್ಯ ಉಪಕರಣಗಳನ್ನು ಬಳಸಲಾಗುತ್ತಿದೆ. ಒಂದು ಡಿಜಿಟಲ್ ಫ್ಲೈಟ್ ಡಾಟಾ ರೆಕಾರ್ಡರ್ ಮತ್ತು ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್. ಇವುಗಳನ್ನು ವಿಮಾನದಲ್ಲಿ ಪ್ರತ್ಯೇಕ ಇಡಲಾಗುತ್ತದೆ. ಉಕ್ಕಿನಿಂದ ತಯಾರಿಸಿರುವ ಈ ಪೆಟ್ಟಿಗೆಗಳನ್ನು 'ಬ್ಲಾಕ್ ಬಾಕ್ಸ್' ಎನ್ನುತ್ತಾರೆ. ಇವುಗಳನ್ನು ಶಾಖ ನಿರೋಧಕ ವಸ್ತುಗಳಿಂದ ತಯಾರಿಸಲಾಗಿದ್ದು, 1 ಸಾವಿರ ಡಿಗ್ರಿ ಸೆಂ. ವರೆಗಿನ ಉಷ್ಣಾಂಶವನ್ನು ಅರ್ಧಗಂಟೆಗಳ ಕಾಲ ತಡೆಯುವ ಸಾಮರ್ಥ್ಯ ಹೊಂದಿರುತ್ತವೆ. ಅಪಘಾತ ಸಂಭವಿಸಿದಾಗಲೂ ಪೆಟ್ಟಿಗೆಗಳಿಗೆ ಹಾನಿಯಾಗುವುದಿಲ್ಲ.

ಇದರಲ್ಲಿರುವ ಟೇಪ್ ಅನ್ನು ಸ್ಟೈನ್‌ಲೆಸ್ ಸ್ಟೀಲ್‌ನಿಂದ ಮಾಡಿರುತ್ತಾರೆ. ಹಾಗಾಗಿ ಇದು ಎರಡು ದಿನಗಳ ಕಾಲ ಸಮುದ್ರದ ಆಳದಲ್ಲಿದ್ದರೂ ಟೇಪ್‌ಗೆ ಹಾನಿಯಾಗುವುದಿಲ್ಲ. ಯಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ದಾಖಲು ಮಾಡುವ ಈ ಸಾಧನವನ್ನು ವಿಮಾನದ ಹಿಂಭಾಗದಲ್ಲಿ ಇಡಲಾಗುತ್ತದೆ. ಇನ್ನೊಂದು ಸಾಧನವಾದ ಕಾಕ್‌ಪಿಟ್ಸ್ ವಾಯ್ಸ್ ರೆಕಾರ್ಡರ್ ಅನ್ನು ಕಾಕ್‌ಪಿಟ್‌ನೊಳಗೆ ಇಡಲಾಗುತ್ತದೆ.

ಫ್ಲೈಟ್ ಡಾಟಾ ರೆಕಾರ್ಡರ್ ಮಲ್ಟಿ ಚಾನೆಲ್ ರೆಕಾರ್ಡರ್ ಆಗಿದೆ. ಈ ಟೇಪ್‌ನ ಉದ್ದ 6 ಸಾವಿರ ಅಡಿ. ಸುಮಾರು 25 ತಾಸುಗಳ ಯಾನದ ಮಾಹಿತಿಯನ್ನು ದಾಖಲಿಸುತ್ತದೆ. ವಿಮಾನದ ಉಷ್ಣಾಂಶ, ವೇಗ, ಬೆಳಕಿನ ದಿಕ್ಕು, ಎಂಜಿನ್ ಶಬ್ದ, ವಿವಿಧ ಉಪಕರಣಗಳ ರೀಡಿಂಗ್, ಗಾಳಿ ಬೀಸುವ ವೇಗ ಸೇರಿದಂತೆ 64 ಪ್ಯಾರಾಮೀಟರ್‌ಗಳನ್ನು ರೆಕಾರ್ಡ್ ಮಾಡಬಲ್ಲದು. ಇವು ವಿಮಾನದ ಅಪಘಾತಗಳ ಬಗ್ಗೆ ಮಾಹಿತಿ ನೀಡುತ್ತದೆ. ಈ ಟೇಪ್ ಮೇಲೆ ರೆಕಾರ್ಡ್ ಆದ ಮಾಹಿತಿಯನ್ನು ಓದಿ, ವಿಶ್ಲೇಷಿಸಲು ದೀರ್ಘ ಕಾಲ ಬೇಕಾಗುತ್ತದೆ.

ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್ ಕೂಡ ಒಂದು ಮಾದರಿಯ ಟೇಪ್ ರೆಕಾರ್ಡರ್. ಇದು ಕಾಕ್‌ಪಿಟ್‌ನಲ್ಲಿ ಚಾಲಕರ ನಡುವಿನ ಸಂಭಾಷಣೆ ಮುದ್ರಿಸುತ್ತದೆ. ನಂತರ ಕಾಕ್‌ಪಿಟ್‌ನಲ್ಲಿ ಅಳವಡಿಸಲಾದ ಧ್ವನಿ ರೆಕಾರ್ಡರ್‌ಗೆ ಬರುತ್ತದೆ. ಇದು ಅಪಘಾತ ಸಂಭವಿಸುವುದಕ್ಕೆ ಕೊನೆಯ ಅರ್ಧ ಗಂಟೆಯ ಅವಧಿಯಲ್ಲಿ ಆಡಿದ ಮಾತುಗಳನ್ನು ರೆಕಾರ್ಡ್ ಮಾಡಿಕೊಂಡಿರುತ್ತದೆ. ಇದಕ್ಕೆ ಮುಂಚೆ ದಾಖಲಾಗಿದ್ದ ಮಾಹಿತಿಯೆಲ್ಲ ತನ್ನಷ್ಟಕ್ಕೆ ತಾನೇ ಅಳಿಸಿಹೋಗುತ್ತದೆ. ವಿಮಾನ ಅಪಘಾತಕ್ಕೀಡಾದಾಗ ಅಪಘಾತದ ಕಾರಣಗಳ ಪತ್ತೆಗಾಗಿ ಈ ಎರಡು ಉಪಕರಣಗಳಿಗಾಗಿ ಹುಡುಕಲಾಗುತ್ತದೆ.

ಪ್ರಜಾವಾಣಿ ನೋಡಿಯೊ

'ಸಾಮಾನ್ಯ ಜ್ಞಾನ' ಕುರಿತ ಇನ್ನಷ್ಟು ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ಉದ್ಯೋಗ ವಾರ್ತೆ

ಎಸ್‌ಬಿಐನಲ್ಲಿ ಹುದ್ದೆಗಳು

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಖಾಲಿ ಇರುವ ಅಸಿಸ್ಟೆಂಟ್ ಮ್ಯಾನೇಜರ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳ ಸಂಖ್ಯೆ: 48
- ಸ್ಥಳ: ಬೆಂಗಳೂರು ಹಾಗೂ ಮುಂಬೈ
- ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಪದವಿ ಪಡೆದಿರಬೇಕು.
- ವಯೋಮಿತಿ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನೇಮಕಾತಿ ನಿಯಮಗಳ ಅನ್ವಯ ಅಭ್ಯರ್ಥಿಗೆ ಗರಿಷ್ಠ 40 ವರ್ಷ ಮೀರಿರಬಾರದು.
- ಅರ್ಜಿ ಶುಲ್ಕ: ಸಾಮಾನ್ಯ ವರ್ಗ, ಒಬಿಸಿ ಅಭ್ಯರ್ಥಿಗಳಿಗೆ ₹750, ಎಸ್‌ಸಿ, ಎಸ್‌ಟಿ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.
- ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ, ಸಂದರ್ಶನದ ಮೂಲಕ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಫೆಬ್ರುವರಿ 25, 2022
- ಹೆಚ್ಚಿನ ಮಾಹಿತಿಗೆ: sbi.co.in

ಗಡಿ ಭದ್ರತಾ ಪಡೆಯಲ್ಲಿ ಹುದ್ದೆಗಳು

ಗಡಿ ಭದ್ರತಾ ಪಡೆ (ಬಿಎಸ್‌ಎಫ್) 2022ನೇ ಸಾಲಿನ ನೇಮಕಾತಿ ಕುರಿತಂತೆ ಪ್ರಕಟಣೆ ಹೊರಡಿಸಿದೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆ: ಕಾನ್‌ಸ್ಟೇಬಲ್ (ಜನರಲ್ ಡ್ಯೂಟಿ)
- ಹುದ್ದೆಗಳ ಸಂಖ್ಯೆ: 2788
- ಸ್ಥಳ: ದೇಶದೆಲ್ಲೆಡೆ
- ವಿದ್ಯಾರ್ಹತೆ: ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ 10ನೇ ತರಗತಿ, 12ನೇ ತರಗತಿ ಉತ್ತೀರ್ಣರಾಗಿರಬೇಕು.
- ವಯೋಮಿತಿ: ಕನಿಷ್ಠ 18 ವರ್ಷ ಹಾಗೂ ಗರಿಷ್ಠ 23 ವರ್ಷ. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷ, ಮಾಜಿ ಯೋಧರಿಗೆ 5 ವರ್ಷ ವಯೋಮಿತಿ ಸಡಿಲಿಕೆ ಇದೆ.
- ನೇಮಕಾತಿ ಪ್ರಕ್ರಿಯೆ: ದಾಖಲಿ ಪರಿಶೀಲನೆ, ದೈಹಿಕ ಸಾಮರ್ಥ್ಯ ಪರೀಕ್ಷೆ, ಲಿಖಿತ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ.
- ಅರ್ಜಿ ಶುಲ್ಕ: ಇಲ್ಲ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 1, 2022
- ಹೆಚ್ಚಿನ ಮಾಹಿತಿಗೆ: https://rectt.bsf.gov.in/

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Poem - 4

The Song of India

English

1. Who are the two speakers in the poem 'The Song of India'? What do they want to speak about India? OR Summary of the Poem 'The Song of India' OR Sum up the conversation between the poet and the Motherland in your own words.

The poet and the motherland are the two speakers in the poem 'The Song of India'. The poet wants to sing about the physical features of his motherland which has the Himalayas with snow born peaks and the three seas wash the palm of the motherland and the clear dawn with its pure golden lines. Whereas the motherland expects to listen the beggars and lepers who are swarming in the streets for their livelihood and about their filth and dirty that foul her seclusioned forests. The poet wants to sing about rock cut temples, epics in stone, the seers, prophets, and their contributions. But she urges to sing about the millions of people are toiling as the slaves without self reliance with wrinkled faces. Helpless children were born in a bleak and dark home. She stresses to sing about the iron men who fought for the freedom and struggled to overcome the social evils. Finally the motherland urges to sing about the future of India.

2. What does the 'Motherland writing the Book of the Morrow' signify?

The 'motherland writing the 'Book of the Morrow' signifies the future of India and the earth's destiny that the Sun-God is cancelling all the sorrows of the people. She drives away like a clear dawn the poverty, communalism, class, and caste discrimination in our country.

ಎಸ್ಸೆಸ್ಸೆಲ್ಸಿ



3. Why is the poet 'querulous'? What does he want to sing?

The poet is 'querulous 'because the motherland did not like to hear a song about the positive side of physical features and the achievements made by the countrymen. Temples, dams, lakes, and the modern technology of the country, whereas the motherland expected to sing about the problems and the socio-economic conditions of the people of India.

4. "Sing of the helpless child Born in a bleak, dark home."

a) Who made this statement? Motherland

b) What does 'bleak' mean here? 'Bleak' means in a hopeless and no future.

c) What does the speaker expect?

The speaker expects to listen the condition of the new born children.

5. "That beat into my ears like gong that flew about me a pitiful thing. Like great white birds."

a) Whom does 'pitiful thing' refer here? The poet himself.

b) What is the figure of speech used? Simile.

c) What does 'that' mean in the context?

'That' means the indignant word of the motherland. It means the angry and not fair words of motherland defeats the poet.

Annappa Shetty MA,M.Ed, SRP in English,Hassan

ವಿದ್ಯುದಾವೇಶಗಳು ಮತ್ತು ಕ್ಷೇತ್ರಗಳು

ಭೌತಶಾಸ್ತ್ರ

ಪಿಯುಸಿ

(...ಹಿಂದಿನ ಸಂಚಿಕೆಯಿಂದ)

Eಯು ಸದಿಶ ಪರಿಮಾಣವಾಗಿದ್ದು, ಅದರ ಪರಿಮಾಣವು ಸ್ಥಳಾವಕಾಶದಲ್ಲಿನ ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ಬದಲಾಗುತ್ತದೆ ಮತ್ತು ಇದನ್ನು ಆಕರ ವಿದ್ಯುದಾವೇಶಗಳ ಸ್ಥಾನಗಳಿಂದ ಕಂಡುಕೊಳ್ಳಬಹುದು.

ವಿದ್ಯುತ್ ಕ್ಷೇತ್ರದ ಭೌತಿಕ ಮಹತ್ವ


ವಿದ್ಯುತ್ ಕ್ಷೇತ್ರದ ಕಲ್ಪನೆಯನ್ನು ಇಲ್ಲಿ, ಏತಕ್ಕಾಗಿ ಸೇರಿಸಲ್ಪಟ್ಟಿದೆ ಎಂದು ನೀವು ಆಶ್ಚರ್ಯವಾಗಬಹುದು. ಯಾವುದೇ ವಿದ್ಯುದಾವೇಶಗಳ ವ್ಯವಸ್ಥೆಯಲ್ಲಿ, ಒಂದು ವಿದ್ಯುದಾವೇಶದ ಮೇಲೆ ಬೀರುವ ಅಳತೆಗೆ ನಿಲುಕುವ ಪ್ರಮಾಣದ ಬಲವನ್ನು ಕೂಲಂಬ್‌ನ ನಿಯಮ ಮತ್ತು ಆದ್ಯಾರೋಪಣ ತತ್ವಗಳನ್ನು [ಸಮೀಕರಣ 5)] ಬಳಸಿಕೊಂಡು ನೇರವಾಗಿ ಕಂಡುಹಿಡಿಯಬಹುದು.

ಸ್ಥಾಯಿ ವಿದ್ಯುತ್‌ನ ಅಧ್ಯಯನ ಕ್ಷೇತ್ರಕ್ಕೆ ವಿದ್ಯುತ್ ಕ್ಷೇತ್ರದ ತತ್ವವು ತುಂಬಾ ಅನುಕೂಲಕರವಾಗಿದೆ. ಆದರೆ, ಇದು ಅನಿವಾರ್ಯವಲ್ಲ. ವಿದ್ಯುದಾವೇಶಗಳ ವ್ಯವಸ್ಥೆಯಿಂದ ಮೂಡಿದ ವಿದ್ಯುತ್ ಪರಿಸರವನ್ನು ಲಕ್ಷಣೀಕರಿಸಲಿಕ್ಕೆ ವಿದ್ಯುತ್ ಕ್ಷೇತ್ರ ಒಂದು ಸೊಗಸಾದ ದಾರಿ. ವಿದ್ಯುದಾವೇಶಗಳ ವ್ಯವಸ್ಥೆಯ ಸುತ್ತಲಿನ ಸ್ಥಳಾವಕಾಶದಲ್ಲಿನ ಒಂದು ಬಿಂದುವಿನಲ್ಲಿನ ವಿದ್ಯುತ್ ಕ್ಷೇತ್ರವು, ಅದೇ ಬಿಂದುವಿನಲ್ಲಿ ಇರಿಸಿದ ಧನಾತ್ಮಕ ಪರೀಕ್ಷಕ ಘಟಕ ವಿದ್ಯುದಾವೇಶವು (ವಿದ್ಯುದಾವೇಶಗಳ ವ್ಯವಸ್ಥೆಯನ್ನು ಕದಲಿಸದಂತೆ) ಅನುಭವಿಸುವ ಬಲವನ್ನು ಹೇಳುತ್ತದೆ. ವಿದ್ಯುತ್ ಕ್ಷೇತ್ರ ಎಂಬುದು ವಿದ್ಯುದಾವೇಶಗಳ ವ್ಯವಸ್ಥೆಯ ಒಂದು ಲಕ್ಷಣ ಮತ್ತು ಇದನ್ನು ಕಂಡುಕೊಳ್ಳಲು ಒಂದು ಬಿಂದುವಿನಲ್ಲಿ ನೀವು ಇರಿಸಿದ ಪರೀಕ್ಷಕ ವಿದ್ಯುದಾವೇಶದ ಮೇಲೆ ಇದು ಅವಲಂಬಿತವಾಗಿಲ್ಲ. ಕ್ಷೇತ್ರ ಎನ್ನುವ ಪದ ಭೌತಶಾಸ್ತ್ರದಲ್ಲಿ ಸಾಮಾನ್ಯವಾಗಿ ಆಯಾ ಸ್ಥಳಾವಕಾಶದಲ್ಲಿನ ಪ್ರತಿಯೊಂದು ಬಿಂದುವಿನಲ್ಲಿನ ಪ್ರಮಾಣವನ್ನು ವ್ಯಾಖ್ಯಾನಿಸುತ್ತದೆ ಮತ್ತು ಇದು ಬಿಂದುವಿನಿಂದ ಬಿಂದುವಿಗೆ ಬದಲಾಗಬಹುದು. ವಿದ್ಯುತ್ ಕ್ಷೇತ್ರವು ಒಂದು ಸದಿಶ ಕ್ಷೇತ್ರವಾಗಿದೆ ಏಕೆಂದರೆ, ಬಲ ಒಂದು ಸದಿಶ ಪರಿಮಾಣವಾಗಿದೆ.

ನಾವು ಯಾವಾಗ ಸ್ಥಾಯಿವಿದ್ಯುತ್ ಅಧ್ಯಯನ ಕ್ಷೇತ್ರದಿಂದ ಆಚೆಹೋಗಿ, ಕಾಲಾವಲಂಬಿತ ವಿದ್ಯುತ್ಕಾಂತೀಯ ವಿದ್ಯಮಾನಗಳ ಬಗ್ಗೆ ಗಮನಿಸುತ್ತೇವೋ, ಆಗ ವಿದ್ಯುತ್ ಕ್ಷೇತ್ರದ ನಿಜವಾದ ಭೌತಿಕ ಮಹತ್ವ ಹೊರಬರುತ್ತದೆ. ವೇಗೋತ್ಕರ್ಷಿತ ಚಲನೆಯಲ್ಲಿರುವ q_1, q_2 ಎರಡು ಬೇರೆ ಬೇರೆ ವಿದ್ಯುದಾವೇಶಗಳ ನಡುವಿನ ಬಲವನ್ನು ತೆಗೆದುಕೊಂಡಿವೆ ಎಂದು ಊಹಿಸಿ. ಈಗ ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ಸಂಕೇತಗಳು ಅಥವಾ ಮಾಹಿತಿಗಳು ರವಾನೆಯಾಗುವ ಗರಿಷ್ಠ ವೇಗ C, ಅದು, ಬೆಳಕಿನ ವೇಗ. ಹಾಗಾಗಿ, q_2 ಮೇಲೆ q_1 ನ ಯಾವುದೇ ಚಲನೆಯ ಪರಿಣಾಮವು ತತ್‌ಕ್ಷಣದಲ್ಲಿ ಮೂಡುವುದಿಲ್ಲ. ಇಲ್ಲಿ ಪರಿಣಾಮ (q_2ಮೇಲಿನ ಬಲ) ಮತ್ತು ಕಾರಣ (q_1ನ ಚಲನೆ) ಗಳ ನಡುವೆ ಕೆಲಕಾಲ ವಿಳಂಬವಾಗುತ್ತದೆ. ಇಲ್ಲಿ, ಖಚಿತವಾಗಿಯೂ, ಈ ವಿದ್ಯುತ್ ಕ್ಷೇತ್ರದ ಕಲ್ಪನೆಯು (ಕಡ್ಡಾಯವಾಗಿ, ವಿದ್ಯುತ್ಕಾಂತೀಯ ಕ್ಷೇತ್ರಕ್ಕೆ ಹೊಂದಿಕೊಂಡಂತೆ) ಸಹಜವಾಗಿದೆ ಮತ್ತು ತುಂಬಾ ಉಪಯುಕ್ತವಾಗಿದೆ. ಇಲ್ಲಿ ಕ್ಷೇತ್ರದ ಚಿತ್ರಣ ಹೀಗಿದೆ: ವೇಗೋತ್ಕರ್ಷಿತ ಚಲನೆಯಲ್ಲಿರುವ q_1 ವಿದ್ಯುದಾವೇಶವು ವಿದ್ಯುತ್ಕಾಂತೀಯ ಅಲೆಗಳನ್ನು ಉತ್ಪತ್ತಿ ಮಾಡುತ್ತದೆ, ಇದು ಅ ವೇಗದಲ್ಲಿ ಹರಿದು q_2 ನ್ನು ತಲುಪುತ್ತದೆ ಮತ್ತು q_2 ಮೇಲೆ ಬಲದ ಪರಿಣಾಮವನ್ನು ಬೀರುತ್ತದೆ. ವಿದ್ಯುತ್ ಕ್ಷೇತ್ರದ ಕಲ್ಪನೆಯು ತುಂಬಾ ಸೊಗಸಾಗಿ ಕಾಲ ವಿಳಂಬವನ್ನು ಪರಿಗಣಿಸುತ್ತದೆ. ಹಾಗಾಗಿ, ವಿದ್ಯುತ್ ಮತ್ತು ಕಾಂತ ಕ್ಷೇತ್ರಗಳನ್ನು ವಿದ್ಯುದಾವೇಶಗಳ ಮೇಲಿನ ಕೇವಲ ಇವುಗಳ ಪರಿಣಾಮಗಳ (ಬಲಗಳ) ಮೇಲೆ ಪತ್ತೆಹಚ್ಚಬಹುದಾದರೂ, ಇವುಗಳು ಕೇವಲ ಗಣಿತೀಯ ರಚನೆಗಳಲ್ಲ, ಇವುಗಳು ತಮ್ಮದೇ ಆದ ಚಲನಶಾಸ್ತ್ರವನ್ನು ಹೊಂದಿವೆ, ಅಂದರೆ ಇವುಗಳು ತಮ್ಮದೇ ಆದ ನಿಮಯಗಳ ಪ್ರಕಾರ ಮಾರ್ಪಾಡಾಗುತ್ತವೆ.

ಸಮಸ್ಯೆ ಮತ್ತು ಪರಿಹಾರ

$2.0 \times 10^4 NC^{-1}$ ಮೌಲ್ಯವಿರುವ ಏಕರೂಪ ವಿದ್ಯುತ್ ಕ್ಷೇತ್ರದಲ್ಲಿ ಒಂದು ಇಲೆಕ್ಟ್ರಾನ್ 1.5 cm ದೂರ ಬೀಳುತ್ತದೆ. [ಚಿತ್ರ (a)]. ಕ್ಷೇತ್ರದ ಮೌಲ್ಯವನ್ನು ಬದಲಾಯಿಸದೆ ಅದರ ದಿಕ್ಕನ್ನು ಪರಾವರ್ತಿಸಿದರೆ ಹಾಗೂ ಒಂದು ಪ್ರೋಟಾನ್ ಅದೆ ದೂರದಲ್ಲಿ ಬೀಳುತ್ತದೆ. [ಚಿತ್ರ.(b)]. ಬೀಳಲು ಬೇಕಾದ ಸಮಯವನ್ನು ಲೆಕ್ಕ ಹಾಕಿರಿ. ಇದನ್ನು ಗುರುತ್ವದಲ್ಲಿನ ಮುಕ್ತ ಪತನಕ್ಕಿರುವ ವ್ಯತ್ಯಾಸವನ್ನು ತಿಳಿಸಿರಿ.



a b

ಪರಿಹಾರ: [ಚಿತ್ರ.(a)]. ಇದರಲ್ಲಿ ಕ್ಷೇತ್ರವು ಮೇಲಕ್ಕಿರುತ್ತದೆ. ಇದರಿಂದ ಋಣ ಆವೇಶವಿರುವ ಇಲೆಕ್ಟ್ರಾನ್ eE ಮೌಲ್ಯವಿರುವ ಬಲವನ್ನು ಕೆಲ ದಿಕ್ಕಿನಲ್ಲಿ ಅನಿಭವಿಸುತ್ತದೆ. ಇಲ್ಲಿ E ವಿದ್ಯುತ್ ಕ್ಷೇತ್ರದ ಮೌಲ್ಯವಾಗಿರುತ್ತದೆ. ಎಲೆಕ್ಟ್ರಾನ್‌ನ ವೇಗೋತ್ಕರ್ಷ.

$a_e = eE/m_e$

m_e ಎಲೆಕ್ಟ್ರಾನಿನ ರಾಶಿಯಾಗಿರುತ್ತದೆ.

ನಿಶ್ಚಲ ಸ್ಥಿತಿಯಿಂದ h ದೂರಕ್ಕೆ ಚಲಿಸಲು ಬೇಕಾದ ಕಾಲಾವಕಾಶ

$$t_e = \sqrt{\frac{2h}{a_e}} = \sqrt{\frac{2hm_e}{eE}}$$

$1.6 * 10^{-19}C$, $me = 9.11 * 10^{-31}$ kg,

$E = 2.0 * 10^4 N C^{-1}$, $h = 1.5 * 10^{-2}$ m,

$t_e = 2.9 * 10^{-9}s$

[ಚಿತ್ರ(b)]ಯಲ್ಲಿ ಕ್ಷೇತ್ರವು ಕೆಳ ದಿಕ್ಕಿನಲ್ಲಿರುತ್ತದೆ, ಧನಾತ್ಮಕ ಆವೇಶವಿರುವ ಪ್ರೋಟಾನ್ eE ಮೌಲ್ಯದ ಬಲವನ್ನು ಕೆಳ ದಿಕ್ಕಿನಲ್ಲಿ ಅನುಭವಿಸುತ್ತದೆ.

ಪ್ರೋಟಾನ್ ವೇಗೋತ್ಕರ್ಷವ $a_p = eE/m_p$

ಇಲ್ಲಿ m_p ಪ್ರೋಟಾನ್ ರಾಶಿಯಾಗಿರುತ್ತದೆ. $m_p = 1.67 * 10^{-27}$ kg.

ಪ್ರೋಟಾನ್ ಬೀಳುವ ಕಾಲಾವಕಾಶ

$$t_p = \sqrt{\frac{2h}{a_p}} = \sqrt{\frac{2hm_p}{eE}} = 1.3 \times 10^{-7} s$$

ಅಂದರೆ ಭಾರವಾಗಿರುವ ಕೇಂದ್ರ (ಪ್ರೋಟಾನ್) ಅಷ್ಟೇ ದೂರದಲ್ಲಿ ಚಲಿಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಇದು ಗುರುತ್ವದಲ್ಲಿನ ಮುಕ್ತ ಪತನಕ್ಕೆ ವಿರುದ್ಧವಾಗಿರುತ್ತದೆ. ಏಕೆಂದರೆ ಗುರುತ್ವದಲ್ಲಿ ಕಾಯದ ರಾಶಿಯನ್ನು ಅವಲಂಬಿಸಸಿರುವುದಿಲ್ಲ. ಈ ಉದಾಹರಣೆಯಲ್ಲಿ ಕಾಯದ ರಾಶಿಯನ್ನು ಲೆಕ್ಕ ಹಾಕುವಾಗ ಗುರುತ್ವವೇಗೋತ್ಕರ್ಷವನ್ನು ಪರಿಗಣಿಸುವುದಿಲ್ಲ ಎಂಬುದನ್ನು ಗಮನಿಸಬೇಕು. ಇದು ನ್ಯಾಯಯುತವಾಗಿದೆ ಎಂದು ನೋಡಲು ಈ ವಿದ್ಯುತ್ ಕ್ಷೇತ್ರದಲ್ಲಿ ಪ್ರೋಟಾನ್‌ನ ವೇಗೋತ್ಕರ್ಷವನ್ನು ಕಂಡುಹಿಡಿಯೋಣ.

$$a_p = \frac{eE}{m_p} = \frac{(1.6 \times 10^{-19}\ C) \times (2.0 \times 10^4\ NC^{-1})}{1.67 \times 10^{-27}\ kg} = 1.9 \times 10^{12}\ ms^{-2}$$

ಇದು g (9.8 m s^{-2}), ಮೌಲ್ಯಕ್ಕೆ ಹೋಲಿಸಿದರೆ ಬಹುದೊಡ್ಡದಾಗಿದೆ.

ಎಲೆಕ್ಟ್ರಾನಿನ ವೇಗೋತ್ಕರ್ಷವು ಇನ್ನು ಹೆಚ್ಚಾಗುತ್ತದೆ. ಆದ್ದರಿಂದ ಗುರುತ್ವವೇಗೋತ್ಕರ್ಷವನ್ನು ಪರಿಗಣಿಸಬೇಕಾಗಿಲ್ಲ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತಶಾಸ್ತ್ರದ 'ಡಿಟರ್ಮಿನೆಂಟ್ಸ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನೀವು ಯಾರಿಗಾದರೂ ಏನಾದರೂ ಸಹಾಯ ಮಾಡಿದ್ದರೆ ಅದನ್ನು ಎಂದಿಗೂ ನೆನಪಿನಲ್ಲಿ ಇಟ್ಟುಕೊಳ್ಳಬೇಡಿ. ಯಾರಾದರೂ ನಿಮಗೆ ಏನಾದರೂ ಸಹಾಯ ಮಾಡಿದ್ದರೆ ಅದನ್ನು ಎಂದಿಗೂ ಮರೆಯಬೇಡಿ.

–ಡೇಲ್ ಕಾರ್ನೆಗಿ

ಸಂಸತ್ತಿನಲ್ಲಿ ಪ್ರಧಾನಿ ಮೋದಿ ಭಾಷಣ ವೈಫಲ್ಯ ಮರೆಮಾಚಲು ದೂಷಣೆ

ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಮಾಡಿದ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಆಡಿದ ಮಾತುಗಳು ವಿಧಾನಸಭೆ ಚುನಾವಣೆಗೆ ಸಜ್ಜಾಗಿರುವ ರಾಜ್ಯಗಳ ಮತದಾರರನ್ನು ಉದ್ದೇಶಿಸಿದ್ದಂತೆ ಕಾಣುತ್ತಿವೆ. ಲೋಕಸಭೆಯಲ್ಲಿಯೂ ರಾಜ್ಯಸಭೆಯಲ್ಲಿಯೂ ಪ್ರಧಾನಿಯವರು ಆಡಿದ ಮಾತುಗಳ ಧಾಟಿ, ಮತ ಚಲಾಯಿಸಲು ಸಿದ್ಧರಾಗಿ ನಿಂತವರನ್ನು ಉದ್ದೇಶಿಸಿ ಆಡಿದಂತೆ ಇತ್ತು. ಪ್ರಧಾನಿಯವರು ತಮ್ಮ ಸರ್ಕಾರದ ನೀತಿ ಹಾಗೂ ರಾಷ್ಟ್ರಪತಿಯವರ ಭಾಷಣದಲ್ಲಿ ಅಡಕವಾಗಿದ್ದ ಅಂಶಗಳ ಸಮರ್ಥನೆಯ ಹಂತವನ್ನು ದಾಟಿದರು, ವಿರೋಧ ಪಕ್ಷಗಳ ಮೇಲೆ ವಾಗ್ದಾಳಿ ನಡೆಸಿದರು. ಅವರ ಮಾತಿನ ತೀವ್ರತೆ ಹಾಗೂ ಅಬ್ಬರ ಅನಪೇಕ್ಷಿತವಾಗಿತ್ತು, ಅವರು ಸದನದ ಒಳಗೆ ನಿಂತು ಸದನದ ಹೊರಗೆ ಇರುವವರನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ ಎಂಬುದು ಖಚಿತವಾಗುತ್ತಿತ್ತು. ತಮ್ಮ ಮಾತು ಅವರ ಮೇಲೆ ಪ್ರಭಾವ ಬೀರಲಿ ಎಂಬ ಉದ್ದೇಶ ಪ್ರಧಾನಿಯವರಲ್ಲಿ ಇತ್ತು ಎಂಬುದು ಗೊತ್ತಾಗುತ್ತಿತ್ತು. ಅವರು ತಮ್ಮ ಮಾತಿನಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪಿಸುವುದರಿಂದ ತಪ್ಪಿಸಿಕೊಂಡರು, ಕೆಲವನ್ನು ತಪ್ಪಾಗಿ ಉಲ್ಲೇಖಿಸಿದರು, ತಪ್ಪಾಗಿ ಅರ್ಥೈಸಿದರು. ವಿರೋಧ ಪಕ್ಷಗಳನ್ನು, ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ಸನ್ನು, ಅನುಚಿತ ರೀತಿಯಲ್ಲಿ ಗುರಿಯಾಗಿಸಿಕೊಂಡು ಮಾತನಾಡಿದರು. ಅವರ ಮಾತುಗಳಲ್ಲಿ ಪ್ರತಿಭಟನೆಯ ಧೋರಣೆಯೇ ಹೆಚ್ಚಾಗಿತ್ತು. ಒಳ್ಳೆಯ ಅಭಿರುಚಿಯದ್ದಲ್ಲದ ವ್ಯಂಗ್ಯ, ಅಬ್ಬರ ಮಾತಿನಲ್ಲಿತ್ತು. ಟೀಕೆಗಳಿಗೆ ತರ್ಕಬದ್ಧವಾಗಿ ಉತ್ತರ ಕೊಡುವ ಬದಲು ತಮ್ಮ ಮಾತುಗಳನ್ನು ಎಲ್ಲರೂ ಆಲಿಸಲಿ ಎಂಬ ಧೋರಣೆ ಅಲ್ಲಿತ್ತು.



ಪ್ರಧಾನಿಯವರ ಮಾತಿನಲ್ಲಿ ಒಳ್ಳೆಯ ಅಭಿರುಚಿಯದ್ದಲ್ಲದ ವ್ಯಂಗ್ಯ, ಅಬ್ಬರ ಇತ್ತು. ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರಿಯಲ್ಲ

ಸರ್ಕಾರವು ಕೋವಿಡ್ ಸಾಂಕ್ರಾಮಿಕದ ನಿರ್ವಹಣೆಯನ್ನು ಸರಿಯಾಗಿ ಮಾಡಿಲ್ಲ ಎಂದು ಟೀಕಿಸಿದ ವಿರೋಧ ಪಕ್ಷಗಳ ಮೇಲೆಯೇ ಪ್ರಧಾನಿಯವರು ಒಂದಿಷ್ಟು ಆರೋಪ ಹೊರಿಸಲು ಯತ್ನಿಸಿದರು. ಮೊದಲ ಬಾರಿಯ ಲಾಕ್‌ಡೌನ್ ಸಂದರ್ಭದಲ್ಲಿ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಮರಳುವಂತೆ ವಿರೋಧ ಪಕ್ಷಗಳು ಪ್ರಚೋದನೆ ನೀಡಿದ್ದವು ಎಂದು ಆರೋಪಿಸಿದರು. ಇತಿಹಾಸದಲ್ಲಿ ಅಭೂತಪೂರ್ವ ಸಂಗತಿಗಳನ್ನು ರಾಜಕೀಯ ಉದ್ದೇಶಕ್ಕೆ ತಿರುಚಿ ಹೇಳುವ ಪ್ರವೃತ್ತಿಯೊಂದು ದೇಶದಲ್ಲಿ ಈಚಿನ ದಿನಗಳಲ್ಲಿ ಗಾಢವಾಗಿ ಕಾಣಿಸುತ್ತಿದೆ. ವಲಸೆ ಕಾರ್ಮಿಕರು ಮೊದಲ ಲಾಕ್‌ಡೌನ್ ಸಂದರ್ಭದಲ್ಲಿ ಅನುಭವಿಸಿದ ಸಂಕಷ್ಟಕ್ಕೆ ವಿರೋಧ ಪಕ್ಷಗಳನ್ನು ಹೊಣೆ ಮಾಡುವುದು ಇತಿಹಾಸವನ್ನು ತಿರುಚಿ ಹೇಳುವುದಕ್ಕೆ ಸಮ. ವಲಸೆ ಕಾರ್ಮಿಕರು ತಾವು ಇದ್ದ ನಗರಗಳಿಂದ ತಮ್ಮ ಊರುಗಳ ಕಡೆ ಮುಖ ಮಾಡುವ ಸಂದರ್ಭ ಸೃಷ್ಟಿಯಾಗಿದ್ದಕ್ಕೆ ಕಾರಣ ಸರ್ಕಾರ. ಅವರು ಅನುಭವಿಸಿದ ಯಾತನೆಗಳಿಗೆ ಹೊಣೆಯನ್ನು ಸರ್ಕಾರ ಹೊರಬೇಕು. ವಲಸೆ ಕಾರ್ಮಿಕರು ಎದುರಿಸಿದ ಸಂಕಷ್ಟದ ವಿಚಾರವಾಗಿ ಸುಪ್ರೀಂ ಕೋರ್ಟ್ ಕೂಡ ಕೇಂದ್ರ ಸರ್ಕಾರವನ್ನು ಟೀಕಿಸಿತು. ಲಾಕ್‌ಡೌನ್ ಹೇರಿದ ವಿಚಾರದಲ್ಲಿ, ಕೋವಿಡ್ ಪೀಡಿತರ ಚಿಕಿತ್ಸೆಯ ವಿಚಾರದಲ್ಲಿ ಹಾಗೂ ಲಸಿಕೆ ನೀಡುವ ವಿಚಾರದಲ್ಲಿ ಕೇಂದ್ರ ಸರ್ಕಾರವು ತಪ್ಪು ಹೆಜ್ಜೆಗಳನ್ನು ಇರಿಸಿತ್ತು. ಆ ಹಿನ್ನೆಲೆಯಲ್ಲಿ ನೋಡಿದಾಗ, ಕೋವಿಡ್ ಸಾಂಕ್ರಾಮಿಕವನ್ನು ಬಹಳ ಸಮರ್ಥವಾಗಿ ನಿಭಾಯಿಸಲಾಗಿದೆ ಎಂದು ಪ್ರಧಾನಿಯವರು ಹೇಳಿದ್ದನ್ನು ಒಪ್ಪಿಕೊಳ್ಳಲಾಗದು.

ಕಾಂಗ್ರೆಸ್ ಪಕ್ಷವು ಮುಂದಿನ ನೂರು ವರ್ಷ ಅಧಿಕಾರಕ್ಕೆ ಮರಳುವುದಿಲ್ಲ ಎಂದು ಪ್ರಧಾನಿ ಹೇಳಿದರು. ಅದು ನೂರು ವರ್ಷ ಅಧಿಕಾರಕ್ಕೆ ಬರುವುದಿಲ್ಲ ಎನ್ನುತ್ತಲೇ ತಮ್ಮ ಭಾಷಣದ ಬಹುತೇಕ ಅವಧಿಯನ್ನು ಕಾಂಗ್ರೆಸ್ಸನ್ನು ಟೀಕಿಸಲು ಬಳಸಿದರು. ವಿರೋಧ ಪಕ್ಷಗಳನ್ನು ಉದ್ದೇಶಿಸಿ ಸಂಸತ್ತಿನಲ್ಲಿ ಮಾತನಾಡುವಾಗ ಬಳಸಬಾರದ ಪದಗಳನ್ನು ಬಳಸಿದರು. ಅದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರಿಯಲ್ಲ. ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರದಲ್ಲಿ ಕಾಂಗ್ರೆಸ್ಸಿನ ಆಡಳಿತದಲ್ಲಿ ಎಲ್ಲವೂ ತಪ್ಪಾಗಿದ್ದವು ಎಂಬ ಚಿತ್ರಣವನ್ನು ತಮ್ಮದೇ ಬಗೆಯಲ್ಲಿ ನೀಡಿದರು. ಸಂಪೂರ್ಣವಾಗಿ ಊಹೆಯ ಆಧಾರದಲ್ಲಿ ಇತಿಹಾಸದ ಚಿತ್ರಣ ನೀಡುವುದಕ್ಕೂ ಇತಿಹಾಸವನ್ನು ತಿರುಚುವುದಕ್ಕೂ ವ್ಯತ್ಯಾಸವಿಲ್ಲ. ಇಂತಹ ಯತ್ನಗಳಿಂದ ಇಂದಿನ ತಲೆಮಾರಿಗೆ ಅಥವಾ ಭವಿಷ್ಯದ ಪೀಳಿಗೆಗೆ ಯಾವ ಪ್ರಯೋಜನವೂ ಇಲ್ಲ. ದೇಶ ಇಂದು ಎದುರಿಸುತ್ತಿರುವ ಹಣದುಬ್ಬರ ಹೆಚ್ಚಳ, ನಿರುದ್ಯೋಗ, ಅರ್ಥ ವ್ಯವಸ್ಥೆಯಲ್ಲಿನ ವಿಕೃತಿಗಳು, ಸಾಮಾಜಿಕ ಸಂಘರ್ಷ ಹೆಚ್ಚುತ್ತಿರುವುದರ ಬಗ್ಗೆ ಎತ್ತಲಾದ ಪ್ರಶ್ನೆಗಳಿಗೆ ಪ್ರಧಾನಿಯವರು ನಿರ್ದಿಷ್ಟವಾದ, ಸ್ಪಷ್ಟವಾದ ಉತ್ತರ ನೀಡಬೇಕಿತ್ತು. ಆದರೆ, ಹಾಗೆ ಮಾಡುವ ಬದಲು ಪ್ರಧಾನಿಯವರು ಇಂದಿನ ಎಲ್ಲ ಸಮಸ್ಯೆಗಳು ಮತ್ತು ಲೋಪಗಳಿಗೆ ಹಿಂದಿನ ಸರ್ಕಾರಗಳನ್ನು ಹೊಣೆ ಮಾಡಿದರು. ದೇಶದ ವಿರೋಧ ಪಕ್ಷಗಳು ಇಂದು ಇಡೀ ದೇಶ ಹೆಮ್ಮೆಪಡುವಂತಹ ಕೆಲಸಗಳನ್ನೇನೂ ಮಾಡುತ್ತಿಲ್ಲ. ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ಇಂದು ಈ ಸ್ಥಿತಿ ತಲುಪಿದ್ದರ ಬಗ್ಗೆ ಆ ಪಕ್ಷದಲ್ಲಿಯೇ ದೊಡ್ಡ ಮಟ್ಟದಲ್ಲಿ ಆತ್ಮಾವಲೋಕನ ನಡೆಯಬೇಕು. ಆದರೆ, ಪ್ರಧಾನಿಯವರು ಎಲ್ಲದಕ್ಕೂ ವಿರೋಧ ಪಕ್ಷಗಳತ್ತ ಬೊಟ್ಟು ಮಾಡಲು ಯತ್ನಿಸುವುದರಿಂದ, ತಮ್ಮಲ್ಲಿನ ಟೊಳ್ಳು ಬಯಲಾಗುತ್ತದೆ.

ದಿನದ ಟ್ವೀಟ್

ದಕ್ಷಿಣದ ಉತ್ತರಪ್ರದೇಶ?



ಕರ್ನಾಟಕವು ಜ್ಞಾನದ ನಾಡು ಎಂದು ಹೆಸರು ಪಡೆದಿದೆ. ಇದು, ಪ್ರತಿಷ್ಠಿತ ಸಂಸ್ಥೆಗಳ ನೆಲೆವೀಡಾಗಿದೆ, ಕೈಗಾರಿಕೀಕರಣದ ಆದ್ಯಪ್ರವರ್ತಕ ಎನಿಸಿಕೊಂಡಿದೆ, ಬಾಹ್ಯಾಕಾಶ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದೆ, ವಿಜ್ಞಾನ ಮತ್ತು ತಂತ್ರಜ್ಞಾನದ ತಾಣವಾಗಿದೆ, ವಿಚಾರವಂತರೆಂದು ಕರೆಸಿಕೊಳ್ಳುವ ವಿಶಿಷ್ಟ ಪರಂಪರೆ ಇಲ್ಲಿನ ವಿದ್ಯಾರ್ಥಿಗಳಿಗಿದೆ. ದುರದೃಷ್ಟವಶಾತ್, ಇದೀಗ ದಕ್ಷಿಣದ ಉತ್ತರಪ್ರದೇಶ ಆಗುತ್ತಿದೆ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಕನ್ನಡದ ಯುವಕರಲ್ಲಿ ಕರ್ನಾಟಕದ ರಾಜಕೀಯ ಮತ್ತು ಆರ್ಥಿಕ ವಿಚಾರಗಳ ಸುತ್ತ ಸರಿಯಾದ ತಾತ್ವಿಕತೆಯನ್ನು ಕಟ್ಟುವ ಕೆಲಸ ಸಾಹಿತಿಗಳಿಂದ ಆಗಲಿಲ್ಲ. ಅದೇ ಕಾರಣಕ್ಕೆ ನಮ್ಮ ವಿದ್ಯಾರ್ಥಿಗಳು ಧರ್ಮ, ಜಾತಿಯ ಜಾರುಗುಂಡಿಯಿಂದ ಎದ್ದು ಹೊರಬರಲಾರದೇ ಕನ್ನಡಿಗರಾಗಿ ತಮಗೆ ಏನು ಬೇಕು ಅನ್ನುವ ಬಗ್ಗೆ ಸ್ಪಷ್ಟತೆಯೂ ಇಲ್ಲದೆ ಇಂದಿನ ಸ್ಥಿತಿ ಒದಗಿದೆ.



ವಸಂತ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ
ಸೋಮವಾರ, 10-2-1997

● **ಪಂಜಾಬ್: ಅಕಾಲಿ (ಬಿ)- ಬಿಜೆಪಿ ಕೂಟಕ್ಕೆ ಬಹುಮತ**

ಚಂಡೀಗಡ, ಫೆ. 9 (ಯುಎನ್ಐ)– ಪಂಜಾಬ್ ವಿಧಾನಸಭೆಯ 117 ಸ್ಥಾನಗಳಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಇದುವರೆಗೆ ಫಲಿತಾಂಶ ಪ್ರಕಟವಾದ 78 ಸ್ಥಾನಗಳ ಪೈಕಿ ಅಕಾಲಿ ದಳ (ಬಾದಲ್)– ಬಿಜೆಪಿ ಮೈತ್ರಿಕೂಟ 65 ಸ್ಥಾನಗಳನ್ನು ಗೆದ್ದುಕೊಂಡಿದ್ದು, ನಿಚ್ಚಳ ಬಹುಮತ ಗಳಿಸಿದೆ. ಮೈತ್ರಿಕೂಟ ಇನ್ನೂ 25 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದ್ದು, ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಭಾರೀ ಪರಾಭವ ಅನುಭವಿಸಿದೆ.

● **ಅಧಿಕಾರಿಗಳ ಪತ್ನಿಯರಿಂದ ಭೂಕಬಳಿಕೆ: ತನಿಖೆಯಲ್ಲಿ ವಿಳಂಬ**

ಬೆಂಗಳೂರು, ಫೆ. 9– ಇಬ್ಬರು ಐಎಎಸ್ ಅಧಿಕಾರಿಗಳು ತಮ್ಮ ತಮ್ಮ ಪತ್ನಿಯ ಹೆಸರಿನಲ್ಲಿ ನಡೆಸಿದ್ದಾರೆ ಎನ್ನಲಾದ ಭೂ ಕಬಳಿಕೆ ಪ್ರಕರಣ ತನಿಖಾ ಹಂತದಲ್ಲಿರುವಾಗಲೇ ಈ ಜಮೀನನ್ನು ಗುತ್ತಿಗೆ ಪಡೆದಿರುವ ಖಾಸಗಿ ಸಂಸ್ಥೆ ಅಲ್ಲಿ ನಿರ್ಮಾಣ ಕಾರ್ಯ ಮುಂದುವರಿಸಿದೆ.

ಐಎಎಸ್ ಅಧಿಕಾರಿಗಳಾದ ಬೆಂಗಳೂರು ಮಹಾನಗರಪಾಲಿಕೆ ಕಮಿಷನರ್ ಬಿ.ಪಾರ್ಥಸಾರಥಿ ಹಾಗೂ ಸಕ್ಕರೆ ನಿರ್ದೇಶನಾಲಯದ ನಿರ್ದೇಶಕ ಎಂ. ಮಹೇಶನ್ ಅವರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಕಂದಾಯ ಸಚಿವರು ಆದೇಶಿಸಿರುವ ತನಿಖೆ ಹಾಗೂ ಈ ಸಂಬಂಧ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ಇನ್ನೂ ವಿಚಾರಣಾ ಹಂತದಲ್ಲಿವೆ.

50 ವರ್ಷಗಳ ಹಿಂದೆ
ಗುರುವಾರ, 10-2-1972

● **ಶೀಘ್ರ ಭೂಸುಧಾರಣೆ, ರಾಜ್ಯಕ್ಕೆ ಹೆಚ್ಚು ಅಧಿಕಾರ– ಸಂಸ್ಥಾ ಕಾಂಗ್ರೆಸ್ ಭರವಸೆ**

ಬೆಂಗಳೂರು, ಫೆ. 9– ಪ್ರತಿವರ್ಷ 30 ಸಾವಿರ ಬಾವಿಗಳನ್ನು ತೋಡುವುದರಿಂದ ಹಿಡಿದು ರಾಜ್ಯಕ್ಕೆ ಹೆಚ್ಚಿನ ಸ್ವಾಯತ್ತಾಧಿಕಾರ ದೊರೆಯುವಂತೆ ಹೋರಾಟ.

ರಾಜ್ಯದ ಸಂಸ್ಥಾ ಕಾಂಗ್ರೆಸ್ ಹತ್ತು ಪ್ರಮುಖ ವಚನಗಳನ್ನು ಜನತೆಯ ಮುಂದಿಟ್ಟು, ವಿಧಾನಸಭೆ ಚುನಾವಣೆಗಳಲ್ಲಿ 'ಮೈಸೂರು ಸಂಸ್ಥಾ ಕಾಂಗ್ರೆಸ್‌ಗೇ ಬೆಂಬಲ ಕೊಡಬೇಕೆಂದು' ಕೇಳಿಕೊಂಡಿದೆ.

ಎಂಪಿಸಿಸಿ ಉಪಾಧ್ಯಕ್ಷ ರಾಮಕೃಷ್ಣ ಹೆಗಡೆ ಅವರು ಇಂದು ಬೆಳಿಗ್ಗೆ ಪಕ್ಷದ ಚುನಾವಣೆ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

● **ರಾಷ್ಟ್ರೀಕೃತ ಬ್ಯಾಂಕ್ ಪುನರ್‌ರಚನೆಗೆ ಶಿಫಾರಸು**

ನವದೆಹಲಿ, ಫೆ. 9– ರಾಷ್ಟ್ರೀಕೃತವಾದ ಹದಿನಾಲ್ಕು ವಾಣಿಜ್ಯ ಬ್ಯಾಂಕುಗಳ ಪುನರ್‌ರಚನೆಗೆ ಮತ್ತು ಎಲ್ಲ ಹಣಕಾಸು ಸಂಸ್ಥೆಗಳ ಸಮಗ್ರ ವ್ಯವಸ್ಥೆಗೆ ಬ್ಯಾಂಕಿಂಗ್ ಆಯೋಗ ಶಿಫಾರಸು ಮಾಡಿದೆ.

ಆಯೋಗದ ಬೃಹತ್ ವರದಿಯನ್ನು ಅಧ್ಯಕ್ಷ ಆರ್.ಜಿ. ಸರಿಯಾ ಅವರು ಅರ್ಥ ಸಚಿವ ವೈ.ಬಿ. ಚವಾಣ್ ಅವರಿಗೆ ಸಲ್ಲಿಸಿದರು.

ಮಿದುಳನ್ನು ಹೊಕ್ಕ ಧಾರ್ಮಿಕ ವೈರಸ್ ಬೆಳಕನ್ನೂ ನೀಡಬಹುದು, ಬೆಂಕಿಯನ್ನೂ ಉಗುಳಬಹುದು

ಮಿದುಳಿನ ಕೊರೊನಾಕ್ಕೆ ಮದ್ದುಂಟು, ಇಲ್ಲುಂಟು



ವಿಜ್ಞಾನ ವಿಶೇಷ

ನಾಗೇಶ ಹೆಗಡೆ


ಹಿಂದಿನ ಬಾರಿ ಶಾಲೆ ಕಾಲೇಜುಗಳನ್ನು ಮುಚ್ಚಿಸಲು ಕೊರೊನಾ ವೈರಸ್ ಕಾರಣವಾಗಿತ್ತು. ಅದು ನಿಸರ್ಗದ ಯಾವುದೋ ಪೊಟರೆಯಲ್ಲಿ ತನ್ನ ಪಾಡಿಗೆ ತಾನಿದ್ದಾಗ ಏನೂ ತೊಂದರೆ ಇರಲಿಲ್ಲ; ಮನುಕುಲಕ್ಕೆ ನಿರಾತಂಕವಿತ್ತು. ವೂಹಾನ್‌ನ ಒಂದು ಪ್ರಯೋಗಶಾಲೆಗೆ ಅದನ್ನು ತಂದು ಅದಕ್ಕೆ ಅದೇನೋ ಮಾಡಲು ಹೋಗಿ, ಈ ವೈರಸ್ ಹೆಡೆಯೆತ್ತಿ ಹೆಮ್ಮಾರಿಯಾಗಿ ಫೂತ್ಕರಿಸಿತು. ಈಗ ಮತ್ತೆ ಶಾಲೆ ಕಾಲೇಜುಗಳನ್ನು ಮುಚ್ಚಲಾಗಿದೆ. ಮಿದುಳಿನಲ್ಲಿ ತನ್ನ ಪಾಡಿಗೆ ತಾನಿದ್ದ ಒಂದು ಮನೋ ವೈರಸ್ಸನ್ನು ಯಾವುದೋ ಲ್ಯಾಬಿನಲ್ಲಿ ಕೆಣಕಿದ್ದರಿಂದ ಅದು ಫೂತ್ಕರಿಸಿದೆ.

ನಮ್ಮೆಲ್ಲರ ಶರೀರದಲ್ಲಿ ಜೀನ್‌ಗಳು ಇರುವ ಹಾಗೆ ಮಿದುಳಿನಲ್ಲಿ ಮೀಮ್ ಎಂಬ ಎಂಥವೊ ಇರುತ್ತವೆಂದು ಬ್ರಿಟಿಷ್ ವಿಜ್ಞಾನಿ ರಿಚರ್ಡ್ ಡಾಕಿನ್ಸ್ ನಾಲ್ಕು ದಶಕಗಳ ಹಿಂದೆಯೇ ವಾದಿಸಿದ್ದ. ಜೀನ್‌ಗಳು ತಮ್ಮ ಗುಣಗಳೇ ಶ್ರೇಷ್ಠವೆಂದು, ತಮ್ಮನ್ನೇ ಎಲ್ಲೆಡೆ ಪಸರಿಸಲು ಏನೆಲ್ಲ ಸರ್ಕಸ್ ಮಾಡುತ್ತವೆ; ಈ ಸ್ವಾರ್ಥವೇ ಇಡೀ ಜೀವಲೋಕದ ಜೀವಾಳವಾಗಿದೆ ಎಂಬುದನ್ನು ಆತ 'ಸೆಲ್ಫಿಶ್ ಜೀನ್' ಎಂಬ ಗ್ರಂಥದಲ್ಲಿ ವಾದಿಸಿದ. ಅದರ ಕೊನೆಯ ಅಧ್ಯಾಯವಾಗಿ ಮಿದುಳಿನಲ್ಲೂ ಇಂಥದ್ದೇ ರೂಪರಹಿತ ಜೀನ್ ಇರುತ್ತದೆಂದು ಹೇಳಿ ಅದಕ್ಕೆ 'ಮೀಮ್' ಎಂದು ಹೆಸರು ಕೊಟ್ಟ. ಜೀನ್‌ಗಳು ವೀರ್ಯಾಣು, ಅಂಡಾಣುಗಳ ಮೂಲಕ ದೇಹದಿಂದ ದೇಹಕ್ಕೆ, ಪೀಳಿಗೆಯಿಂದ ಪೀಳಿಗೆಗೆ ಪಸರಿಸುವ ಹಾಗೆ ಮೀಮ್ ಎಂಬ ಐಡಿಯಾಗಳು ಮಿದುಳಿನಿಂದ ಮಿದುಳಿಗೆ, ಪೀಳಿಗೆಯಿಂದ ಪೀಳಿಗೆಗೆ ದಾಟುತ್ತವೆ ಎಂದು ವಾದಿಸಿದ. ಜೀನ್‌ಗಳು ಆಗಾಗ ತುಸು ರೂಪಾಂತರಗೊಳ್ಳುತ್ತ ಜೀವಲೋಕದಲ್ಲಿ ವೈವಿಧ್ಯವನ್ನು ಸೃಷ್ಟಿಸಿದ ಹಾಗೆ ಮೀಮ್‌ಗಳೂ ವೈವಿಧ್ಯಮಯ ಸಾಂಸ್ಕೃತಿಕ ಲೋಕವನ್ನು ನಿರ್ಮಿಸಿವೆ ಎಂದು ವಾದಿಸಿದ. ಈ 'ಡಾಕಿನ್ಸ್ ವಾದ' ಕೂಡ ತಾನೇ ಒಂದು ಮೀಮ್ ಆಗಿ ಅದರ ಕುರಿತು ನಾನಾ ಬಗೆಯ ಸಂಶೋಧನೆಗಳು ನಡೆಯುತ್ತಿವೆ.

ಮೀಮ್ ಎಂದರೆ 'ಸಾಮಾಜಿಕ ಸೋಂಕು' ಎಂದುಕೊಂಡರೆ ಅದಕ್ಕೆ ಎಷ್ಟೊಂದು ಉದಾಹರಣೆಗಳು ಎಲ್ಲೆಡೆ ಎಲ್ಲ ಕಾಲದಲ್ಲೂ ಸಿಗುತ್ತವೆ. ಅವುಗಳಲ್ಲೂ ಯಶಸ್ವೀ ಮೀಮ್ ('ದೇವರು'), ವಿಫಲ ಮೀಮ್ (ಕಮ್ಯುನಿಸಂ), ತಾತ್ಕಾಲಿಕ ಮೀಮ್ (ರೂಬಿಕ್ ಕ್ಯೂಬ್), ತೀವ್ರ ಸೋಂಕಿನ ಮೀಮ್ (ಫ್ಯಾಶನ್), ನಿಧಾನ ಪಸರಿಸುವ, ಆದರೆ ದೀರ್ಘ ಕಾಲ ಉಳಿಯುವ ಮೀಮ್ ('ಸ್ವಾತಂತ್ರ್ಯ ಹೋರಾಟ') ಹೀಗೆ. ಕೆಲವು ಮೀಮ್‌ಗಳು (ಐಪಿಎಲ್) ವರ್ಷದ ಕೆಲವು ಕಾಲ ಮಾತ್ರ ಪ್ರಜ್ವಲಿಸಬಹುದು.

ಮೀಮ್‌ಗಳು ವೈರಸ್‌ನ ಹಾಗೇನೆ. ಜಗತ್ತಿನಲ್ಲಿ ಒಳ್ಳೇ ವೈರಸ್ ಮತ್ತು ಕೆಟ್ಟ ವೈರಸ್ ಇರುವ ಹಾಗೆ ಈ ಮಾನಸಿಕ ಜಗತ್ತಿನಲ್ಲೂ ಒಳ್ಳೆಯ ಮತ್ತು ಕೆಟ್ಟ ಮೀಮ್‌ಗಳು ವಿಕಾಸವಾಗಬಹುದು. ರೋಗ ನಿರೋಧಕ ಶಕ್ತಿ ಚೆನ್ನಾಗಿದ್ದರೆ ಕೆಟ್ಟ ವೈರಸ್‌ಗಳು ಸುಲಭಕ್ಕೆ ಪ್ರವೇಶ ಮಾಡಲಾರವು. ಹಾಗೆಯೇ ಮಿದುಳಿನಲ್ಲೂ ಕೆಟ್ಟ ಮೀಮ್‌ಗಳು (ನಾತ್ಸಿವಾದ) ಆಗೀಗ ಭುಗ್ಗೆಂದು ಸಾಂಕ್ರಾಮಿಕವಾಗಿ ಪ್ರಸಾರವಾದರೂ ಅವೂ ದೀರ್ಘಕಾಲ ಉಳಿಯದಂತೆ ಮಾನವ ಮಿದುಳಿನ ಇತರ ಮೀಮ್‌ಗಳು ತಡೆಯುತ್ತವೆ. ಅಂಥವನ್ನು ಬೇಕಿದ್ದರೆ ಕಂಪ್ಯೂಟರ್ ವೈರಸ್ಸಿನ ಹಾಗೆ ಅಂದುಕೊಳ್ಳಿ. ನಿಮ್ಮ ಕಂಪ್ಯೂಟರಿನಲ್ಲಿ ಪ್ರಬಲ ವೈರಸ್ ನಿರೋಧಕ ತಂತ್ರಾಂಶ ಇದ್ದರೆ ಕುತಂತ್ರಾಂಶಗಳು ಅಲ್ಲಿ ಪ್ರವೇಶ ಮಾಡಲಾರವು.

ಧಾರ್ಮಿಕ ಭಾವನೆಗಳ ಮೀಮ್ ತೀರ ನಾಜೂಕಿನದು. ಬದುಕಿಗೆ ಬೆಳಕಾಗಬಹುದಾದ ಅದು ಹಠಾತ್ ಜ್ವಾಲೆಯೂ ಆಗಬಹುದು. ಅದು ಬಾಲ್ಯದಿಂದಲೇ ನಮ್ಮ ಮಿದುಳಿನಲ್ಲಿ ಪ್ರವೇಶ ಪಡೆಯುತ್ತದೆ. ಮಗು ಹುಟ್ಟುತ್ತಲೇ ತಾಯಿ-ತಂದೆಯ ಮೂಲಕ ಈ ಧಾರ್ಮಿಕ ಮೀಮ್ ಬಿತ್ತನೆಗೊಳ್ಳುತ್ತದೆ. ಇಲ್ಲೂ ನಾವು ಜೈವಿಕ ವ್ಯವಸ್ಥೆಯ ಉದಾಹರಣೆಯನ್ನೇ ಕೊಡಬಹುದು. ಅದೇ ತಾನೆ ಜನಿಸಿದ ಆನೆ ಮರಿಗೆ ತಾಯಿ ತನ್ನ ಒಂದು ಚೂರು ಮಲವನ್ನು ತಿನ್ನಿಸುತ್ತದೆ. ಏಕೆಂದರೆ ಹುಲ್ಲನ್ನು ಜೀರ್ಣಿಸಿಕೊಳ್ಳಲು ಬೇಕಾದ ಏಕಾಣು ಜೀವಿಗಳು ಎಳೇ ಕರುಳಿನಲ್ಲಿ ಇಲ್ಲವಾದ್ದರಿಂದ ತಾಯಿಯೇ ಅದನ್ನು ಮರಿಯ ಶರೀರಕ್ಕೆ ಸೇರಿಸಬೇಕಾಗುತ್ತದೆ. ಮನುಷ್ಯರಲ್ಲೂ ಎಳೇ ಶಿಶುವಿಗೆ ಮೊಲೆಯೂಡಿಸಬೇಕೆಂಬ ತವಕ ತಾಯಿಯಲ್ಲಿ ಹುಟ್ಟಲಿಕ್ಕೂ ಅಂಥದ್ದೇ ಕಾರಣವಿರುತ್ತದೆ. ಮಗು ಹಸಿದಿದೆ ಎಂದಲ್ಲ; ಮೊಲೆಹಾಲಿನಲ್ಲಿರುವ ಬ್ಯಾಕ್ಟೀರಿಯಾ ನಿರೋಧಕ ಸಂಯುಕ್ತಗಳು ಆದಷ್ಟು ಬೇಗ ಮಗುವಿನ ಜೊಲ್ಲಿಗೆ ಸೇರಲೆಂದು ತಾಯಿಯ ಒಳಮನಸ್ಸು ಬಯಸುತ್ತಿರುತ್ತದೆ. ಧಾರ್ಮಿಕ ಮೀಮ್ ಕೂಡ ಹೀಗೆ ಸದುದ್ದೇಶದಿಂದಲೇ ಬಿತ್ತನೆಯಾಗುತ್ತದೆ. ಕುಟುಂಬದ ಹಿರಿಯರಿಂದ, ನೆರೆಹೊರೆಯಿಂದ, ಶೈಕ್ಷಣಿಕ ಪರಿಸರದಿಂದ ಪೋಷಣೆಗೊಳ್ಳುತ್ತ ಅದು ಮಗುವಿನ ಮಿದುಳಿನಲ್ಲಿ ಗಾಢವಾಗಿ ನೆಲೆಯೂರುತ್ತದೆ. ಬೆಳೆದ ಪರಿಸರಕ್ಕೆ ತಕ್ಕಂತೆ ಕೆಲವರಲ್ಲಿ (ಭಕ್ತಿಪಂಥದ ಹಾಗೆ) ಅದು ಪ್ರಖರವಾಗುತ್ತ ಹೋಗಬಹುದು ಇಲ್ಲವೆ ಮಿದುಳಿನ ಇತರ ಮೀಮ್‌ಗಳ ಪ್ರಭಾವದಿಂದಾಗಿ ಇದು ಮಂಕಾಗಬಹುದು. ಅಥವಾ ಕೆಲವರಲ್ಲಿ ಅದು ಹೊಸಕಿ ಹೋಗಬಹುದು. ಮಂಕಾಗಿದ್ದರೂ ಆಗಾಗ ಹೊರಗಿನಿಂದ



ಬೀಸಿ ಬರುವ ಇತರ ಮೀಮ್‌ಗಳ ಸೋಂಕಿನಿಂದ ಇದು ಪ್ರಜ್ವಲಿಸಬಹುದು. ಮಿದುಳಿನ ಒಳಗೆ ಸ್ಥಾಪಿತವಾಗಿದ್ದ ವಿವೇಕ, ಸಾಮಾಜಿಕ ಪ್ರಜ್ಞೆ, ಸಹಜೀವನ ತತ್ವ, ಮೈತ್ರಿಭಾವ ಇವೇ ಮುಂತಾದ ಉತ್ತಮ ಮೀಮ್‌ಗಳನ್ನೆಲ್ಲ ಬದಿಗೊತ್ತಿ ಕೇಡಿಮೀಮ್ ಗೆಲ್ಲಬಹುದು. ಅದರಲ್ಲೂ ಧರ್ಮಾಂಧತೆ, ಪರಧರ್ಮ ಅಸಹಿಷ್ಣುತೆ, ಪೂರ್ವಗ್ರಹವೇ ಮುಂತಾದ ಕಾಯಿಲೆಗಳು (ಕೋಮಾರ್ಬಿಡಿಟಿ) ಮಿದುಳಿನಲ್ಲಿ ಮೊದಲೇ ಇದ್ದರಂತೂ ಈ ಮೀಮ್ ಪ್ರವೇಶ ಸುಲಭವಾಗುತ್ತದೆ.

ಕೊರೊನಾ ಸೋಂಕಿನಲ್ಲೂ ಇಂಥವೇ ಲಕ್ಷಣಗಳನ್ನು ನಾವು ನೋಡಿದ್ದೇವೆ. ದೇಹದೊಳಗೆ ಇತರ ಕಾಯಿಲೆಗಳಿದ್ದರಂತೂ ಆಗಲೇ ದುರ್ಬಲವಾಗಿರುವ ನಿರೋಧಕ ಶಕ್ತಿಯನ್ನೆಲ್ಲ ಬಗ್ಗುಬಡಿದು ಈ ಮೀಮ್ ಶ್ವಾಸಕೋಶದ ಆಳಕ್ಕೆ ಇಳಿದು ಕೋಟಿಗಟ್ಟಲೆ ಸಂಖ್ಯೆಯಲ್ಲಿ ವೃದ್ಧಿಯಾಗುತ್ತದೆ. ಈ ವೈರಿಯನ್ನು ಬಡಿದು ಹಾಕುವ ಕೊನೇ ಯತ್ನವಾಗಿ ರಕ್ತದಲ್ಲಿನ ಬಿಳಿಕಣಗಳೆಲ್ಲ ಏಕಾಏಕಿ ಬಿರುಗಾಳಿಯಂತೆ ದಾಳಿ ಮಾಡುತ್ತವೆ. ವೈದ್ಯಭಾಷೆಯಲ್ಲಿ ಅದಕ್ಕೆ 'ಸೈಟೊಕೈನ್ ಸ್ಟಾರ್ಮ್' ಎನ್ನುತ್ತಾರೆ. ಆಗಿನ ಆ ಕುರುಕ್ಷೇತ್ರದಲ್ಲಿ ಹೆಣಗಳ ಅಕ್ಷೋಹಿಣಿ ರಾಶಿ ಬಿದ್ದು ಶ್ವಾಸಕೋಶದಲ್ಲಿ ನೀರಂತೆ ತುಂಬಿಕೊಳ್ಳುತ್ತದೆ. ಹೊಸ ಉಸಿರು ಒಳಕ್ಕೆ ಬರಲಾಗದೇ ರೋಗಿಗೆ ವೆಂಟಿಲೇಟರ್ ಹಾಕಿ ಕೃತಕ ಉಸಿರಾಟ ಮಾಡಿಸ ಬೇಕಾಗುತ್ತದೆ. ಆ ಹೋರಾಟದಲ್ಲಿ ರೋಗಿ ಸೋತರೂ ಗೆದ್ದರೂ ಕುಟುಂಬಕ್ಕೆ ಅಪಾರ ನಷ್ಟವಾಗಿರುತ್ತದೆ.

ಸಂಪರ್ಕ ಸಾಧನಗಳ ಸಾಂದ್ರತೆ ಹೆಚ್ಚಿದಷ್ಟೂ ಈ ಎರಡೂ ಬಗೆಯ ವೈರಸ್‌ಗಳು ತೀವ್ರವಾಗಿ ಹಬ್ಬುತ್ತವೆ. ವಿಮಾನ, ರೈಲು, ಹಡಗಿನ ಮೂಲಕ ಕೊರೊನಾ ಹರಡಿದ್ದೂ ಅಲ್ಲದೆ, ತಾನೇ ಒಂದು ಮೀಮ್ ಆಗಿ, ಟಿ.ವಿ. ಚಾನೆಲ್‌ಗಳಲ್ಲಿ ಸುದ್ದಿ ಸಾಂಕ್ರಾಮಿಕವಾಗಿ ಸಮಾಜದ ಸ್ವಾಸ್ಥ್ಯವನ್ನೇ ಬುಡಮೇಲು ಮಾಡಿತ್ತು. ಅದರ ಉಪಶಮನಕ್ಕೂ ದೀಪ, ಜಾಗಟೆಯಂಥ ನಾನಾ ಬಗೆಯ ಅಪ್ರಯೋಜಕ ಮೀಮ್‌ಗಳು, ನಕಲಿ ಮೀಮ್‌ಗಳು ಚಾಲ್ತಿಗೆ ಬಂದವು. ಜೊತೆಗೆ ದಿವ್ಯಾಸ್ತ್ರಗಳ ಹೆಸರಿನಲ್ಲಿ ರೆಮ್ಡೆಸಿವಿಯರ್, ಕೊರೊನಿಲ್, ಪ್ಲಾಸ್ಮಾ ಥೆರಪಿಗಳಂಥ ಹುಸಿಬಾಣಗಳು ಹಾರಾಡಿದವು, ಲಾಕ್‌ಡೌನ್ ಘೋಷಿಸಿದ್ದರಿಂದ ತಳವಾಸಿಗಳ ದ್ರವ್ಯಾರ್ಜನೆ, ವಿದ್ಯಾರ್ಜನೆಗೆ ಧಕ್ಕೆ ಬಂತು.

ಈಗಿನ ಈ ಧಾರ್ಮಿಕ ಮೀಮ್ ದಾಳಿಗೆ ವೆಂಟಿಲೇಟರ್ ಇದೆಯೆ? ಎಲ್ಲರ ಗಮನವೂ ನ್ಯಾಯಾಂಗದ ಕಡೆಗಿದೆ. ಅದು ಸಾಂಕ್ರಾಮಿಕತೆಯನ್ನು ತಗ್ಗಿಸೀತೆ ಶಿವಾಯ್ ಈಗಾಗಲೇ ಎಂಡೆಮಿಕ್ ಆಗಿರುವ ವೈರಾಣುವನ್ನು ಹೊಸಕಿ ಹಾಕಲಾರದು. ಹಿಂದೆ ಇದು ಸಾಂಕ್ರಾಮಿಕ ಆದಾಗಲೆಲ್ಲ ಸಶಸ್ತ್ರ ಪಡೆಗಳ ನೆರವು ಕೋರಲಾಗಿತ್ತು. ಅವಕ್ಕೆ ಸೋಂಕು ತಗುಲಿರಲಿಲ್ಲ ಸದ್ಯ! ಅದೆಷ್ಟೊ ಬಾರಿ ನಮ್ಮ ಸಮಾಜದ ಸ್ವಸ್ಥ ಮೀಮ್‌ಗಳೇ ಸೂಕ್ತ ಮನೆಮದ್ದು, ವಿಶ್ರಾಂತಿಯ ಮೂಲಕ ಉಪಶಮನ ಮಾಡಿದ್ದೂ ಇದೆ.

ಸದ್ಯಕ್ಕಂತೂ ಎಲ್ಲಕ್ಕಿಂತ ಉತ್ತಮ ಉಪಾಯ ಏನು ಗೊತ್ತೆ? ಕೊರೊನಾಕ್ಕೆ ಬಳಸಿದ ಅಸ್ತ್ರವನ್ನೇ ಇಲ್ಲೂ ಬಳಸಬೇಕು: ಬಾಯಿ ಮುಚ್ಚಿ. ದೈಹಿಕ ಅಂತರ ಕಾಯ್ದುಕೊಂಡು, ಮನದೊಳಗಿನ ಕೊಳೆಯನ್ನು ಉಜ್ಜಿ ಉಜ್ಜಿ ತೊಳೆಯುವುದು. ಈ ಧಾರ್ಮಿಕ ಮೀಮ್‌ನಲ್ಲೇ ಇರುವ ಸಹಿಷ್ಣುತೆ, ಸದ್ಭಾವನೆ, ಸಹಜೀವನದ ಜೀನ್‌ಗಳಿಗೆ ಹೊಳಪು ಕೊಡುವುದು.

ಚುರುಮುರಿ



ಟ್ರಾಫಿಕ್ ಡೈವೋರ್ಸ್!

● ತುರುವೇಕೆರೆ ಪ್ರಸಾದ್

ಪರ್ಮೇಶಿ ಫೋನ್ ಮಾಡ್ದ: 'ಎಲ್ಲಿದ್ದೀಯೋ?'

'ತುಮಕೂರು ರೋಡ್ ಫ್ಲೈಓವರ್ ಕೆಳಗೆ ತಗಲಾಕ್ಕಂಡು ಅರ್ಧ ಗಂಟೆಯಾಯ್ತು' ಅಂದೆ.

'ಬೇಗ ಮನೆಗೆ ಹೋಗು, ಇಲ್ಲಾಂದ್ರೆ ನಿನ್ ಹೆಂಡ್ತಿ ಡೈವೋರ್ಸ್ ಕೊಟ್ಬಿಟ್ಟಾಳು'.

'ಟ್ರಾಫಿಕ್ ಜಾಮ್‌ಗೂ ಡೈವೋರ್ಸ್‌ಗೂ ಏನೋ ಸಂಬಂಧ?'

'ಸಂಬಂಧ ಇದೆ ಕಣೋ... ಮಹಾರಾಷ್ಟ್ರ ಮಾಜಿ ಸೀಎಂ ದೇವೇಂದ್ರ ಫಡಣವೀಸ್ ಅವರ ಹೆಂಡ್ತಿ ಅಮೃತಾ ಫಡಣವೀಸ್ ಮುಂಬೈನಲ್ಲಿ ಶೇ 3ರಷ್ಟು ಡೈವೋರ್ಸ್‌ಗಳು ಟ್ರಾಫಿಕ್ ಜಾಮಿಂದ ಆಗುತ್ತವೆ ಅಂತ ಸಂಶೋಧನೆ ಮಾಡಿದಾರೆ'.

'ಅಯ್ಯೋ ದೇವರೇ, ಟ್ರಾಫಿಕ್ ಜಾಮಲ್ಲಿ ಕ್ರಶ್ಶು, ಲವ್ವು, ಮದುವೆ, ಕೊನೆಗೆ ಹೆರಿಗೇನೂ ಆಗಿದ್ದು ಕೇಳಿದ್ದೆ. ಆದ್ರೆ ಜಾಮಿಂದ ಡೈವೋರ್ಸ್ ಕೂಡ ಆಗುತ್ತೆ ಅಂತ ಇವತ್ತೇ ಕೇಳಿದ್ದು. ಅಲ್ಲೇ ಹಾಗಾದ್ರೆ ಇನ್ನು ನಮ್ ಬೆಂಗಳೂರಿನ ಜಾಮೆಲ್ಲಾ ಲೆಕ್ಕಕ್ಕೆ ತಗೊಂಡ್ರೆ ಟ್ರಾಫಿಕ್ ಜಾಮ್ ಡೈವೋರ್ಸ್ ಪ್ರಮಾಣ ಶೇ 75 ಆಗ್ಬಹುದು'.

'ನಿಜ ಕಣೋ, ಈ ಹಂಪ್‌ಗಳು, ಗುಂಡಿ ಗೊಟರು ಎಲ್ಲಾ ದಾಟ್ಕೊಂಡು ಮನೆ ಮುಟ್ಟೋ ಹೊತ್ತಿಗೆ ಗಂಡಾಗುಂಡಿ ಸಂಸಾರದ ಬಂಡಿ ಕಡಾಣಿ ಕಳಚ್ಕಂಡು ಚರಂಡಿಗೆ ಬಿದ್ದೋಗಿರುತ್ತೆ'.

'ಅದೂ ನಿಜಾನೇ ಇರ್ಬಹುದು ಪರ್ಮೇಶಿ, ಆದ್ರೂ ಹೆಂಡ್ತೀರು ಇಷ್ಟು ಚಿಕ್ಕ ಕಾರಣಕ್ಕೆ ಡೈವೋರ್ಸ್ ಕೊಡ್ತಾರಾ ಅಂತ'.

'ಇದು ಚಿಕ್ಕ ಕಾರಣನಾ? ಈ ಟ್ರಾಫಿಕ್ ಜಾಮ್ ನೆವ ಹೇಳ್ಕೊಂಡು ಗಂಡಸರು ಹೆಂಡ್ತೀರನ್ನ ಏಮಾರುಸ್ತಿಲ್ವಾ? ಲವ್ವರ್ನ ಕೂರಿಸ್ಕೊಂಡು ಜಾಲಿಯಾಗ್ ಓಡಾಡ್ತಿದ್ದೋರೆಲ್ಲಾ ಗಂಟೆಗಟ್ಟಲೆ ಜಾಮಲ್ಲಿ ತಗಲಾಕ್ಕಂಡಿರ್ತಾರೆ. ಇದನ್ ನೋಡಿದ ಯಾರೋ ಹೊಟ್ಟೆ ಉರುಕರು ಹೋಗಿ ಅವ್ರ ಹೆಂಡ್ತೀರ ಕಿವಿ ಕಚ್ಚಿರ್ತಾರೆ. ಡೈವೋರ್ಸ್ ಕೊಡೋಕೆ ಇಷ್ಟು ಸಾಲದಾ?'

'ಇದೇನು ನಿನ್ ಅನುಭವನಾ?'

'ನಿನ್ನಂಥ ದಡ್ಡರಿಂದ ಪಾಠ ಕಲಿಯೋನು ನಾನು. ಹೌದು, ಯಾರದು ನಿನ್ ಗಾಡೀಲಿ ಹಿಂದೆ ಕೂತಿರೋರು?

'ಅಯ್ಯೋ ಪಾಪಿ! ಎಲ್ಲಿದ್ದೀಯೋ ನೀನು?'

'ನಿನ್ ಹಿಂದೇನೇ ಇದೀನಿ'.

ಬಾಂಬ್ ಬಿದ್ದಂತೆ ಬೆಚ್ಚಿದೆ. ಪರ್ಮೇಶಿ ಗಹಗಹಿಸಿದ.

ಸಂಗತ

ಮುಳುಗುತ್ತಿದ್ದವರಿಗೆ ನಿಂಬೆಹುಲ್ಲಿನ ಆಸರೆ

ಅಕ್ರಮವಾಗಿ ಅಫೀಮು ಬೆಳೆಯುತ್ತಾ ಪೊಲೀಸರ ಅತಿಥಿಗಳಾಗುತ್ತಿದ್ದ ಬಿಹಾರದ ರೈತರೀಗ ನಿಂಬೆಹುಲ್ಲು ಬೆಳೆದು ಹೊಸ ಬದುಕಿನತ್ತ ಹೆಜ್ಜೆ ಇಟ್ಟಿದ್ದಾರೆ

● ಗುರುರಾಜ್ ಎಸ್. ದಾವಣಗೆರೆ

ಅವು ಬಿಹಾರ ರಾಜ್ಯದ ಗಯಾ ಜಿಲ್ಲೆಯ ಎಂಟು ಹಳ್ಳಿಗಳು. ರಾತ್ರಿಯಾದರೆ ಸಾಕು ಹಳ್ಳಿಯ ಮನೆಗಳ ಮೇಲೆಲ್ಲ ಪೊಲೀಸು ರೈಡು, ಲಾಠಿ ಏಟು, ಅರೆಸ್ಟು ಮತ್ತು ಮಣಗಟ್ಟಲೆ ಅಫೀಮು ಬೆಳೆಯ ಜಪ್ತಿ ನಡೆಯುತ್ತಿತ್ತು. ಜನ ಮಾದಕದ್ರವ್ಯ ಸಾಗಾಣಿಕೆದಾರರಲ್ಲ, ಕಳ್ಳರೂ ಅಲ್ಲ. ಅಫೀಮು ಬೆಳೆಯುವ ರೈತರು!

ಹಗಲೆಲ್ಲ ಮೈಮುರಿದು ಹೊಲಗಳಲ್ಲಿ ದುಡಿಯುತ್ತಿದ್ದ ರೈತ ಗಂಡಸರು ರಾತ್ರಿಯಾದರೆ ಸ್ಥಳೀಯ ಠಾಣೆಗಳ ಜೈಲು ಸೇರುತ್ತಿದ್ದರು. ಕಳೆದ ಹನ್ನೊಂದು ವರ್ಷಗಳಿಂದಲೂ ನಡೆಯುತ್ತಿದ್ದ ಈ ಯಾತನೆಯಿಂದ ರೈತರಿಗೆ ಮುಕ್ತಿ ಸಿಕ್ಕಿದ್ದು ತೀರಾ ಇತ್ತೀಚೆಗೆ ಒಂದು ವರ್ಷದ ಹಿಂದೆ. ಅದೂ ಒಂದು ಹುಲ್ಲಿನಿಂದ!

ಹೌದು, ಎಂಟೂ ಹಳ್ಳಿಗಳ ರೈತರೀಗ ಪೊಲೀಸರ ಕಣ್ಣು ತಪ್ಪಿಸಿ ಓಡುತ್ತಿಲ್ಲ. ಅವರ ಮೇಲೆ ಕೇಸು-ಅರೆಸ್ಟುಗಳು ನಿಂತೇ ಹೋಗಿವೆ. ಅದಕ್ಕೆ ಕಾರಣ, ಅರಣ್ಯ ಇಲಾಖೆ ಅಧಿಕಾರಿಗಳು ಮಾಡಿದ ಸಹಾಯ ಮತ್ತು ನೀಡಿದ ಮಾರ್ಗದರ್ಶನ. ಅಫೀಮು ಬೆಳೆಯ ಜಾಗದಲ್ಲೀಗ ಲೆಮನ್‌ಗ್ರಾಸ್ (ನಿಂಬೆ ಹುಲ್ಲು) ನಳನಳಿಸುತ್ತಿದೆ. ಚೋಟ್‌ಕಿ ಛಂಪಿ ಹಳ್ಳಿಯ ರೈತ ಸಕಲದೇವ್ ಯಾದವ್ ತನ್ನ ಐದು ಎಕರೆ ಜಮೀನಿನಲ್ಲಿ ಔಷಧೀಯ ಗುಣದ ನಿಂಬೆಹುಲ್ಲನ್ನು ಬೆಳೆಯಲು ₹ 25,000 ಬಂಡವಾಳ ಹಾಕಿ 1,500 ಲೀಟರ್ ಹುಲ್ಲೆಣ್ಣೆಯನ್ನು ಉತ್ಪಾದಿಸುವ ಉಮೇದಿನಲ್ಲಿದ್ದಾನೆ. ಒಂದು ಲೀಟರ್ ಎಣ್ಣೆಗೆ ₹ 500ರಂತೆ ₹ 7.5 ಲಕ್ಷ ಆದಾಯ ಗಳಿಸುವ ಅವಕಾಶ ಗಿಟ್ಟಿಸಿಕೊಂಡಿದ್ದಾನೆ. ಹುಲ್ಲಿನ ಎಸಳು ಅಲ್ಲಿನ ರೈತರ ಬಾಳಿನ ಹೊಸಬೆಳಕಾಗಲಿದೆ.

ಒಂದು ನೂರು ವರ್ಷದ ಹಿಂದೆ ನಮ್ಮ ನೆಲಕ್ಕೆ ಬಂದ ನಿಂಬೆಹುಲ್ಲನ್ನು ಕೇರಳ, ಕರ್ನಾಟಕ, ತಮಿಳುನಾಡು, ಉತ್ತರಪ್ರದೇಶ, ಉತ್ತರಾಂಚಲ ಮತ್ತು ಅಸ್ಸಾಂನ ಭಾಗಗಳಲ್ಲಿ ಹೆಚ್ಚು ಬೆಳೆಯಲಾಗುತ್ತದೆ. ವಿಶ್ವದಲ್ಲೇ ನಿಂಬೆಹುಲ್ಲಿನ ಎಣ್ಣೆ ಮತ್ತು ಚಹಾ ಎಲೆಗಳನ್ನು ಅತಿಹೆಚ್ಚು ರಫ್ತು ಮಾಡುವ ದೇಶ ನಮ್ಮದು. ಇದಕ್ಕೆ ಗಯಾ ಜಿಲ್ಲೆಯ ಹಳ್ಳಿಗಳ ರೈತರ ಕೊಡುಗೆಯೂ ಈಗ ಸೇರುತ್ತಿದೆ.

ಹತ್ತು ವರ್ಷಗಳ ಹಿಂದೆ ಬಿತ್ತಿದ ಬೆಳೆ ಕೈಗೆ ಬಾರದೆ ಬಡತನ ತಾಂಡವವಾಡುತ್ತಿತ್ತು. ಅದರಿಂದ ಹೊರಬರಲು ಪೊಲೀಸರ, ಸ್ಥಳೀಯ ಅಧಿಕಾರಿಗಳ ಕಣ್ತಪ್ಪಿಸಿ ಅಫೀಮು ಸಸಿಯನ್ನು ಇದ್ದಬದ್ದ ಜಮೀನಿನಲ್ಲಿ ನೆಟ್ಟ ರೈತರು ಅದರ ಮೇಣ ಮಾರಿ ಕೈತುಂಬ ಹಣ ಸಂಪಾದಿಸತೊಡಗಿದರು. ಸೆಂಟ್ರಲ್ ಬ್ಯೂರೊ ಆಫ್ ನಾರ್ಕೋಟಿಕ್ಸ್‌ನ ಪರವಾನಗಿ ಇರುವ ರೈತರು ಮಾತ್ರ ಅಫೀಮು ಬೆಳೆಯಬಹುದು. ಸದ್ಯಕ್ಕೆ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರಪ್ರದೇಶದ 22 ಜಿಲ್ಲೆಗಳಲ್ಲಿ ಅಫೀಮು ಬೆಳೆಯಲು ಅನುಮತಿ ಇದೆ. ನಿಷೇಧಿತ ಬೆಳೆಯನ್ನು ನಾಶಪಡಿಸಲು ಹೊಲಗಳ ಮೇಲೆ ದಾಳಿ ಮಾಡುತ್ತಿದ್ದ ಪೊಲೀಸರು ಬೆಳೆಗೆ ಬೆಂಕಿ ಹಚ್ಚಿ ರೈತರನ್ನು ಬಡಿದು ಜೈಲಿಗಟ್ಟುತ್ತಿದ್ದರು.

ಒಮ್ಮೆಯಂತೂ 400 ಹೆಕ್ಟೇರ್ ಜಮೀನಿನ ತುಂಬ ಬೆಳೆದಿದ್ದ ಅಫೀಮು ಬೆಳೆಯನ್ನು ಸುಟ್ಟುಹಾಕಿ ದಾಖಲೆ ಮಾಡಿದ್ದರು. ಇದರಿಂದ ಧೈರ್ಯಗೆಡದ ರೈತರು 'ಏನೇ ಬರಲಿ ಅಫೀಮು ಇರಲಿ' ಎಂಬಂತೆ ಹಟಕ್ಕೆ ಬಿದ್ದು, ಗಯಾ ಜಿಲ್ಲೆಯೊಂದರಲ್ಲೇ ಬರೋಬ್ಬರಿ 1,300 ಹೆಕ್ಟೇರ್ ಜಮೀನಿನಲ್ಲಿ ಅಫೀಮು ಬೆಳೆದಿದ್ದರು! ಅದರ ಪೈಕಿ 300 ಹೆಕ್ಟೇರ್ ಜಮೀನು 'ಗೌತಮ ಬುದ್ಧ ವನ್ಯಜೀವಿ ಅಭಯಾರಣ್ಯ'ದ ವ್ಯಾಪ್ತಿಯಲ್ಲಿತ್ತು!

ಆಗ ಕಾಡಿನ ಒತ್ತುವರಿ ಕೇಸು ರೈತರ ಮೇಲೆ ಬಿತ್ತು. ಕಾಡುಪ್ರಾಣಿ ಬೇಟೆಯಾಡಿದ್ದೀರಿ ಎಂದು ಸುಳ್ಳು ಕೇಸುಗಳೂ ದಾಖಲಾದವು. ಗಂಡಸರು ಜಾಮೀನು ಸಿಗದೆ ತಿಂಗಳಾನುಗಟ್ಟಲೆ ಜೈಲು ಪಾಲಾದರು. ಇದ್ಯಾಕೋ ಸರಿಬರುತ್ತಿಲ್ಲ ಎಂದುಕೊಂಡ ಹಳ್ಳಿಯ ಹೆಣ್ಣು ಮಕ್ಕಳು 'ನಮಗೆ ಸಾಕಾಗಿಹೋಗಿದೆ, ನಾವಿನ್ನು ಅಫೀಮು ಬೆಳೆಯುವುದಿಲ್ಲ. ನಮಗೆ ದಾರಿ ತೋರಿಸಿ, ನೀವು ಹೇಳಿದಂತೆ ಮಾಡುತ್ತೇವೆ' ಎಂದು ಜಿಲ್ಲಾಧಿಕಾರಿಯಲ್ಲಿ ಅಳಲು ತೋಡಿಕೊಂಡರು.



ಸ್ಪಂದಿಸಿದ ಸರ್ಕಾರವು ಅರಣ್ಯ ಇಲಾಖೆಯ ನೇತೃತ್ವದಲ್ಲಿ, ಅಫೀಮು ಬೆಳೆ ಬದಲು ಕಡಿಮೆ ನೀರು ಬೇಡುವ, ಔಷಧೀಯ ಗುಣದ ನಿಂಬೆಹುಲ್ಲನ್ನು ಬೆಳೆಯಲು ಉತ್ತೇಜನ ನೀಡಿತು. ಮಹಿಳೆಯರಿಗೆ ಜೇನು ಸಾಕಣೆ, ಹೊಲಿಗೆ, ನುಗ್ಗೆ ಹಾಗೂ ಇಪ್ಪೆ (ಇಂಡಿಯನ್ ಬಟರ್ ಟ್ರೀ) ಮರ ಬೆಳೆಯುವ ತರಬೇತಿ ನೀಡಲಾಯಿತು. ರೈತರು ಅರಣ್ಯ ಇಲಾಖೆಯ ಕ್ರಮಕ್ಕೆ ಸರಿಯಾಗಿ ಸ್ಪಂದಿಸಿದ್ದರಿಂದ, ಸರ್ಕಾರವು ಜೈಗಿರ್ ಹಳ್ಳಿಯಲ್ಲಿ ನಿಂಬೆಹುಲ್ಲಿನಿಂದ ಎಣ್ಣೆ ತೆಗೆಯುವ ಘಟಕ ಸ್ಥಾಪಿಸಿ ರೈತರಿಗೆ ನೆರವಾಯಿತು. ಎಣ್ಣೆಗೆ ನಿಂಬೆಯ ವಾಸನೆ ಇರುವುದರಿಂದ ಸಾಬೂನು, ಮಾರ್ಜಕ, ಪರ್‌ಫ್ಯೂಮ್, ಕಾಂತಿವರ್ಧಕ, ಪಾನೀಯ, ಅಡುಗೆ ಮತ್ತು ಕೀಟನಿವಾರಕಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ.

3ರಿಂದ 4 ವರ್ಷಗಳ ಕಾಲ ಬದುಕುವ ನಿಂಬೆಹುಲ್ಲನ್ನು ಶಾಶ್ವತ ಸಸ್ಯ ಎಂದೂ ಕರೆಯುತ್ತಾರೆ. ಇದರ ಜೊತೆಗೆ ನುಗ್ಗೆಕಾಯಿ ಪುಡಿ, ಜೇನುತುಪ್ಪ, ಟಿಲ್‌ಕುಟ್ (ಇಪ್ಪೆ ಹೂವಿನ ಗುಲ್ಕನ್) ತಯಾರಿಸುವ ಘಟಕಗಳೂ ಬಂದಿವೆ. ರೈತರ ಉತ್ಪನ್ನಗಳನ್ನು 'ಅರಣ್ಯಕ್' ಬ್ರ್ಯಾಂಡ್ ಹೆಸರಿನಲ್ಲಿ ಅರಣ್ಯ ಇಲಾಖೆಯೇ ಮಾರಾಟ ಮಾಡುತ್ತಿದೆ. ರೈತರು ನ್ಯಾಯಸಮ್ಮತ ರೀತಿಯಲ್ಲಿ ಹಣ ಗಳಿಸುತ್ತಿದ್ದಾರೆ. ಎಣ್ಣೆ ಮತ್ತು ಚಹಾದ ರೂಪದಲ್ಲಿ ಭಾರೀ ಆದಾಯ ತರುತ್ತಿರುವ ಲೆಮನ್‌ಗ್ರಾಸ್, ಮುಳುಗುತ್ತಿದ್ದ ರೈತರ ಬಾಳಿನ ಆಸರೆಯಾಗಿದೆ.

ವಾಚಕರ ವಾಣಿ

ಅಕ್ರಮ ಮಾರ್ಗವೇ ಸಕ್ರಮವಾದೀತು

ಕೆಪಿಎಸ್‌ಸಿ 'ಅಕ್ರಮ' ಸಕ್ರಮಕ್ಕೆ ಸರ್ಕಾರ ಮಸೂದೆ ಮಂಡಿಸಲು ಮುಂದಾಗಿರುವುದನ್ನು ತಿಳಿದು ನಿಜಕ್ಕೂ ಗಾಸಿಯಾಯಿತು. ಯಾವ ಮಾರ್ಗವನ್ನು ಅನುಸರಿಸಿಯಾದರೂ ಸರಿ ಸರ್ಕಾರಿ ಹುದ್ದೆ ಪಡೆಯಬೇಕು ಎನ್ನುವವರ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿದೆ. ಇದಕ್ಕಾಗಿ ಪ್ರತಿಯೊಂದು ನೇಮಕಾತಿಯಲ್ಲಿಯೂ ಹೊಸ ಹೊಸ ಬಗೆಯ ಅಕ್ರಮ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಅಂತಹುದರಲ್ಲಿ ಅಕ್ರಮವನ್ನು ಸಕ್ರಮಗೊಳಿಸುವ ಸರ್ಕಾರದ ಕ್ರಮದಿಂದ ಭ್ರಷ್ಟರನ್ನು ಪ್ರೇರೇಪಿಸಿದಂತಾಗುತ್ತದೆ ಅಷ್ಟೆ. ಕಷ್ಟಪಟ್ಟು ಓದಿ ಸರ್ಕಾರಿ ಹುದ್ದೆ ಪಡೆಯಬಹುದು ಎಂದು ಕಾದು ಕುಳಿತಿರುವ ಲಕ್ಷಾಂತರ ಅಭ್ಯರ್ಥಿಗಳು ಹಾಗೂ ಅವರ ಕುಟುಂಬದವರ ಆಸೆಗೆ ತಣ್ಣೀರು ಎರಚಿದಂತಾಗುತ್ತದೆ.

ಇದರಿಂದ ಮುಂದಿನ ದಿನಗಳಲ್ಲಿ ಅಭ್ಯರ್ಥಿಗಳು ಪರೀಕ್ಷೆಗೆ ಕಷ್ಟಪಟ್ಟು ಓದುವ ಬದಲು ರಾಜಕೀಯ ವ್ಯಕ್ತಿಗಳ ಮನೆಬಾಗಿಲು ಕಾಯುವ ದುಷ್ಟ ಪರಿಪಾಟ ಶುರುವಾಗುತ್ತದೆ. ಹೀಗಾಗಿ, ವ್ಯವಸ್ಥೆಯಲ್ಲಿ ಬದಲಾವಣೆ ಬಯಸುವ ಪ್ರಜ್ಞಾವಂತ ನಾಗರಿಕರು ಅದರಲ್ಲೂ ವಿದ್ಯಾರ್ಥಿ ಸಮೂಹ ಇದನ್ನು ತೀವ್ರವಾಗಿ ವಿರೋಧಿಸಬೇಕು. ಇಲ್ಲವಾದಲ್ಲಿ ಅಕ್ರಮ ಮಾರ್ಗ ಮಾತ್ರವೇ ಸರ್ಕಾರಿ ಹುದ್ದೆ ಪಡೆಯುವ ಏಕೈಕ ಮಾರ್ಗವಾಗುವ ಅಪಾಯ ಎದುರಾಗಲಿದೆ.

ವಿನಯ್ ಕೆ., ದೇವದುರ್ಗ, ರಾಯಚೂರು

ಭವಿಷ್ಯದ ಮತ ಗಳಿಕೆಯ ಹುನ್ನಾರ?

ಚೀನಾದ ತತ್ವಜ್ಞಾನಿ ಕನ್‌ಫ್ಯೂಷಿಯಸ್ 'ನಿಮ್ಮದು ಒಂದು ವರ್ಷದ ಯೋಜನೆಯಾದರೆ ಭತ್ತವನ್ನು ಬಿತ್ತಿ, ಹತ್ತು ವರ್ಷದ ಯೋಜನೆಯಾದರೆ ಮರಗಳನ್ನು ನೆಡಿ, ನಿಮ್ಮ ಯೋಜನೆ ನೂರು ವರ್ಷಕ್ಕಾದರೆ ಮಕ್ಕಳಿಗೆ ಶಿಕ್ಷಣ ನೀಡಿ' ಎಂದಿದ್ದರು. ಇಂದಿನ ಕಾಲೇಜು ವಿದ್ಯಾರ್ಥಿ- ವಿದ್ಯಾರ್ಥಿನಿಯರೇ ಮುಂದಿನ ಐವತ್ತು- ಅರವತ್ತು ವರ್ಷಗಳವರೆಗೆ ದೇಶವನ್ನು ಆಳಬೇಕಾದ ಸರ್ಕಾರವನ್ನು ಚುನಾಯಿಸುವ ಮತದಾರರು. ಈ ಯುವ ಹಾಲಿ ಮತ್ತು ಭಾವಿ ಮತದಾರರ ಮನಸ್ಸುಗಳಲ್ಲಿ ವಿಷಬೀಜ ಬಿತ್ತಿ, ಕೋಮುಭಾವನೆಗಳನ್ನು ಪ್ರಚೋದಿಸಿ, ತಮ್ಮ ಅಜೆಂಡಾದ ಕಾಯಂ ಗಿರಾಕಿಗಳನ್ನಾಗಿ ಮಾಡಿಕೊಂಡು, ಅನಾಯಾಸವಾಗಿ ಮುಂದಿನ ಸುಮಾರು 50 ವರ್ಷಗಳವರೆಗೆ ಮತ ಗಳಿಸುವ ಹುನ್ನಾರದಂತೆ ಹಿಜಾಬ್ ಪ್ರಕರಣ ಗೋಚರಿಸುತ್ತಿದೆ.

ಶರತ್ ಸುಬ್ಬೇಗೌಡ, ಹಾಸನ

'ಗ್ರಾಮ ಒನ್' ಹೆಸರು: ದ್ವಂದ್ವ ನೀತಿ

ತಾಲ್ಲೂಕು ಸರ್ಕಾರಿ ಕಚೇರಿಗಳಿಗಾಗಿ ಇರುವ 'ಮಿನಿ ವಿಧಾನಸೌಧ'ದ ಹೆಸರಿನಲ್ಲಿನ 'ಮಿನಿ' ಇಂಗ್ಲಿಷ್ ಪದಕ್ಕೆ ಆಕ್ಷೇಪ ವ್ಯಕ್ತವಾದ ಕಾರಣ, ಅದನ್ನು 'ತಾಲ್ಲೂಕು ಆಡಳಿತ ಸೌಧ' ಎಂದು ಇತ್ತೀಚೆಗೆ ಬದಲಿಸಲಾಗಿದೆ. ಆಡಳಿತದಲ್ಲಿ ಕನ್ನಡ ಅನುಷ್ಠಾನದ ದೃಷ್ಟಿಯಿಂದ ಇದೊಂದು ಸ್ವಾಗತಾರ್ಹ ಕ್ರಮ. ಆದರೆ ಗ್ರಾಮೀಣ ಮಟ್ಟದಲ್ಲಿ ಎಲ್ಲಾ ನಾಗರಿಕ ಕೇಂದ್ರೀಕೃತ ಸಹಾಯ ಕೇಂದ್ರಗಳಿಗೆ 'ಗ್ರಾಮ ಒನ್' ಎಂದು ಹೆಸರಿಸಲಾಗಿದೆ. ಮಿನಿ ವಿಧಾನಸೌಧದಲ್ಲಿ ಮಿನಿ ಎಂಬುದು ಇಂಗ್ಲಿಷ್ ಪದವೆಂದು ಆಕ್ಷೇಪಿಸಿದವರು 'ಗ್ರಾಮ ಒನ್'ನಲ್ಲಿ 'ಒನ್' ಎಂಬ ಇಂಗ್ಲಿಷ್ ಪದಕ್ಕೆ ವಿರೋಧ ವ್ಯಕ್ತ ಮಾಡದಿರುವುದು ಆಶ್ಚರ್ಯಕರ. ಈ ದ್ವಂದ್ವ ನೀತಿ ಏಕೆ?

ರಮಾನಂದ ಶರ್ಮಾ, ಬೆಂಗಳೂರು

ಮಕ್ಕಳ ಬಳಿಯೇ ಇದೆ ಪರಿಹಾರ

ಹಿಜಾಬ್ ಮತ್ತು ಕೇಸರಿಶಾಲು ವಿವಾದ ನಾಡಿನಾದ್ಯಂತ ಸದ್ದು ಮಾಡುತ್ತಿರುವುದು ದುರಂತ. ಇದನ್ನು ಈ ಮಟ್ಟಿಗೆ ಬೆಳೆಯಲು ಬಿಡಬಾರದಿತ್ತು. ಇದನ್ನು ಧಾರ್ಮಿಕ ಚೌಕಟ್ಟು ಅಥವಾ ಕಾನೂನಿನ ಪಾಲನೆಯಿಂದ ಕ್ಷಣಕಾಲ ಹೊರಗಿಟ್ಟು ನೋಡುವುದಾದರೆ, ಕಲಿಯುವ ಮಕ್ಕಳಲ್ಲೇ ಪರಿಹಾರವಿದೆ.

ವರ್ಷಾನುಗಟ್ಟಲೆ ಜೊತೆಯಲ್ಲಿ ಕೂತು, ನಿಂತು, ಓಡಾಡಿ, ಕಷ್ಟಸುಖ ಹಂಚಿಕೊಂಡು, ಕೂಡಿ ಆಡಿ, ಹಂಚಿಕೊಂಡು ತಿಂದು, ಜಾತಿ, ಮತ, ಧರ್ಮ, ಭಾಷೆಯ ಸೋಂಕಿಲ್ಲದೆ ಕೇವಲ ಕಲಿಯುವ ಮನೋಭಾವದ ಸಹಪಾಠಿಗಳು ಪರಸ್ಪರ ಧರಿಸುವ ಹಿಜಾಬ್ ಅಥವಾ ಕೇಸರಿ ಶಾಲಿನಿಂದ ತನಗೇನಾದರೂ ನಷ್ಟ ಅಥವಾ ತೊಂದರೆ ಆಗುತ್ತದೆಯೇ ಎಂದು ಯೋಚಿಸಲಿ. ಆಗುತ್ತದೆ ಎನ್ನುವುದಾದರೆ ಇಬ್ಬರೂ ತ್ಯಜಿಸಲಿ, ಆಗದಿದ್ದರೆ ಎಂದಿನಂತೆ ಕಲಿಕೆ, ವಿದ್ಯಾಭ್ಯಾಸ, ಉತ್ತೀರ್ಣ, ಭವಿಷ್ಯ ರೂಪಿಸಿಕೊಳ್ಳುವತ್ತ ಮನಸ್ಸು ಮಾಡಲಿ. ಜಾತಿ ಅಥವಾ ರಾಜಕೀಯವು ಯಾರ ಭವಿಷ್ಯವನ್ನೂ ರೂಪಿಸುವುದಿಲ್ಲ ಎಂಬುದನ್ನು ಓದುವ ಮಕ್ಕಳು ಅರ್ಥ ಮಾಡಿಕೊಂಡರೆ ಸಾಕು.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಛೀಮಾರಿಯಿಂದಷ್ಟೇ ಕಾಮಗಾರಿಯೇ?

ಬೆಂಗಳೂರಿನ ಮಲ್ಲೇಶ್ವರ ಬಡಾವಣೆಯಲ್ಲಿ ಅವೈಜ್ಞಾನಿಕ ರಸ್ತೆ ಉಬ್ಬೊಂದನ್ನು ಸ್ಥಳೀಯ ಶಾಸಕರ ಛೀಮಾರಿಯ ನಂತರ ಸರಿಪಡಿಸಲು ಬಿಬಿಎಂಪಿ ಸಿಬ್ಬಂದಿ ಮುಂದಾದದ್ದು ವ್ಯವಸ್ಥೆಯ ದುರವಸ್ಥೆಯೇ ಸರಿ. ರಸ್ತೆ ಉಬ್ಬನ್ನು ಹಾಕುವ ಕಾಮಗಾರಿಯ ಹೊಣೆ ಹೊತ್ತವರಿಗೆ ಹಾಗೂ ಅದನ್ನು ಸರಿಯಾಗಿ ನಿರ್ವಹಿಸಲಾಗುತ್ತಿದೆಯೇ ಎಂಬುದನ್ನು ದೃಢೀಕರಿಸುವ ಅಧಿಕಾರಿಗಳಿಗೆ ಅಲ್ಲಿನ ಕೊರತೆಗಳ ಸಾಮಾನ್ಯ ಪರಿಜ್ಞಾನವೂ ಇಲ್ಲದಿರುವುದು ಇದರಿಂದ ತಿಳಿಯುತ್ತದೆ.

ಈ ರಸ್ತೆ ಉಬ್ಬನ್ನು ನೋಡಿದ ಶಾಸಕರು ಸೋಮವಾರ ಸಂಜೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಾಗ, ಅದೇ ದಿನ ತಡರಾತ್ರಿಯೇ ಅದನ್ನು ಸರಿಪಡಿಸಲಾಗಿದೆ. ಯಾವುದೇ ಸೂಚನಾ ಫಲಕಗಳಿಲ್ಲದೆ, ಯಾವುದೇ ಬಿಳಿಯ ಅಡ್ಡಪಟ್ಟಿಗಳೂ ಇಲ್ಲದೆ ರಾತ್ರಿ ಹೊತ್ತು ಆ ನಿರ್ದಿಷ್ಟ ಸ್ಥಳದಲ್ಲಿ ಸೂಕ್ತವಾದ ಬೀದಿ ದೀಪದ ವ್ಯವಸ್ಥೆಯೂ ಇಲ್ಲದಿದ್ದುದರಿಂದ 7-8 ಅಪಘಾತಗಳು ನಡೆದು ಹಲವು ಸವಾರರು ಗಂಭೀರವಾಗಿ ಗಾಯಗೊಂಡಿದ್ದರು. ಸೂಕ್ತವಾಗಿ ಕಾರ್ಯ ನಿರ್ವಹಿಸದ ಅಧಿಕಾರಿಗಳು ಅಪಘಾತಕ್ಕೀಡಾದವರ ಕಷ್ಟ ನಷ್ಟಗಳಿಗೆ ನೇರ ಹೊಣೆಗಾರರಲ್ಲವೇ? ಹಾಗಿದ್ದರೆ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಲಾಗದ ಅಧಿಕಾರಿಗಳಿಗೆ ಸದಾಕಾಲ ಶಾಸಕರು, ಮಂತ್ರಿ ಮಹೋದಯರ ಛೀಮಾರಿ ಅಗತ್ಯವೇ?!

ಎಂ.ಶಂಕರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚೀನಾದಿಂದ ಆಮದು ಹೆಚ್ಚಳ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.


ಚೀನಾದಿಂದ ಭಾರತವು ಆಮದು ಮಾಡಿಕೊಳ್ಳುವ ಸರಕು ಮತ್ತು ಸೇವೆಗಳ ಮೊತ್ತದಲ್ಲಿ ಭಾರಿ ಪ್ರಮಾಣದ ಏರಿಕೆಯಾಗಿದೆ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಚೀನಾದಿಂದ ಆಮದು ಪ್ರಮಾಣ ಗಣನೀಯವಾಗಿ ಏರಿಕೆಯಾಗಿದೆ. 2012-13ನೇ ಸಾಲಿನಲ್ಲಿ ಚೀನಾದ ಆಮದು ಮೊತ್ತವು ₹2.84 ಲಕ್ಷ ಕೋಟಿಯಷ್ಟು ಇತ್ತು. 2018-19ನೇ ಸಾಲಿನ ವೇಳೆಗೆ ಈ ಮೊತ್ತವು ₹4.92 ಲಕ್ಷ ಕೋಟಿಗೆ ಏರಿಕೆಯಾಗಿತ್ತು. ಇದು ಒಟ್ಟಾರೆ ಶೇ 73.23ರಷ್ಟು ಏರಿಕೆ. ಇದು ಚೀನಾದ ಮೇಲಿನ ಭಾರತದ ಅವಲಂಬನೆ ಹೆಚ್ಚುತ್ತಿರುವುದನ್ನು ತೋರಿಸುತ್ತದೆ.

2012-13ನೇ ಸಾಲಿನಲ್ಲಿ ಭಾರತವು ವಿಶ್ವದ ಎಲ್ಲಾ ದೇಶಗಳಿಂದ ₹26.69 ಲಕ್ಷ ಕೋಟಿ ಮೊತ್ತದಷ್ಟು ಸರಕು ಮತ್ತು ಸೇವೆಗಳನ್ನು ಆಮದು ಮಾಡಿಕೊಂಡಿತ್ತು. 2018-19ನೇ ಸಾಲಿನಲ್ಲಿ ಈ ಮೊತ್ತವು ₹35.94 ಲಕ್ಷ ಕೋಟಿಗೆ ಏರಿಕೆಯಾಗಿತ್ತು. ಆದರೂ ಈ ಏರಿಕೆ ಪ್ರಮಾಣವು ಶೇ 34.59ರಷ್ಟು ಮಾತ್ರ. ಚೀನಾದಿಂದ ಆಮದು ಮಾಡಿಕೊಳ್ಳಲಾದ ಸರಕು ಮತ್ತು ಸೇವೆಗಳ ಮೊತ್ತವು ಇದರ ದುಪ್ಪಟ್ಟು ಏರಿಕೆಯಾಗಿದೆ. ಇದೂ ಸಹ ಚೀನಾದ ಮೇಲಿನ ಭಾರತದ ಅವಲಂಬನೆ ಹೆಚ್ಚುತ್ತಿರುವುದನ್ನು ಸೂಚಿಸುತ್ತದೆ.

2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ದೇಶದ ಆಮದು ಪ್ರಮಾಣವನ್ನು ಕಡಿಮೆ ಮಾಡುವ ಗುರಿಯನ್ನು ಹಾಕಿಕೊಂಡಿತ್ತು. ಇದಕ್ಕಾಗಿ ಭಾರತದಲ್ಲೇ ತಯಾರಿಸಿ (ಮೇಕ್ ಇನ್ ಇಂಡಿಯಾ) ಅಭಿಯಾನಕ್ಕೆ ಚಾಲನೆ ನೀಡಿತು. ಈ ಅಭಿಯಾನವನ್ನು ಯಶಸ್ವಿಗೊಳಿಸಲು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿತು. ಹೀಗಿದ್ದೂ, ದೇಶದ ಆಮದು ಅವಲಂಬನೆ ಕಡಿಮೆಯಾಗಲಿಲ್ಲ.

2020ರಲ್ಲಿ ಗಾಲ್ವನ್ ಕಣಿವೆಯಲ್ಲಿ ಚೀನಾ ಸೈನಿಕರು ಭಾರತದ ಸೈನಿಕರ ಜತೆ ಸಂಘರ್ಷ ನಡೆಸಿದ ನಂತರ, ಚೀನಾದ ವಸ್ತುಗಳನ್ನು ಬಹಿಷ್ಕರಿಸುವ ಟ್ರೆಂಡ್ ದೇಶದೆಲ್ಲೆಡೆ ಚಾಲ್ತಿಗೆ ಬಂದಿತ್ತು. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರವೂ 'ಆತ್ಮನಿರ್ಭರ ಭಾರತ' ಅಭಿಯಾನ ಆರಂಭಿಸಿತು. ಇದರ ಜತೆಯಲ್ಲೇ 'ವೋಕಲ್ ಫಾರ್ ಲೋಕಲ್' ಕಾರ್ಯಕ್ರಮಕ್ಕೂ ಚಾಲನೆ ದೊರೆಯಿತು. ಆಮದು ಅವಲಂಬನೆ ಕಡಿಮೆ ಮಾಡಿ, ಸ್ಥಳೀಯ ವಸ್ತುಗಳು/ಸರಕುಗಳ ಬಳಕೆಯನ್ನು ಉತ್ತೇಜಿಸುವ ಈ ಕಾರ್ಯಕ್ರಮಗಳ ಉದ್ದೇಶವೂ ಸಂಪೂರ್ಣವಾಗಿ ಈಡೇರಿದಂತೆ ಕಾಣುವುದಿಲ್ಲ. ಈ ಅವಧಿಯಲ್ಲಿ ಮತ್ತೆ ಚೀನಾದಿಂದ ಆಮದು ಮಾಡಿಕೊಳ್ಳಲಾದ ಸರಕು ಮತ್ತು ಸೇವೆಗಳ ಮೊತ್ತವು ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಚೀನಾದಿಂದ ಆಮದು ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ.

ಚೀನಾದಿಂದ ಆಮದಾದ ಸರಕು ಮತ್ತು ಸೇವೆಗಳ ಮೊತ್ತ (₹ ಲಕ್ಷ ಕೋಟಿಗಳಲ್ಲಿ)



ಗಾಲ್ವನ್ ಸಂಘರ್ಷ

ಭಾರತ–ಹಾಗೂ ಚೀನಾ ನಡುವೆ ಸೃಷ್ಟಿಯಾಗಿದ್ದ 72 ದಿನಗಳ ಸೇನಾ ಬಿಕ್ಕಟ್ಟು ತಿಳಿಯಾಯಿತು ಎನ್ನುವಾಗಲೇ ಗಾಲ್ವನ್ ಬಿಕ್ಕಟ್ಟು ಉಭಯ ದೇಶಗಳ ಸಂಬಂಧವನ್ನು ಇನ್ನಷ್ಟು ಕೆಡಿಸಿತು. 2020ರ ಮೇ ತಿಂಗಳಲ್ಲಿ ಗಾಲ್ವನ್ ಕಣಿವೆಯಲ್ಲಿ ಚೀನಾ ಹಾಗೂ ಭಾರತದ ಸೈನಿಕರ ನಡುವೆ ಘರ್ಷಣೆ ನಡೆದು ಭಾರತದ 20 ಸೈನಿಕರು ಹುತಾತ್ಮರಾದರು.

ಉಭಯ ದೇಶಗಳ ಗಡಿಗಳಲ್ಲಿ ಸೇನಾ ಜಮಾವಣೆ ಹಾಗೂ ಘರ್ಷಣೆ ವಿಚಾರವು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರಿ ಸುದ್ದಿಯಾಗಿತ್ತು. ಆದರೆ, ಘರ್ಷಣೆಯಲ್ಲಿ ಚೀನಾ ಸೇನೆಯ ಎಷ್ಟು ಸೈನಿಕರು ಮೃತಪಟ್ಟಿದ್ದಾರೆ ಎಂಬ ಬಗ್ಗೆ ಇರುವ ಗೊಂದಲ ಇನ್ನೂ ಬಗೆಹರಿದಿಲ್ಲ. ಆದರೆ ಈ ಘಟನೆಯ ನಂತರ ಚೀನಾ ವಸ್ತುಗಳ ಬಳಕೆಯನ್ನು ಬಹಿಷ್ಕರಿಸಬೇಕು ಎಂಬ ಆಗ್ರಹ ತೀವ್ರವಾಗಿತ್ತು.



ರಾಮಾನುಜಾಚಾರ್ಯರ ಪ್ರತಿಮೆ


ಚೀನಾದ ಮೇಲಿನ ಅವಲಂಬನೆ ಹೆಚ್ಚಳ

ದೇಶದ ಒಟ್ಟು ಆಮದಿನಲ್ಲಿ ಚೀನಾದ ಪಾಲು ಪ್ರತೀ ವರ್ಷ ಹೆಚ್ಚುತ್ತಲೇ ಇದೆ. 2012-13ನೇ ಸಾಲಿನಲ್ಲಿ ಭಾರತದ ಒಟ್ಟು ಆಮದಿನಲ್ಲಿ ಚೀನಾದ ಪ್ರಮಾಣ ಶೇ 10.65ರಷ್ಟಿತ್ತು. 2020-21ನೇ ಸಾಲಿನಲ್ಲಿ ಈ ಪ್ರಮಾಣವು ಶೇ 16.54ಕ್ಕೆ ಏರಿಕೆಯಾಗಿತ್ತು. ಇದು ಈವರೆಗಿನ ಗರಿಷ್ಠ ಪ್ರಮಾಣವಾಗಿದೆ. ಪ್ರಸ್ತುತ ಆರ್ಥಿಕ ವರ್ಷದ ಮೊದಲ ಎಂಟು ತಿಂಗಳಲ್ಲಿ ದೇಶವು ಮಾಡಿಕೊಂಡಿರುವ ಒಟ್ಟು ಆಮದಿನಲ್ಲಿ ಚೀನಾದ ಪಾಲು ಶೇ 15.47ರಷ್ಟಿದೆ. ಇದು ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಶೇ 18ರಷ್ಟನ್ನು ದಾಟಲಿದೆ ಎಂದು ಅಂದಾಜಿಸಲಾಗಿದೆ.

2020-21ನೇ ಸಾಲಿನಲ್ಲಿ ಭಾರತವು ಚೀನಾದಿಂದ ₹11,503 ಕೋಟಿ ಮೊತ್ತದಷ್ಟು ರಸಗೊಬ್ಬರವನ್ನು ಆಮದು ಮಾಡಿಕೊಂಡಿತ್ತು. 2021-22ನೇ ಸಾಲಿನ ಮೊದಲ ಎಂಟು ತಿಂಗಳ ಅಂತ್ಯದ ವೇಳೆಗೆ ಈ ಮೊತ್ತವು ₹19,005 ಕೋಟಿಗೆ ಏರಿಕೆಯಾಗಿದೆ. ಒಂದೇ ವರ್ಷದಲ್ಲಿ ರಸಗೊಬ್ಬರ ಆಮದಿನ ಪ್ರಮಾಣವು ಶೇ 65.21ರಷ್ಟು ಏರಿಕೆಯಾಗಿದೆ. ಇದು ಚೀನಾದಿಂದ ಆಮದು ಮಾಡಿಕೊಳ್ಳಲಾದ ಯಾವುದೇ ಸರಕಿನ ಹೋಲಿಕೆಯಲ್ಲಿ ಅತ್ಯಂತ ಗರಿಷ್ಠ ಪ್ರಮಾಣದ ಏರಿಕೆಯಾಗಿದೆ.

2020-21ನೇ ಸಾಲಿನಲ್ಲಿ ಭಾರತವು ಚೀನಾದಿಂದ ₹1.03 ಲಕ್ಷ ಕೋಟಿ ಮೊತ್ತದಷ್ಟು ಪರಮಾಣು ರಿಯಾಕ್ಟರ್ ಮತ್ತು ಅದರ ಬಿಡಿಭಾಗಗಳನ್ನು ಆಮದು ಮಾಡಿಕೊಂಡಿದೆ. 2021-22ನೇ ಸಾಲಿನ ಮೊದಲ 8 ತಿಂಗಳಲ್ಲಿ ₹91,536 ಕೋಟಿ ಮೊತ್ತದಷ್ಟು ಪರಮಾಣು ರಿಯಾಕ್ಟರ್‌ಗಳನ್ನು ಆಮದು ಮಾಡಿಕೊಳ್ಳಲಾಗಿದೆ. 2020-21ನೇ ಸಾಲಿನಲ್ಲಿ ಭಾರತವು ಚೀನಾದಿಂದ ₹1.50 ಲಕ್ಷ ಕೋಟಿ ಮೊತ್ತದಷ್ಟು ಎಲೆಕ್ಟ್ರಿಕಲ್ ವಸ್ತುಗಳು, ಉಪಕರಣಗಳು ಮತ್ತು ಅವುಗಳ ಬಿಡಿಭಾಗಗಳನ್ನು ಆಮದು ಮಾಡಿಕೊಂಡಿದೆ. 2021-22ನೇ ಸಾಲಿನ ಮೊದಲ ಎಂಟು ತಿಂಗಳಲ್ಲಿ ₹1.31 ಲಕ್ಷ ಕೋಟಿ ಮೊತ್ತದಷ್ಟು ಈ ವಸ್ತುಗಳನ್ನು ಆಮದು ಮಾಡಿಕೊಂಡಿದೆ.

ದೇಶದ ಒಟ್ಟು ಆಮದಿನಲ್ಲಿ ಚೀನಾದ ಪಾಲು



ಆಧಾರ: ವಾಣಿಜ್ಯ ಸಚಿವಾಲಯದ 'ರಫ್ತು–ಆಮದು ದತ್ತಾಂಶ ಬ್ಯಾಂಕ್' ಮತ್ತು ಮಾಸಿಕ ವರದಿಗಳು, ಪಿಟಿಐ

'ನವ ಭಾರತ ಚೀನಾ ನಿರ್ಭರವೇ?'

ಕೇಂದ್ರ ಸರ್ಕಾರದ ಜನಪ್ರಿಯ 'ಆತ್ಮನಿರ್ಭರ ಭಾರತ' ಘೋಷಣೆಯನ್ನು ಮೂದಲಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಅದನ್ನು 'ಚೀನಾ ನಿರ್ಭರವೇ' ಎಂದು ಪ್ರಶ್ನಿಸಿದ್ದಾರೆ. ಹೈದರಾಬಾದ್‌ನಲ್ಲಿ ಇತ್ತೀಚೆಗೆ ಉದ್ಘಾಟನೆಗೊಂಡ ರಾಮಾನುಜಾಚಾರ್ಯರ ಬೃಹತ್ ಪ್ರತಿಮೆಯನ್ನು ಚೀನಾ ನಿರ್ಮಿಸಿದೆ ಎಂಬುದನ್ನು ಉಲ್ಲೇಖಿಸಿ ಅವರು ಈ ಟೀಕೆ ಮಾಡಿದ್ದಾರೆ. ಟ್ವೀಟ್ ಮಾಡಿರುವ ಅವರು 'ನವ ಭಾರತವು 'ಚೀನಾ ನಿರ್ಭರ'ವೇ' ಎಂದು ಅವರು ಪ್ರಶ್ನಿಸಿದ್ದಾರೆ.

ಆತ್ಮನಿರ್ಭರ ಭಾರತ, ಮೇಕ್ ಇನ್ ಇಂಡಿಯಾ, ಚೀನಾದ ಸರಕುಗಳಿಗೆ ನಿಷೇಧ ಹೇರಬೇಕು ಎಂಬ ಆಗ್ರಹ ಹಾಗೂ ಗಡಿ ಸಂಘರ್ಷದ ನಡುವೆಯೂ ಚೀನಾದ ಕಂಪನಿಗಳು ಭಾರತದಲ್ಲಿ ಹಲವು ಯೋಜನೆಗಳನ್ನು ಕೈಗೆತ್ತಿಕೊಂಡಿವೆ.

ಕಳೆದ ಶನಿವಾರ, ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟನೆ ಮಾಡಿದ ರಾಮಾನುಜಾಚಾರ್ಯರ ಪ್ರತಿಮೆ ತಯಾರಾದದ್ದು ಚೀನಾದಲ್ಲಿ. ಚೀನಾದ ಏರೋಸನ್ ಕಾರ್ಪೊರೇಷನ್ ಕಂಪನಿಗೆ 2015ರಲ್ಲಿ ₹135 ಕೋಟಿ ಮೊತ್ತದ ಗುತ್ತಿಗೆ ನೀಡಲಾಗಿತ್ತು. ಚೀನಾದಲ್ಲಿ ಇದರ ಬಿಡಿಭಾಗಗಳನ್ನು ತಯಾರಿಸಿ, ಭಾರತದಲ್ಲಿ ಅವುಗಳನ್ನು ಜೋಡಿಸಲಾಗಿದೆ.

2018ರಲ್ಲಿ ₹3 ಸಾವಿರ ಕೋಟಿ ವೆಚ್ಚದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆ ನಿರ್ಮಾಣದಲ್ಲೂ ಚೀನಾದ ಕೊಡುಗೆಯಿದೆ. ಪ್ರತಿಮೆಯ ಮೇಲ್ಮೈಗೆ ಹೊದಿಸಲಾಗಿರುವ ಕಂಚಿನ ಕವಚಗಳು ತಯಾರಾಗಿದ್ದು ಚೀನಾದಲ್ಲಿ. 553 ಕಂಚಿನ ಕವಚಗಳನ್ನು ಚೀನಾದಲ್ಲಿ ತಯಾರಿಸಿ, ಭಾರತಕ್ಕೆ ತಂದು ಜೋಡಲಾಗಿದೆ ಎಂದು ಗುತ್ತಿಗೆ ವಹಿಸಿಕೊಂಡಿದ್ದ ಎಲ್ ಅಂಡ್ ಟಿ ಕಂಪನಿ ಹೇಳಿದೆ. ಇದು ಅಂತರರಾಷ್ಟ್ರೀಯ ಬಿಡ್ಡಿಂಗ್‌ನ ಭಾಗವಾಗಿದ್ದು, ಭಾರತದಲ್ಲಿ ಇಷ್ಟು ಬೃಹತ್ ಗಾತ್ರದ ಕವಚಗಳನ್ನು ತಯಾರಿಸುವ ಸೌಲಭ್ಯ ಇರಲಿಲ್ಲ ಎಂದು ಕಂಪನಿಯ ಅಧಿಕಾರಿಗಳು ಹೇಳಿದ್ದರು.

ಕೇವಲ ಪ್ರತಿಮೆ ನಿರ್ಮಾಣದಲ್ಲಿ ಮಾತ್ರವಲ್ಲದೆ, ದೇಶದ ಹಲವು ಬೃಹತ್ ಯೋಜನೆಗಳಲ್ಲಿ ಚೀನಾ ಕೆಲಸ ಮಾಡುತ್ತಿದೆ. ಶಾಂಘೈ ಟನೆಲ್ ಎಂಜಿನಿಯರಿಂಗ್ ಎಂಬ ಚೀನಾದ ಬಹುರಾಷ್ಟ್ರೀಯ ನಿರ್ಮಾಣ ಕಂಪನಿಗೆ ₹1,226 ಕೋಟಿ ಮೊತ್ತದ ಗುತ್ತಿಗೆಯನ್ನು ಸರ್ಕಾರ ನೀಡಿದೆ. ದೆಹಲಿ–ಮೀರತ್ ಆರ್‌ಆರ್‌ಟಿಎಸ್ ಯೋಜನೆಯ ಭಾಗವಾಗಿ, 5.6 ಕಿಲೋಮೀಟರ್ ಉದ್ದದ ಸುರಂಗ ಮಾರ್ಗವನ್ನು ನಿರ್ಮಿಸಲು ಗುತ್ತಿಗೆ ನೀಡಲಾಗಿದೆ. ಚೀನಾದ ಗ್ರೇಟ್ ವಾಲ್ ಆಟೊಮೊಬೈಲ್ ಕಂಪನಿಯು ಭಾರತದಲ್ಲಿ ಮುಂದಿನ ಐದು ವರ್ಷಗಳಲ್ಲಿ ₹7,500 ಕೋಟಿ ಹೂಡಿಕೆ ಮಾಡಲು ಮುಂದಾಗಿದೆ. ಭಾರತದಲ್ಲಿ ವಿದ್ಯುತ್‌ಚಾಲಿತ ಕಾರುಗಳ ಮಾರಾಟಕ್ಕೆ ಕಂಪನಿ ಆಲೋಚಿಸುತ್ತಿದೆ.

2020ರಲ್ಲಿ ನಡೆದ ಗಾಲ್ವನ್ ಗಡಿ ಘರ್ಷಣೆಯಿಂದಾಗಿ ₹15 ಸಾವಿರ ಕೋಟಿ ಮೊತ್ತದ 150ಕ್ಕೂ ಹೆಚ್ಚು ಬಂಡವಾಳ ಹೂಡಿಕೆ ಯೋಜನೆಗಳು ನನೆಗುದಿಗೆ ಬಿದ್ದಿವೆ ಎಂದು ಹೇಳಲಾಗಿದೆ. ಭಾರತದ ಜೊತೆ ಗಡಿ ಹಂಚಿಕೊಂಡಿರುವ ದೇಶಗಳ ಯಾವುದೇ ಯೋಜನೆಗಳನ್ನು ಸರ್ಕಾರದ ಅನುಮತಿಯಿಲ್ಲದೆ ಜಾರಿ ಮಾಡುವಂತಿಲ್ಲ ಎಂದು ಘರ್ಷಣೆಯ ಬಳಿಕ ಕೇಂದ್ರ ನಿರ್ದೇಶಿಸಿತ್ತು. ಈ ಸಂಬಂಧ ತನ್ನ ಸಾಮಾನ್ಯ ಹಣಕಾಸು ನಿಯಮಗಳಿಗೆ ತಿದ್ದುಪಡಿ ತಂದಿತ್ತು.

ಆದರೆ, 2021ರ ಜುಲೈನಲ್ಲಿ ಕೆಲವು ನಿರ್ಬಂಧಗಳನ್ನು ಸಡಿಲಗೊಳಿಸಿತ್ತು. ಯೋಜನೆಗಳಿಗೆ ಬಿಡ್ ಮಾಡಲು ತಂತ್ರಜ್ಞಾನ ವರ್ಗಾವಣೆ ಒಪ್ಪಂದಗಳ ಮೂಲಕ ಚೀನೀ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಮಾಡಲು ದೇಶೀಯ ಕಂಪನಿಗಳಿಗೆ ಅವಕಾಶ ನೀಡಿತ್ತು. ಇದರಿಂದ ಚೀನಾದ ಕಂಪನಿಗಳಿಗೆ ಭಾರತದ ಯೋಜನೆಗಳಲ್ಲಿ ಪಾಲ್ಗೊಳ್ಳಲು ಮತ್ತೆ ಅವಕಾಶ ಸಿಕ್ಕಂತಾಗಿತ್ತು. 45 ಯೋಜನೆಗಳು ಸರ್ಕಾರದ ಅನುಮೋದನೆಗೆ ಕಾಯುತ್ತಿವೆ ಎನ್ನಲಾಗಿದೆ.



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 41

ನ್ಯಾಯದಿಂದ ಧನ ಸಂಪಾದಿಸಬೇಕು

ದೈನ್ಯವನ್ನಾಶ್ರಯಿಸದೆ ಅಂದರೆ, ಯಾಚನೆ ಮಾಡದೆ, ಹೆಚ್ಚು ಕ್ಲೇಶವನ್ನು ಪಡೆಯದೆ ಧನವನ್ನು ಸಂಪಾದಿಸಬೇಕು. ಪ್ರಯತ್ನಪೂರ್ವಕವಾಗಿ ಅತ್ಯಾಸೆಯಿಂದ ಹಣ ಸಂಪಾದಿಸಬಾರದು. ನ್ಯಾಯದಿಂದ ಸಂಪಾದಿಸಿದ ಧನವನ್ನು ಯೋಗ್ಯರಾದವರಿಗೆ ದಾನ ಮಾಡಿದರೆ ಬ್ರಹ್ಮಜ್ಞಾನವು ಸಿದ್ಧಿಸುವುದು. ಜ್ಞಾನಸಿದ್ಧಿಯಿಂದ ಮತ್ತು ಗುರುಗಳ ಅನುಗ್ರಹದಿಂದ ಸರ್ವರಿಗೂ ಮೋಕ್ಷ ಸಿದ್ಧಿಸುವುದು. ಮೋಕ್ಷದಿಂದ ಬ್ರಹ್ಮಸ್ವರೂಪವು ಸಿದ್ಧಿಸುವುದು. ಉತ್ಕೃಷ್ಟವಾದ ಬ್ರಹ್ಮಾನಂದವೂ ಲಭಿಸುವುದು. ಗೃಹಸ್ಥನಾದವನು ತನ್ನ ಶಕ್ತಿಗನುಸಾರವಾಗಿ ಧನಧಾನ್ಯಗಳನ್ನು ದಾನ ಮಾಡಬೇಕು. ಯಾವಾವ ಕಾಲದಲ್ಲಿ ಯಾವಾವ ವಸ್ತು, ಫಲ, ಧಾನ್ಯ ಮುಂತಾದುವುಗಳು ಸಿಗುವುವೋ ಅವೆಲ್ಲವನ್ನು ತನಗೆ ಬೇಕಾದಷ್ಟು ಇಟ್ಟುಕೊಂಡು, ಉಳಿದುದನ್ನು ಇಲ್ಲದವರಿಗೆ ಮತ್ತು ಜನಹಿತ ಬಯಸುವವರಿಗೆ ದಾನ ಮಾಡಬೇಕು. ಹಸಿವು-ಬಾಯಾರಿಕೆಗಳ ಶಾಂತ್ಯರ್ಥವಾಗಿ ಸರ್ವಪ್ರಾಣಿಗಳಿಗೂ ನೀರು ಮತ್ತು ಅನ್ನವನ್ನು ಕೊಡಬೇಕು. ಅನ್ನವು ನಾಲ್ಕು ವಿಧವಾಗಿರುವುದು. ಅವು ಕ್ಷೇತ್ರ, ಧಾನ್ಯ, ಆಮ (ಹಸಿಯ ಹಿಟ್ಟು) ಮತ್ತು ಅನ್ನಗಳೆಂದು ನಾಲ್ಕು ವಿಧ. ಅನ್ನವನ್ನು ದಾನವಾಗಿ ತೆಗೆದುಕೊಂಡವನು ಯಾವ ಕಾಲದವರೆಗೆ ಬದುಕಿರುವನೋ ಅಲ್ಲಿಯವರೆಗೆ ಅವನು ಮಾಡಿದ ಪುಣ್ಯದಲ್ಲಿ ಅರ್ಧವು ಅನ್ನದಾತ ಅಂದರೆ, ಬೆಳೆದ ರೈತನಿಗೆ ಲಭಿಸುವುದು. ಇದರಲ್ಲಿ ಸಂಶಯವಿಲ್ಲ.

ದಾನವನ್ನು ತೆಗೆದುಕೊಂಡವನು, ತೆಗೆದುಕೊಂಡ ದಾನದ ಶುದ್ಧಿಗಾಗಿ ತಾನು ಸಹ ದಾನ ಮಾಡಬೇಕು. ಇದಾಗದಿದ್ದರೆ ತಪಸ್ಸನ್ನು ಮಾಡಿಯಾದರೂ ಪಾಪವನ್ನು ಕಳೆದುಕೊಳ್ಳಬೇಕು. ಇಲ್ಲದಿದ್ದರೆ ಘೋರವಾದ ನರಕವು ಲಭಿಸುವುದು. ತಾನು ಗಳಿಸಿದ ಸಂಪತ್ತನ್ನು ಧರ್ಮ, ವೃದ್ಧಿ ಮತ್ತು ತನ್ನ ಜೀವನ ಅಂತ ಮೂರು ಭಾಗ ಮಾಡಿ ವಿನಿಯೋಗಿಸಬೇಕು. ನಿತ್ಯಕರ್ಮ, ನೈಮಿತ್ತಿಕ ಕರ್ಮ ಮತ್ತು ಕಾಮ್ಯಕರ್ಮಗಳನ್ನು ವಿಧಿವತ್ತಾಗಿ ಮಾಡಬೇಕು. ವೃದ್ಧಿಗಾಗಿಟ್ಟ ಧನದಿಂದ ಧನವನ್ನು ವೃದ್ಧಿಗೊಳಿಸಬೇಕು. ಭೋಗಕ್ಕಾಗಿ ಇಟ್ಟ ಧನದಿಂದ ಹಿತವೂ ಪರಿಮಿತವೂ ಪರಿಶುದ್ಧವೂ ಆದಂತಹ ವಸ್ತುವನ್ನು ಸೇವಿಸಬೇಕು. ವ್ಯವಸಾಯದಿಂದ ಲಭಿಸಿದ ದ್ರವ್ಯದಲ್ಲಿ ಹತ್ತನೆಯ ಒಂದಂಶವನ್ನು ಸೇವಿಸಬೇಕು. ವ್ಯವಸಾಯದಿಂದ ಲಭಿಸಿದ ದ್ರವ್ಯದಲ್ಲಿ ಹತ್ತನೆಯ ಒಂದಂಶವನ್ನು ಪಾಪಶುದ್ಧಿಗಾಗಿ ದಾನಮಾಡಬೇಕು. ಮಿಕ್ಕ ದ್ರವ್ಯದಿಂದ ಧರ್ಮ ಮುಂತಾದುವುಗಳನ್ನು ಮಾಡಬೇಕು.

ಬುದ್ಧಿವಂತನಾದ ವೈಶ್ಯನು ವ್ಯಾಪಾರದಿಂದ ಬಂದ ಲಾಭದಲ್ಲಿ ಆರನೆಯ ಒಂದಂಶವನ್ನು ದಾನಮಾಡಬೇಕು. ಜನಸಾಮಾನ್ಯನು ನ್ಯಾಯವಾಗಿ ದಾನವನ್ನು ತೆಗೆದುಕೊಂಡುದರಲ್ಲಿ ನಾಲ್ಕನೆಯ ಒಂದಂಶವನ್ನು ದಾನ ಮಾಡಬೇಕು. ಹಾಗೆಯೇ ಅಕಸ್ಮಾತ್ತು ಸಿಕ್ಕಿದ ಧನದಲ್ಲಿ ಅರ್ಧಭಾಗವನ್ನು ದಾನ ಮಾಡಬೇಕು. ದುರ್ದಾನವನ್ನು ತೆಗೆದುಕೊಂಡರೆ, ಅದರ ಲಾಭವನ್ನೆಲ್ಲವನ್ನೂ ಸಮುದ್ರದಲ್ಲೆಸೆಯಬೇಕು. ತನ್ನ ಭೋಗದ ಅಭಿವೃದ್ಧಿಗಾಗಿ ಕರೆದು ದಾನವನ್ನು ಕೊಡಬೇಕು. ದರಿದ್ರನಾದವನು ಕೇಳಿದ ವಸ್ತುವೆಲ್ಲವನ್ನೂ ತನ್ನ ಶಕ್ತಿಗೆ ಅನುಸಾರವಾಗಿ ಕೊಡಬೇಕು. ಹಾಗೆ ಕೊಡದಿದ್ದವನು ಜನ್ಮಾಂತರದಲ್ಲಿ ಸಾಲಗಾರನಾಗುವನು.

ತಿಳಿವಳಿಕೆಯುಳ್ಳವನು ಇನ್ನೊಬ್ಬರ ದೋಷವನ್ನು ಎತ್ತಿ ಆಡಬಾರದು. ಕೇಳಿದ ಮತ್ತು ನೋಡಿದಂತಹ ಇನ್ನೊಬ್ಬರ ದೋಷವನ್ನು ಸಹ ಹೇಳಬಾರದು. ಕೋಪವನ್ನುಂಟುಮಾಡುವಂತೆ ಮಾತನಾಡಬಾರದು. ಪ್ರಾತಃಕಾಲ ಸಂಧ್ಯಾಕಾಲಗಳಲ್ಲಿ ಅಗ್ನಿಕಾರ್ಯ, ಉಪಾಸನಗಳನ್ನು ಐಶ್ವರ್ಯಸಿದ್ಧಿಗಾಗಿ ಆಚರಿಸಬೇಕು. ಹಾಗೆಯೇ, ಅಶಕ್ತನಾದವನು ಒಂದು ಕಾಲದಲ್ಲಿಯಾದರೂ ಸೂರ್ಯ ಮತ್ತು ಅಗ್ನಿಗಳನ್ನು ವಿಧಿವತ್ತಾಗಿ ತೃಪ್ತಿಪಡಿಸಬೇಕು. ಅಕ್ಕಿ, ಧಾನ್ಯ, ತುಪ್ಪ, ಫಲ, ಗೆಡ್ಡೆಗೆಣಸು ಮುಂತಾದವುಗಳನ್ನು ಅಗ್ನಿಯ ಮೂಲಕ ಹವಿಸ್ಸಾಗಿ ಅರ್ಪಿಸಬೇಕು; ವಿಧಿವತ್ತಾಗಿ ಸ್ಥಾಲೀಪಾಕಕರ್ಮವನ್ನು ಮಾಡಬೇಕು.

ಎಲ್ಲಾ ಹವಿಸ್ಸುಗಳೂ ಸಿಕ್ಕದಿದ್ದರೆ ಪ್ರಧಾನ ಹೋಮವೊಂದನ್ನಾದರೂ ಮಾಡಬೇಕು. ಇದಕ್ಕೆ ನಿತ್ಯಕರ್ಮವೆಂದು ಹೆಸರು. ಇವುಗಳನ್ನು ನಿತ್ಯವೂ ಮಾಡಬೇಕೆಂದು; ಅಥವಾ ಸಂಧ್ಯಾಕಾಲದಲ್ಲಿ ಸೂರ್ಯವಂದನೆ ಜಪಗಳನ್ನಾದರೂ ಮಾಡಬೇಕು. ಈ ರೀತಿಯಾಗಿ ಆತ್ಮಸ್ವರೂಪವನ್ನ ಅಪೇಕ್ಷಿಸುವ ಮುಮುಕ್ಷುಗಳೂ, ಧನವನ್ನ ಅಪೇಕ್ಷಿಸುವ ಸಂಸಾರಿಗಳೂ ವಿಧಿವತ್ತಾಗಿ ನಿತ್ಯಕರ್ಮವನ್ನು ಮಾಡಬೇಕು. ಬ್ರಹ್ಮಯಜ್ಞ ಅಂದರೆ ವೇದಾಧ್ಯಯನವನ್ನೂ ದೇವಪೂಜೆಯನ್ನೂ ನಿತ್ಯವೂ ಮಾಡಬೇಕು. ನಿತ್ಯವೂ ಅಗ್ನಿಯನ್ನು ಪೂಜಿಸಬೇಕು. ಗುರುಪೂಜೆಯನ್ನು ಮಾಡಬೇಕು. ಇಂಥವರು ಸ್ವರ್ಗವನ್ನು ಪಡೆಯುವರು – ಎಂಬುದಾಗಿ ಸೂತಮುನಿಯು ಪ್ರಯಾಗದ ಋಷಿಮುನಿಗಳಿಗೆ ಹೇಳುವುದರೊಂದಿಗೆ, ಶಿವಪುರಾಣದ ಮೊದಲನೆಯ ಸಂಹಿತೆಯಾದ ವಿದ್ಯೇಶ್ವರ ಸಂಹಿತೆಯ ಹದಿಮೂರನೆ ಅಧ್ಯಾಯವು ಮುಕ್ತಾಯವಾಗುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

❌ ಕೇಂದ್ರ ಸರ್ಕಾರದ ಸರ್ವಶಿಕ್ಷಣ ಅಭಿಯಾನವು ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶ ಹೊಂದಿದೆ. ಈ ಅಭಿಯಾನದ ಅಡಿಯಲ್ಲಿ ಉದ್ಯೋಗ ಅವಕಾಶಗಳನ್ನೂ ಇಲಾಖೆ ನೀಡಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಸರ್ವಶಿಕ್ಷ ಡಾಟ್ ಆನ್‌ಲೈನ್' ಹೆಸರಿನ ವೆಬ್‌ಸೈಟ್ ಮುಖಪುಟದ ಚಿತ್ರವನ್ನು ಹಲವರು ಹಂಚಿಕೊಂಡಿದ್ದು, ವಿವಿಧ ಹುದ್ದೆಗಳಿಗೆ ಉದ್ಯೋಗ ನೇಮಕಾತಿಯನ್ನು ಪ್ರಕಟಿಸಲಾಗಿದೆ ಎಂದು ಇದರಲ್ಲಿ ತಿಳಿಸಲಾಗಿದೆ.



✅ 'ಸರ್ವಶಿಕ್ಷ ಡಾಟ್ ಆನ್‌ಲೈನ್' ಹೆಸರಿನ ವೆಬ್‌ಸೈಟ್ ನಕಲಿ ಎಂದು ಕೇಂದ್ರ ಸರ್ಕಾರದ ಪಿಐಬಿ ಫ್ಯಾಕ್ಟ್‌ಚೆಕ್ ವೇದಿಕೆ ತಿಳಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರವನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿರುವ ಪಿಐಬಿ, ಸರ್ವಶಿಕ್ಷಣ ಹೆಸರಿನಲ್ಲಿ ವಂಚಿಸುವವರ ಬಗ್ಗೆ ಎಚ್ಚರ ವಹಿಸುವಂತೆ ತಿಳಿಸಿದೆ. ಸರ್ವಶಿಕ್ಷಣ ಹಾಗೂ ಶಿಕ್ಷಣ ಸಚಿವಾಲಯಕ್ಕೆ ಸಂಬಂಧಪಟ್ಟ ಮಾಹಿತಿಗೆ ಇಲಾಖೆಯ ಅಧಿಕೃತ ವೆಬ್‌ಸೈಟ್‌ಗೆ (https://samagra.education.gov.in) ಭೇಟಿ ನೀಡುವಂತೆ ಮಾಹಿತಿ ನೀಡಿದೆ.

ಗುಂಡಣ್ಣ





ಬೆರಗಿನ ಬೆಳಕು

ಗುರುರಾಜ ಕರಜಗಿ

ಜೀವನದ ಮೂಲ

ಜೀವನದ ಮೂಲ ಮೇಲಿಹುದು ಪರಮೋರ್ಧ್ವದಲಿ|
ತೀವಿರ್ಪುದು ಕೆಳಗೆ ನಮ್ಮ ಲೋಕದಲಿ ||
ನಾವದರ ಕಡ್ಡಿಯೆಲೆ, ಚಿಗುರುವೆವು, ಬಾಡುವೆವು |
ಸಾವು ಮರಕೇನಿಲ್ಲ – ಮಂಕುತಿಮ್ಮ || 560 ||

ಪದ-ಅರ್ಥ: ಪರಮೋರ್ಧ್ವದಲಿ = ಪರಮ(ಶ್ರೇಷ್ಠವಾದ) + ಊರ್ಧ್ವದಲಿ(ಮೇಲೆ), ತೀವಿರ್ಪುದು = ತೀವಿ(ಚಾಚಿ) + ಇರ್ಪುದು(ಇದೆ), ಮರಕೇನಿಲ್ಲ = ಮರಕೆ + ಏನಿಲ್ಲ.

ವಾಚ್ಯಾರ್ಥ: ನಮ್ಮ ಜೀವನದ ಮೂಲ ಮೇಲೆ ಪರಸತ್ವದಲ್ಲಿದೆ. ಕೆಳಗೆ ನಮ್ಮ ಲೋಕದಲ್ಲಿ ಚಾಚಿ ವ್ಯಾಪಿಸಿಕೊಂಡಿದೆ. ನಾವು ಅದರ ಕಡ್ಡಿ, ಎಲೆ. ನಾವು ಚಿಗುರುತ್ತೇವೆ, ಬಾಡುತ್ತೇವೆ. ಆದರೆ ಸಾವು ಮರಕ್ಕೇನೂ ಇಲ್ಲ.

ವಿವರಣೆ: ಇದು ಹಿಂದಿನ ಕಗ್ಗದ ಮುಂದುವರೆದ ಭಾಗ. ಪ್ರಪಂಚ ಒಂದು ಬೃಹತ್ ಅಶ್ವತ್ಥವೃಕ್ಷ. ಅದರ ಬೇರುಗಳು, ಮೂಲಗಳು ಮೇಲಿವೆ ಎನ್ನುತ್ತದೆ. ಬೇರುಗಳು ಮೇಲಿರುವುದು ಸಾಧ್ಯವೆ? ಇದು ಸಾಮಾನ್ಯ ವೃಕ್ಷವಲ್ಲ. ಸಾಂಕೇತಿಕವಾದ ವೃಕ್ಷ.

ಮೂಲ ಯಾವಾಗಲೂ ಮೇಲೆಯೇ ಇರುವುದು. ಒಂದು ವಿಷಯವನ್ನು ಗಮನಿಸಿ. ಕೆಲವು ಪರಿವಾರಗಳಲ್ಲಿ ವಂಶವೃಕ್ಷವನ್ನು ಬರೆಸಿ ಇಟ್ಟಿರುತ್ತಾರೆ. ಅದನ್ನು ಬರೆಯುವುದು ಹೇಗೆ? ಮೊದಲು ವಂಶದ ಅತ್ಯಂತ ಹಿರಿಯರಾರು ಎಂಬುದನ್ನು ಸಂಶೋಧನೆ ಮಾಡಿ, ಖಾತ್ರಿಮಾಡಿಕೊಂಡು, ಅವರ ಹೆಸರನ್ನು ಬರೆಯುತ್ತಾರೆ. ಅವರೊಂದಿಗೆ ಅವರ ಹೆಂಡತಿಯ ಹೆಸರು. ಇವೆರಡು ಹೆಸರುಗಳ ಕೆಳಗೆ ಅವರ ಮಕ್ಕಳ ಮತ್ತು ಅವರ ಹೆಂಡಂದಿರ ಹೆಸರುಗಳು ಬರುತ್ತವೆ. ಹೀಗೆ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿನವರೆಗೆ ಹೆಸರುಗಳು ಕೆಳಗೆ ಕೆಳಗೆ ಬರುತ್ತ ಹೋಗುತ್ತವೆ. ಈಗಿರುವವರ, ಚಿಕ್ಕಮಕ್ಕಳ ಹೆಸರುಗಳು ಕೊನೆಗೆ ಬರುತ್ತವೆ. ಅಲ್ಲವೆ? ಅಂದರೆ ವಂಶದ ಮೂಲ ಯಾವಾಗಲೂ ಮೇಲೆಯೇ.

ಒಂದು ವಂಶದ ಮೂಲವೇ ಮೇಲಿರುವಾಗ, ಇಡೀ ಜಗತ್ಸೃಷ್ಟಿಯ ಮೂಲ ಎಲ್ಲಿರಬೇಕು? ಅದು ಪರಮೋರ್ಧ್ವದಲಿ ಎನ್ನುತ್ತದೆ ಕಗ್ಗ. ಅದು ಯಾವುದು? ಇದು ಒಂದು ಅರ್ಥೆಯವಾದ ಒಂದು ರೂಪಕ. ಯಜುರಾರಣ್ಯಕದಲ್ಲಿ ಒಂದು ಮಾತು ಹೀಗಿದೆ.

ಊರ್ಧ್ವಮೂಲಮವಾಕ್ ಶಾಖಮ್| ವೃಕ್ಷಂ ಯೋ ವೇದ ಸಂಪ್ರತಿ| ನ ಸ ಜಾತು ಜನ: ಶ್ರದ್ಧಧ್ಯಾತ್| ಮೃತ್ಯುರ್ಮಾ ಮಾರಯಾದಿತಿ: ||

'ಸರ್ವೋನ್ನತ ಭಾಗದಲ್ಲಿ ಬುಡದ ಬೇರು. ಅಧೋಭಾಗದಲ್ಲಿ ಕೊಂಬೆಗಳು-ಹೀಗಿರುವ ಮರದ ಮರ್ಮವನ್ನು ಯಾರು ತಿಳಿದಿದ್ದಾರೋ ಅವರ ಮನಸ್ಸಿನಲ್ಲಿ ಮೃತ್ಯುವಿನ ಭಯವಿರದು. ಯಾಕೆಂದರೆ ಆ ವೃಕ್ಷದ ಮೂಲವಿರುವುದು ಶಾಶ್ವತ ಬ್ರಹ್ಮಚೈತನ್ಯದಲ್ಲಿ ಎಂದು ಅವನು ಬಲ್ಲ'.

ವೃಕ್ಷದ ಮೂಲ ಬ್ರಹ್ಮಚೈತನ್ಯವೇ ಆದ್ದರಿಂದ ಈ ಮರಕ್ಕೆ ಸಾವೇ ಇಲ್ಲ. ಇಡೀ ವಿಶ್ವ ಎಂದಿನಿಂದಲೂ ಇದೆ. ಬದಲಾಗುತ್ತಲೂ ಇದೆ. ಇದೊಂದು ರೀತಿಯಲ್ಲಿ ರೇಲ್ವೆ ಸ್ಟೇಶನ್ ಅಥವಾ ಏರಪೋರ್ಟ್ ಇದ್ದಹಾಗೆ ಎಂದು ಕಲ್ಪಿಸಿಕೊಳ್ಳಬಹುದು. ಅಲ್ಲಿ ಜನಜಾತ್ರೆ. ಅದೇನು ಜನ ಭರದಿಂದ ನುಗ್ಗುವುದು! ಒಳಗೆ ಬರಲು ಅವಸರ, ಹೊರಗೆ ಹೋಗಲು ಅವಸರ! ಮತ್ತೊಂದು ತಾಸಿಗೆ ಈ ಜನ ಅಲ್ಲಿಲ್ಲ. ಬೇರೆ ಜನ ಬಂದಿದ್ದಾರೆ. ಆದರೆ ಅದೇ ರಭಸವಿದೆ. ಹಿಂದಿದ್ದವರು ಈಗಿಲ್ಲ, ಈಗಿದ್ದವರು ಮುಂದಿನ ತಾಸಿಗಿಲ್ಲ. ಆದರೆ ಸ್ಟೇಶನ್ ಅಥವಾ ಏರಪೋರ್ಟ್‌ನಲ್ಲಿ ಜನವೋ ಜನ.

ಈ ಸದಾ ಬದಲಾಗುವ ಆದರೆ ಶಾಶ್ವತವಾಗಿಯೇ ಇರುವ ಪ್ರಪಂಚದಲ್ಲಿ ನಾವು ಮನುಷ್ಯರು ಅದರ ಕಡ್ಡಿ, ಎಲೆ ಇದ್ದ ಹಾಗೆ. ಅವು ಬಾಡುತ್ತವೆ, ಮತ್ತೆ ಕೆಲಕಾಲದ ನಂತರ ಚಿಗುರುತ್ತವೆ. ಆದರೆ ಮೂಲವಾದ ಮರ ಮಾತ್ರ ಸಾವಿಲ್ಲದೆ ಚಿರಂಜೀವಿಯಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಗುರುವಾರ ಫೆಬ್ರುವರಿ 10, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಮಕರ ಮಾಸದ 27 ನೇ ದಿನ ತಿಥಿ: (ಮಾಘ ಶುಕ್ಲ) ನವಮಿ ಗಂ. 11-09 ನಕ್ಷತ್ರ: ರೋಹಿಣಿ ಗಂ. 27-32 ಯೋಗ: ಐಂದ್ರ ಗಂ. 18-49, ಕರಣ: ಕೌಲವ ಗಂ. 11-09.
ರಾಹುಕಾಲ : ಮಧ್ಯಾಹ್ನ 01:30 – 03:00 ಸೂರ್ಯೋದಯ : 06-59 ಸೂರ್ಯಾಸ್ತ : 06-31 ಮುಸ್ಲಿಂ ದಿನಾಂಕ : 08 ರಜಬ್ ಅದೃಷ್ಟ ಸಂಖ್ಯೆ: 5, 11, 12

ಮೇಷ: ಸ್ವಲ್ಪ ಪರಿಶ್ರಮವೂ ಕೂಡ ಈ ದಿನ ಕಾರ್ಯಸಾಧನೆಯಲ್ಲಿ ಪ್ರದರ್ಶಿಸಲು ಸಾಧ್ಯವಾಗದಂತಾಗಲಿದೆ. ಈ ಹಿಂದೆ ಪಾರಂಭವಾಗಿರುವ ಕಾರ್ಯಗಳು ಮನುಷ್ಯ ಪ್ರಯತ್ನದ ಕೊರತೆಯಿಂದಾಗಿ ಸ್ತಬ್ಧವಾದಂತಾಗಲಿದೆ.

ವೃಷಭ: ನಿಮ್ಮಲ್ಲಿನ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ಅವಕಾಶಗಳು ಸಿಕ್ಕಿದರೂ, ಬಳಸಿಕೊಳ್ಳಲು ಅಸಾಧ್ಯವಾಗುವಂತಹ ಪರಿಸ್ಥಿತಿಗೆ ತಲುಪುವಿರಿ. ಆರ್ಥಿಕ ತಾಪತ್ರಯ ಹೇಳಿಕೊಳ್ಳಲಾಗದಂತಾಗಲಿದೆ.

ಮಿಥುನ: ಎಲ್ಲರೊಂದಿಗೆ ಎಲ್ಲಾ ವಿಚಾರದಲ್ಲಿ ಹೊಂದಿಕೊಳ್ಳುವ ನಿಮ್ಮ ಗುಣ ಹಾಗೂ ಸಾಮರ್ಥ್ಯ ಈ ದಿನ ಬಹಳಷ್ಟು ಮುಖ್ಯವೆನಿಸುವುದು. ಬಾಕಿ ಇರುವ ಮನೆ ದೇವರ ಕೆಲಸಗಳನ್ನು ಮಾಡಿ ಮುಗಿಸುವ ನಿರ್ಧಾರ.

ಕರ್ಕಾಟಕ: ಕೆಲಸ ಕಾರ್ಯಗಳನ್ನು ಬೇಗ ಮುಗಿಸಿಕೊಳ್ಳುವ ನಿಮ್ಮ ಪ್ರಯತ್ನ ಫಲಿಸಲಿದೆ. ಆತ್ಮೀಯರಾರು ಎಂಬುದರ ಪರಿಚಯ ನಿಮಗಾಗಲಿದೆ. ಲಾಭದಾಯಕವೆನಿಸುವ ವ್ಯಕ್ತಿಗಳೊಂದಿಗೆ ಮಾತ್ರ ಮಾತನಾಡುವುದು ಸರಿಯಲ್ಲ.

ಸಿಂಹ: ನಿಮ್ಮನ್ನು ನೀವೇ ವಿಮರ್ಶಿಕೊಳ್ಳಿ, ನಿಮ್ಮ ಸರಿ ತಪ್ಪುಗಳು ನಿಮಗೇ ಅರಿವಾಗುವುದು. ದೈವಬಲದ ಕಾರಣ ಕೈಗೊಂಡ ಕೆಲಸ-ಕಾರ್ಯಗಳಲ್ಲಿ ಜಯ ಸಿಗುವುದು, ಹೊಸ ಕಾರ್ಯ ಕೈಗೊಳ್ಳಲು ಧೈರ್ಯ ಮತ್ತು ಸಕಾಲ.

ಕನ್ಯಾ: ಬೋಧನೆಯಲ್ಲಿ ವಿಶೇಷ ಪರಿಣತೆಯನ್ನು ಹೊಂದಿರುವ ನಿಮಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ. ದೇಹದಲ್ಲಿ ಉಷ್ಣಾಂಶ ಅಧಿಕವಾಗುವುದರಿಂದ ಸಣ್ಣಪುಟ್ಟ ಅನಾರೋಗ್ಯ. ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಿರಿ.

ತುಲಾ: ಈ ದಿನ ಮನಸ್ಸಿನಲ್ಲಿ ಹಲವು ದಿನಗಳಿಂದ ಇದ್ದಂತಹ ಹಂಬಲವು ಮಿತ್ರರ ಸಹಾಯದಿಂದ ನೆರವೇರುವುದು. ವ್ಯಾಪಾರ ವ್ಯವಹಾರದಲ್ಲಿ ಮಧ್ಯವರ್ತಿಗಳ ಉಪಟಳಕ್ಕೆ ಗುರಿಯಾಗುವಿರಿ. ನೀಲಿ ಬಣ್ಣವು ಶುಭ ತರಲಿದೆ.

ವೃಶ್ಚಿಕ: ಖರ್ಚು ವೆಚ್ಚಗಳನ್ನು ಸಮತೋಲನದಲ್ಲಿ ಇರಿಸಿಕೊಳ್ಳುವಿರಿ. ವೃತ್ತಿಯನ್ನು ಸವಾಲೆಂಬಂತೆ ಸ್ವೀಕರಿಸುವ ಸನ್ನಿವೇಶಗಳು ಎದುರಾಗುತ್ತದೆ. ದಿನೇ ದಿನೇ ಸಂಸಾರದಲ್ಲಿ ನೆಮ್ಮದಿ ವೃದ್ಧಿಯಾಗಲಿದೆ.

ಧನು: ನಿಮ್ಮ ನಾಜೂಕಿನ ಮಾತು ಅಥವಾ ಹಿತವಚನಗಳು ಸಹೋದ್ಯೋಗಿಯನ್ನು ಧೈರ್ಯದಿಂದ ಇರುವಂತೆ ಮಾಡಲಿದೆ. ನಿಮ್ಮಿಂದ ಸಹಾಯ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವಂತೆ ಆಗುವ ಲಕ್ಷಣಗಳಿವೆ.

ಮಕರ: ಲೆಕ್ಕಪತ್ರಗಳನ್ನು ಸರಿಯಾಗಿ ಪರಿಶೀಲಿಸಿ ಸಹಿ ಮಾಡುವುದು ಒಳಿತು. ಮಗಳ ಮದುವೆಯ ಸಲುವಾಗಿ ಆಭರಣವನ್ನು ಕೊಳ್ಳುವ ಬಗ್ಗೆ ಯೋಚಿಸಿ. ಕಂದಾಯ ಇಲಾಖೆಯ ನೌಕರರಿಗೆ ಹಣದ ಮುಗ್ಗಟ್ಟು ತೀವ್ರವಾಗುವುದು.

ಕುಂಭ: ಕಠಿಣ ಶ್ರಮದ ಜೊತೆಯಲ್ಲಿಯೂ ಸಹ ಎಷ್ಟೇ ಪ್ರಯತ್ನವಿದ್ದರೂ ಮೊದಲನೇ ಬಾರಿ ವಿಘ್ನವೇ ಸಂಭವಿಸಲಿದೆ. ನಂತರ ಗುರಿ ಸಾಧಿಸಬೇಕಿದ್ದಲ್ಲಿ ಅನುಭವಸ್ತರೊಂದಿಗೆ ಹೆಚ್ಚಿನ ಸಂಪರ್ಕ ಬೆಳೆಸಿಕೊಳ್ಳುವುದು ಉತ್ತಮ.


ಮೀನ: ರಾಜಕೀಯ ವ್ಯಕ್ತಿಗಳು ಆತ್ಮವಂಚನೆಯ ಬಗ್ಗೆ ವಿಮರ್ಶಿಸಿಕೊಳ್ಳಿರಿ. ವಿದ್ಯಾರ್ಥಿಗಳ ಮನೋಕಾಮನೆಗಳು ಪೂರ್ಣಗೊಳ್ಳುವುದು. ಬೆಲೆಬಾಳುವ ವಸ್ತು ಕಳೆದುಹೋಗುವ ಸಾಧ್ಯತೆ, ಜಾಗ್ರತರಾಗಿರಿ.

ಪದಬಂಧ 4865

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದಾರಿ ತೋರುವವನು ಇಲ್ಲಿದ್ದಾನೆ (5)
4.ಸಾಮರ್ಥ್ಯ ಅಥವಾ ಕೆಚ್ಚು (3)
5.ಮಾತು ಕೇಳುತ್ತಿರುವ ಸೋದರಮಾವ (3)
6.ಹದ್ದಿನ ಜಾತಿಗೆ ಸೇರಿದ ಪಕ್ಷಿ (3)
8.ಯೌವ್ವನದಲ್ಲಿ ಪ್ರವೇಶಿಸಿದ ಅರಣ್ಯ! (2)
9.ಮಿತಿಗೆ ಒಳಪಟ್ಟದ್ದು (2)
11.ಪಾಕದ ನಂತರ ಕುಡಿದಿರುವ ಶರಬತ್ತು (3)
14.ಓದು ಬರಹ ಬಲ್ಲವನು (3)
15.ಡೌಲನ್ನು ಹೀಗೆ ತೋರಿಸಿ! (3)
16.ವ್ಯಾಯಾಮ ಶಾಲೆಯಿದು (5)

ಮೇಲಿಂದ ಕೆಳಕ್ಕೆ
1.ಚಾಂದ್ರಮಾನ ವರ್ಷದ ಒಂಬತ್ತನೆಯ ತಿಂಗಳು (4)
2.ಸೂರ್ಯನು ದಕ್ಷಿಣ ದಿಕ್ಕಿಗೆ ಚಲಿಸುವ ಕಾಲ (5)
3.ಅರ್ಧ ಚಂದ್ರಾಕೃತಿಯ ರಚನೆಯಿದು (3)
4.ರಾಜನ ಸಭೆ (3)
7.ತವರಲ್ಲಿರುವ ಲೋಹ ಉಲ್ಟಾ ಆಗಿದೆ (3)
8.ವನದೊಳಗೆ ಕೊಟ್ಟ ಮಾತು! (3)
9.ಮಿಡಿ ತೊಟ್ಟಿರುವ ಒಯ್ಯಾರಿ! (5)
10.ಅರಮನೆ ಸಮೀಪವಿರುವ ಜೈಲು (4)
12.ಮಾಂಸ ಮಾರಿ ಜೀವಿಸುವವನು (3)
13.ಊರೊಳಗೆ ಬಂದಿರುವ ಸರ್ಪ (3)



4864ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಚಕ್ರವಾಕ 3.ಮಜಕೂರು 5.ನವೀನ 6.ಕಮಂಡಲು 8.ವಿಷಯ 10.ನೆನಪು 12.ಸಮರಸ 15.ಕಾತರ 16.ತಲೆಮಾರು 17.ದಿಗ್ವಿಜಯ
ಮೇಲಿಂದ ಕೆಳಕ್ಕೆ: 1.ಚರಕ 2.ಕನಲು 3.ಮನವಿ 4.ರುಗ್ಣ 7.ಮಂತ್ರಾಲೋಚನೆ 9.ಯಮಕಿಂಕರ 11.ಪುಕಾರು 12.ಸರದಿ 13.ಸಮಯ 14.ಸುತ

ಸುಡೊಕು 5251

	3		6		2		4	
6		2				8		
			3		9		1	
4		8			5		2	
				1		4		7
2		5	4				6	
	5		8		3		9	
7		3				6		5
	8		7		6		3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5250 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ಕೊರೊನಾ ವೈರಸ್‌ನ ಹೊಸ ತಳಿ ಸಾಧ್ಯತೆ ಹೆಚ್ಚು: ಡಬ್ಲ್ಯುಎಚ್‌ಒ

ಜಿನಿವಾ (ಪಿಟಿಐ): ಕೊರೊನಾ ವೈರಸ್ ರೂಪಾಂತರಗೊಂಡು ಹೊಸ ತಳಿಗಳು ಕಾಣಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಎಚ್ಚರಿಸಿದೆ.

‘ವೈರಸ್‌ನ ಓಮೈಕ್ರಾನ್ ತಳಿಯೇ ಕೊನೆಯ ರೂಪಾಂತರವಲ್ಲ. ಓಮೈಕ್ರಾನ್‌ನ ನಾಲ್ಕು ಬೇರೆ ತಳಿಗಳನ್ನು ಪತ್ತೆ ಹಚ್ಚು ಕಾರ್ಯವನ್ನು ಸಂಸ್ಥೆ ಈಗಾಗಲೇ ಆರಂಭಿಸಿದೆ’ ಎಂದು ಕೋವಿಡ್‌–19ಗೆ ಸಂಬಂಧಿಸಿ ಡಬ್ಲ್ಯುಎಚ್‌ಒದ ತಾಂತ್ರಿಕ ತಂಡದ ಮುಖ್ಯಸ್ಥೆ ಮಾರಿಯಾ ವ್ಯಾನ್ ಕರ್ಖೋವ್ ಹೇಳಿದ್ದಾರೆ.



ಮಾರಿಯಾ ವ್ಯಾನ್

ಡಬ್ಲ್ಯುಎಚ್‌ಒದ ಸಾಮಾಜಿಕ ಜಾಲತಾಣಗಳ ಮೂಲಕ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಈ ಮಾಹಿತಿ ನೀಡಿದರು.

‘ಕೊರೊನಾ ವೈರಸ್ ಬಗ್ಗೆ ವೈದ್ಯಕೀಯ ಕ್ಷೇತ್ರ ಸಾಕಷ್ಟು ಮಾಹಿತಿ ಸಂಗ್ರಹಿಸಿದೆ. ಆದರೆ, ಸಮಗ್ರವಾದ ಮಾಹಿತಿ ಇಲ್ಲ. ಎಷ್ಟು ಬಾರಿ ಬೇಕಾದರೂ ರೂಪಾಂತರಗೊಳ್ಳುವ ಸಾಮರ್ಥ್ಯ–ಗುಣಲಕ್ಷಣವನ್ನು ವೈರಸ್ ಹೊಂದಿರುವ ಕಾರಣ, ಅದರ ರೂಪಾಂತರ ಪ್ರಕ್ರಿಯೆಯ ಕುರಿತು ಅಧ್ಯಯನ ಮಾಡುತ್ತಿದ್ದೇವೆ’ ಎಂದೂ ಅವರು ವಿವರಿಸಿದರು.

‘ಓಮೈಕ್ರಾನ್ ನಂತರದ ರೂಪಾಂತರಗೊಂಡು ಹೊಸ ತಳಿಗಳು ಕಾಣಿಸಿಕೊಳ್ಳುವ ಸಾಧ್ಯತೆಗಳು ಹೇಗೆ ಹೆಚ್ಚಾಗಿವೆಯೋ, ಅವುಗಳ ಸೋಂಕು ಪ್ರಸರಣವಾಗುವ ವೇಗವೂ ಹೆಚ್ಚಾಗಿಯೇ ಇರಲಿದೆ’ ಎಂದು ಅವರು ಹೇಳಿದರು.

‘ಓಮೈಕ್ರಾನ್‌ನ ಬಿಎ.1 ತಳಿಗಿಂತಲೂ ಬಿಎ.2 ತಳಿಯ ಸೋಂಕು ಹೆಚ್ಚು ವೇಗವಾಗಿ ಪ್ರಸರಣ ಸಾಮರ್ಥ್ಯ ಹೊಂದಿದೆ. ಹೀಗಾಗಿ ಜಾಗತಿಕವಾಗಿ ಈಗ ಬಿಎ.2 ತಳಿಯ ಸೋಂಕಿನ ಪ್ರಕರಣಗಳು ಹೆಚ್ಚುತ್ತಿವೆ’ ಎಂದು ವ್ಯಾನ್ ಕರ್ಖೋವ್ ವಿವರಿಸಿದರು.

ಶೇ 97ರಷ್ಟು ರೋಗಿಗಳಲ್ಲಿ ಓಮೈಕ್ರಾನ್ ಸೋಂಕು: ತಮಿಳುನಾಡಿನಲ್ಲಿ ಜನವರಿ 1ರಿಂದ ಫೆಬ್ರುವರಿ 8 ವರೆಗೆ ನಡೆಸಿರುವ ಸಮೀಕ್ಷೆ ಪ್ರಕಾರ, ಕೋವಿಡ್‌–19 ರೋಗಿಗಳ ಪೈಕಿ ಶೇ 97ರಷ್ಟು ಜನರಲ್ಲಿ ರೂಪಾಂತರ ತಳಿ ಓಮೈಕ್ರಾನ್‌ನ ಸೋಂಕು ಇರುವುದು ಕಂಡುಬಂದಿದೆ.

ಆರ್‌ಡಿಎಕ್ಸ್, ಐಇಡಿ ತಯಾರಿಸಲು ಬಳಸುವ ವಸ್ತುಗಳ ವಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್‌ನಲ್ಲಿನ ಅಂತರರಾಷ್ಟ್ರೀಯ ಗಡಿಯಲ್ಲಿ ದೇಶದೊಳಗೆ ನುಗ್ಗಿದ್ದ ಪಾಕಿಸ್ತಾನದ ಡ್ರೋನ್‌ನತ್ತ ಬಿಎಸ್‌ಎಫ್ ಬುಧವಾರ ಗುಂಡು ಹಾರಿಸಿದ್ದು, ಡ್ರೋನ್ ಮೂಲಕ ಬೀಳಿಸಲಾಗಿದ್ದ ಆರ್‌ಡಿಎಕ್ಸ್ ಹಾಗೂ ಐಇಡಿ ತಯಾರಿಕೆಯಲ್ಲಿ ಬಳಸುವ ಪದಾರ್ಥಗಳನ್ನು ವಶಪಡಿಸಿಕೊಂಡಿದೆ.

‘ಪಾಕಿಸ್ತಾನ ಕಡೆಯಿಂದ ಪಂಜಾಬ್‌ನ ಗುರುದಾಸ್‌ಪುರ ಸೆಕ್ಟರ್‌ನ ಪಂಜ್‌ಗ್ರೇನ್‌ನತ್ತ ಡ್ರೋನ್ ರಾತ್ರಿ 1 ಗಂಟೆ ವೇಳೆ ಅನುಮಾನಾಸ್ಪದವಾಗಿ ಹಾರಾಟ ನಡೆಸಿದ ಶಬ್ದ ಕೇಳಿಸಿತು. ಕೂಡಲೇ ಪ್ಯಾರಾಮಿಲಿಟರಿ ಪಡೆಗಳು ಅದರತ್ತ ಗುಂಡು ಹಾರಿಸಿದವು’ ಎಂದು ಬಿಎಸ್‌ಎಫ್‌ನ ವಕ್ತಾರರೊಬ್ಬರು ತಿಳಿಸಿದ್ದಾರೆ.

‘ಫಗ್ಗರ್ ಮತ್ತು ಸಿಂಘೋಕ್ ಗ್ರಾಮಗಳ ಬಳಿಯ ಹೊಲಗಳಲ್ಲಿ ಶೋಧ ಕಾರ್ಯ ಕೈಗೊಂಡು, ಹಳದಿ ಬಣ್ಣದ ಎರಡು ಪೊಟ್ಟಣಗಳನ್ನು ವಶಪಡಿಸಿಕೊಳ್ಳಲಾಯಿತು’ ಎಂದು ತಿಳಿಸಿದರು.

‘ಈ ಪೊಟ್ಟಣಗಳಲ್ಲಿ ಮಾದಕವಸ್ತು ಇರಬಹುದು ಎಂದು ಶಂಕಿಸಲಾಗಿತ್ತು. ತೆರೆದು ನೋಡಿದಾಗ, ಅವುಗಳಲ್ಲಿ 4.7 ಕೆಜಿ ಆರ್‌ಡಿಎಕ್ಸ್, ಚೀನಾ ನಿರ್ಮಿತ ಎರಡು ಪಿಸ್ತೂಲ್‌ಗಳು, ಎರಡು ಮ್ಯಾಗಜಿನ್‌ಗಳು, 22 ಗುಂಡುಗಳು, ಮೂರು ಎಲೆಕ್ಟ್ರಾನಿಕ್ ಡಿಟೊನೇಟರ್‌ಗಳು ಸೇರಿದಂತೆ ಸುಧಾರಿತ ಸ್ಫೋಟಕ ಸಾಧನಗಳ (ಐಇಡಿ) ತಯಾರಿಕೆಯಲ್ಲಿ ಬಳಸುವ ವಸ್ತುಗಳಿದ್ದವು. ಜೊತೆಗೆ ₹ 1 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ’ ಎಂದೂ ತಿಳಿಸಿದ್ದಾರೆ.

ಅಫ್ಗಾನಿಸ್ತಾನದಲ್ಲಿ ಆರೋಗ್ಯ ಬಿಕ್ಕಟ್ಟು

ಕಾಬೂಲ್ (ಎಪಿ): ತಾಲಿಬಾನ್ ಆಡಳಿತದ ಅಫ್ಗಾನಿಸ್ತಾನದಲ್ಲಿ ಆರೋಗ್ಯ ಕ್ಷೇತ್ರ ಬಹಳ ಸಂಕಷ್ಟದಲ್ಲಿದ್ದು, ಓಮೈಕ್ರಾನ್ ಸೋಂಕಿತರನ್ನು ಪರೀಕ್ಷೆ ಮಾಡುವ ವ್ಯವಸ್ಥೆಯೇ ಇಲ್ಲವಾಗಿದೆ. ತೀವ್ರ ಚಳಿ, ನೀಡದ ಸಂಬಳ, ಸೌಲಭ್ಯ ಕೊರತೆಗಳಿಂದಾಗಿ ಇಲ್ಲಿನ 33 ಆಸ್ಪತ್ರೆಗಳು ಬಂದ್ ಆಗಿದ್ದು, ಸದ್ಯ ಕೇವಲ 5 ಆಸ್ಪತ್ರೆಗಳಷ್ಟೇ ಕೋವಿಡ್ ಚಿಕಿತ್ಸೆ ನೀಡುತ್ತಿವೆ.

ಬಜೆಟ್ ಮೇಲಿನ ಚರ್ಚೆ ವೇಳೆ ಕೇಂದ್ರದ ವಿರುದ್ಧ ವಾಗ್ದಾಳಿ

ದೇಶದಲ್ಲಿ ‘ಅಮೃತ ಕಾಲ’ ಬದಲಾಗಿ ‘ರಾಹುಕಾಲ’ ಇದೆ: ಕಪಿಲ್ ಸಿಬಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ‘2014ರಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದೇಶದಲ್ಲಿ ‘ಅಮೃತ ಕಾಲ’ ಇಲ್ಲ; ಬದಲಾಗಿ ‘ರಾಹು ಕಾಲ’ದ ಅನುಭವವಾಗುತ್ತಿದೆ’ ಎಂದು ಕಾಂಗ್ರೆಸ್ ಸಂಸದ ಕಪಿಲ್ ಸಿಬಲ್ ಬುಧವಾರ ಆರೋಪಿಸಿದರು.

ರಾಜ್ಯಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಕೇಂದ್ರ ಮಂಡಿಸಿದ ಬಜೆಟ್‌ನಲ್ಲಿ ದೂರದೃಷ್ಟಿ ಹಾಗೂ ದೀರ್ಘಾವಧಿ ಯೋಜನೆಗಳ ಕೊರತೆ ಕಾಣುತ್ತದೆ’ ಎಂದು ಟೀಕಿಸಿದರು.

‘ಈ ಬಾರಿಯ ಬಜೆಟ್‌ನಲ್ಲಿ ಡಿಜಿಟಲ್, ಹಸಿರು, ಮೇಕ್ ಇನ್ ಇಂಡಿಯಾ, ಬಂಡವಾಳ ವೆಚ್ಚ, ತೆರಿಗೆ ಆದಾಯದಂತಹ ಪದಗಳೇ ಕೇಳಿಬಂದವು. ನಿರುದ್ಯೋಗ, ಬಡತನ, ಆಹಾರ ಭದ್ರತೆ, ಔಪಚಾರಿಕ ವಲಯ, ವಲಸೆ ಕಾರ್ಮಿಕರು, ದಿನಗೂಲಿಗಳು, ಎಲ್ಲರಿಗೂ ಆರೋಗ್ಯ, ಸಾಮಾಜಿಕ ಭದ್ರತೆ, ಮಹಿಳೆ ಹಾಗೂ ಯುವಕರು ಎಂಬಂಥ ಪದಗಳೇ ಈ ಸಲದ ಬಜೆಟ್ ದಾಖಲೆಗಳಲ್ಲಿ ಕಂಡುಬರಲಿಲ್ಲ’ ಎಂದು ಸಿಬಲ್ ವಾಗ್ದಾಳಿ ನಡೆಸಿದರು.

‘ಮೋದಿ ನೇತೃತ್ವದ ಸರ್ಕಾರ ಬಡವರು, ತುಳಿತಕ್ಕೆ ಒಳಗಾದವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಂಡಿಲ್ಲ. ಹೀಗಾಗಿ, 2014ರಿಂದ ನಮಗೆ ರಾಹು ಕಾಲದ ಅನುಭವವಾಗುತ್ತಿದೆ. ಹಾಗಾಗಿ, ನೀವು ಯಾವ ಅಮೃತ ಕಾಲದ ಬಗ್ಗೆ ಮಾತನಾಡುತ್ತಿದ್ದೀರಿ’ ಎಂದು ಅವರು ಪ್ರಶ್ನಿಸಿದರು.

‘ಕಾಂಗ್ರೆಸ್ ಪಕ್ಷ ತುಕ್ಡೆ–ತುಕ್ಡೆ ಗ್ಯಾಂಗ್‌ನ ನಾಯಕ’ ಎಂಬ ಮೋದಿ ಅವರ ಟೀಕೆಯನ್ನು ಪ್ರಸ್ತಾಪಿಸಿದ ಸಿಬಲ್, ‘ನಾಗರಿಕತೆ, ದೇಶದ ಇತಿಹಾಸ, ಸಂವಿಧಾನ ಹಾಗೂ ಭ್ರಾತೃತ್ವಕ್ಕೆ ಯಾರು ಭಂಗ ತರುತ್ತಿದ್ದಾರೋ ಅವರೇ ಈ ಗ್ಯಾಂಗ್‌ನ ನಾಯಕರು’ ಎಂದು ಹರಿಹಾಯ್ದರು.

‘ಈ ಬಜೆಟ್ ಯಾರಿಗಾಗಿ? ಎಲ್ಲ ವಿಮಾನನಿಲ್ದಾಣಗಳು ಹಾಗೂ ಬಂದರುಗಳನ್ನು ಖರೀದಿಸುವ ಶಕ್ತಿ ಹೊಂದಿದ, ಮೇಲ್ಸ್ತರದ ಶೇ 1–2ರಷ್ಟು ಜನರಿಗಾಗಿಯೇ’ ಎಂದರು.

ಹಣಕಾಸು ಸಚಿವರನ್ನು ಉದ್ದೇಶಿಸಿ ಟೀಕೆ ಮುಂದುವರಿಸಿದ ಅವರು, ‘ನೀವು ಆಕಾಶವನ್ನು ನೋಡುತ್ತಿದ್ದೀರಿ. ನೀವು ನೋಡಬೇಕಾಗಿರುವುದು ನೆಲವನ್ನು’ ಎಂದು ವಾಗ್ದಾಳಿ ನಡೆಸಿದರು.

ಸಂಸದರಾದ ಟಿಎಂಸಿಯ ಡೋಲಾ ಸೇನ್, ಸಿಪಿಎಂನ ಎಳಮರಮ್ ಕರೀಂ ಸಹ ಮಾತನಾಡಿ, ಈ ಸಲದ ಬಜೆಟ್ ಜನ ವಿರೋಧಿ ಎಂದು ಟೀಕಿಸಿದರು.

ವಿರೋಧ ಪಕ್ಷಗಳ ದಾಳಿಗೆ ಉತ್ತರಿಸಿದ ಬಿಜೆಪಿಯ ಸಂಸದ ಸುಶೀಲ್‌ಕುಮಾರ್ ಮೋದಿ, ‘ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ ಅವರಂತೆ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹಾರ್ವರ್ಡ್ ಬಿಸಿನೆಸ್ ಸ್ಕೂಲ್ ಬದಲಾಗಿ ಜವಾಹರಲಾಲ್ ನೆಹರೂ ವಿ.ವಿಯಲ್ಲಿ ಪದವಿ ಪಡೆದಿದ್ದಾರೆ’ ಎಂದರು. ‘ಜಗತ್ತಿನ ಆರ್ಥಿಕತೆಯೇ ಸಂಕಷ್ಟದಲ್ಲಿದೆ. ಇಂಥ ಸಂದರ್ಭದಲ್ಲಿ ಚಿದಂಬರಂಅವರುಮಂಡಿಸಬಹುದಾಗಿದ್ದಕ್ಕಿಂತ 100 ಪಟ್ಟು ಉತ್ತಮ ಬಜೆಟ್‌ಅನ್ನು ನಿರ್ಮಲಾ ಮಂಡಿಸಿದ್ದಾರೆ’ ಎಂದು ತಿರುಗೇಟು ನೀಡಿದರು.



ಕಾಂಗ್ರೆಸ್ ಸಂಸದ ಕಪಿಲ್ ಸಿಬಲ್ ರಾಜ್ಯಸಭೆಯಲ್ಲಿ ಬುಧವಾರ ಮಾತನಾಡಿದರು –ಪಿಟಿಐ ಚಿತ್ರ

ಬೆಂಗಳೂರಿನಲ್ಲಿ ವಾಲ್ಮೀಕಿ ಶ್ರೀ ಧರಣಿ ಇಂದಿನಿಂದ



ಹರಿಹರ: ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 7.5ಕ್ಕೆ ಏರಿಸುವುದು ಸೇರಿ ವಾಲ್ಮೀಕಿ ನಾಯಕ ಸಮುದಾಯದವರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಫೆ.10ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಏಕಾಂಗಿಯಾಗಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಆರಂಭಿಸುವುದಾಗಿ ವಾಲ್ಮೀಕಿ ಗುರುಪೀಠದ ಪೀಠಾಧಿಪತಿ ಪ್ರಸನ್ನಾನಂದ ಸ್ವಾಮೀಜಿ ಘೋಷಿಸಿದರು.

ಪ್ರಸನ್ನಾನಂದ ಸ್ವಾಮೀಜಿ

ಬುಧವಾರ ಇಲ್ಲಿ ನಡೆದ ವಾಲ್ಮೀಕಿ ಸಮುದಾಯದ ರಾಜ್ಯ ಮಟ್ಟದ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

‘ಪರಿಶಿಷ್ಟ ಪಂಗಡದಲ್ಲಿ ಹೊಸ ಜಾತಿಗಳನ್ನು ಸೇರ್ಪಡೆಗೊಳಿಸಲಾಗುತ್ತಿದೆ. ಈಗಿನ ಶೇ 3ರ ಮೀಸಲಾತಿ 1956ರ ಜನಗಣತಿ ಆಧರಿಸಿದ್ದು. ನಾವೀಗ ಕೇಳುತ್ತಿರುವ ಮೀಸಲು ಪ್ರಮಾಣ 2001ರ ಜನಗಣತಿಯ ಆಧಾರದ್ದು. ಈಗಿನ ಜನಗಣತಿಯ ಪ್ರಕಾರ ಎಸ್‌ಟಿ ಮೀಸಲು ಪ್ರಮಾಣ ಶೇ 8.5 ಅಥವಾ ಶೇ 9ರಷ್ಟು ನಿಗದಿ ಮಾಡಬೇಕಾಗುತ್ತದೆ’ ಎಂದು ಪ್ರತಿಪಾದಿಸಿದರು.

‘ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೇವಲ ಭರವಸೆ ನೀಡುತ್ತಿದ್ದಾರೆ. ಹೀಗಾಗಿ ಮತ್ತೆ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ’ ಎಂದು ತಿಳಿಸಿದರು.



ಫೆ. 16ರಂದು ಭಕ್ತರಿಗೆ ಮುಕ್ತ

ವಾರಾಣಸಿಯ ಲಲಿತಾ ಘಾಟ್‌ನಲ್ಲಿ ‘ಕಾಶಿ ವಿಶ್ವನಾಥ ಕಾರಿಡಾರ್ ಗೇಟ್‌ವೇ’ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವ ಹಂತದಲ್ಲಿದ್ದು ಫೆ.16ರಿಂದ ಈ ಗೇಟ್‌ವೇ ಭಕ್ತರಿಗೆ ಮುಕ್ತವಾಗಲಿದೆ –ಪಿಟಿಐ ಚಿತ್ರ

ಲಾಸ್ ಏಂಜಲೀಸ್ ಚಿತ್ರೋತ್ಸವಕ್ಕೆ ‘ತಾಯಿ ಕಸ್ತೂರ್ ಗಾಂಧಿ’ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸ್ತೂರ್ ಬಾ ಗಾಂಧಿಯವರ ಜೀವನದ ಮುಖ್ಯ ಘಟನೆಗಳನ್ನು ಆಧರಿಸಿ ಪ್ರೊ.ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿರುವ ‘ತಾಯಿ ಕಸ್ತೂರ್ ಗಾಂಧಿ’ ಚಿತ್ರವು ಲಾಸ್ ಏಂಜಲಿಸ್ ಸನ್ ಅಂತರರಾಷ್ಟ್ರೀಯ ಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೆ ಆಯ್ಕೆಯಾಗಿದೆ.

ಬರಗೂರು ಅವರೇ ‘ಸುಧಾ’ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರೆದ ‘ಕಸ್ತೂರ್ ಬಾ Vs ಗಾಂಧಿ’ ಕಾದಂಬರಿಯನ್ನು ಆಧರಿಸಿದ ಈ ಚಿತ್ರವು ಇತ್ತೀಚೆಗೆ ಸೆನ್ಸಾರ್ ಆಗಿದೆ. ‘ಗಾಂಧೀಜಿ ಕುರಿತು ಸಿನಿಮಾಗಳು ಬಂದಿದ್ದರೂ ಭಾರತದಲ್ಲಿ ಕಸ್ತೂರ್ ಬಾ ಅವರನ್ನೇ ಮುಖ್ಯಪಾತ್ರವನ್ನಾಗಿಸಿಕೊಂಡ ಸಿನಿಮಾಗಳು ಇಲ್ಲ. ಕನ್ನಡದಲ್ಲಿ ಇಂಥದೊಂದು ಪ್ರಯತ್ನ ಆಗಿದೆ. ಕಸ್ತೂರ್ ಬಾ ಅವರ ಬದುಕಿನ ಕೆಲವು ಪ್ರಮುಖ ಘಟನೆಗಳ ಮೂಲಕ ಆದರ್ಶ ಮತ್ತು ಕಟು ವಾಸ್ತವಗಳ ದ್ವಂದ್ವವನ್ನು ಕಟ್ಟಿಕೊಡಲಾಗಿದೆ. ದ್ವಂದ್ವವನ್ನು ಎದುರಿಸುತ್ತಲೇ ಅದನ್ನು ಮೀರುವ ವ್ಯಕ್ತಿತ್ವಗಳಾಗಿ ಕಸ್ತೂರ್ ಬಾ ಮತ್ತು ಗಾಂಧೀಜಿಯವರನ್ನು ಚಿತ್ರಿಸಲಾಗಿದೆ. ಮುಖ್ಯವಾಗಿ ಕಸ್ತೂರ್ ಬಾ ಅವರು ತಾಯಿ ಮತ್ತು ಪತ್ನಿ ಎರಡೂ ನೆಲೆಗಳಲ್ಲಿ ಬದುಕನ್ನು ನಿಭಾಯಿಸಿದ ಚರಿತೆಯು ಈ ಚಿತ್ರದ ಕೇಂದ್ರವಾಗಿದೆ’ ಎನ್ನುತ್ತಾರೆ ಬರಗೂರು ರಾಮಚಂದ್ರಪ್ಪ.



ಹರಿಪ್ರಿಯಾ



ಬರಗೂರು ರಾಮಚಂದ್ರಪ್ಪ

ಕಸ್ತೂರ್ ಬಾ ಮತ್ತು ಗಾಂಧೀಜಿಯವರ ಯೌವನ ಮತ್ತು ಮುಪ್ಪಿನ ಘಟನೆಗಳನ್ನು ಈ ಚಿತ್ರವು ಹೊಂದಿದೆ. ಕಸ್ತೂರ್ ಬಾ ಪಾತ್ರದಲ್ಲಿ ನಟಿ ಹರಿಪ್ರಿಯಾ ಹಾಗೂ ಗಾಂಧಿ ಪಾತ್ರದಲ್ಲಿ ಬಹುಭಾಷಾ ನಟ ಕಿಶೋರ್ ಅಭಿನಯಿಸಿದ್ದಾರೆ. ಖ್ಯಾತ ನಟರಾದ ಶ್ರೀನಾಥ್, ಸುಂದರರಾಜ್, ನಟಿ ಪ್ರಮೀಳಾ ಜೋಷಾಯ್ ಅವರಲ್ಲದೆ ರೇಖಾ, ಸುಂದರರಾಜ ಅರಸು, ವೆಂಕಟರಾಜು, ರಾಘವ್, ವತ್ಸಲಾ ಮೋಹನ್ ಮುಂತಾದವರು ತಾರಾಗಣದಲ್ಲಿದ್ದಾರೆ. ಮಾಸ್ಟರ್ ಆಕಾಂಕ್ಷ್ ಬರಗೂರು ಬಾಲಕ ಗಾಂಧಿಯಾಗಿ, ಕುಮಾರಿ ಸ್ಪಂದನ ಬಾಲಕಿ ಕಸ್ತೂರ್ ಬಾ ಆಗಿ ನಟಿಸಿದ್ದಾರೆ.

ಬರಗೂರು ಅವರೇ ಚಿತ್ರಕಥೆ, ಸಂಭಾಷಣೆ, ಗೀತರಚನೆ ಜೊತೆಗೆ ನಿರ್ದೇಶನ ಮಾಡಿದ್ದಾರೆ. ಚಿತ್ರಕ್ಕೆ ಸುರೇಶ್ ಅರಸು ಅವರ ಸಂಕಲನ, ನಾಗರಾಜ್ ಆದವಾನಿ ಅವರ ಛಾಯಾಗ್ರಹಣ, ಶಮಿತಾ ಮಲ್ನಾಡ್ ಸಂಗೀತ, ಮೈತ್ರಿ ಬರಗೂರು ಅವರ ಕಲಾ ನಿರ್ದೇಶನ ಇದೆ.

ಕೋವಿಡೇತರ ಚಿಕಿತ್ಸೆಗೂ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಮತ್ತು ಕೋವಿಡೇತರ ಚಿಕಿತ್ಸೆಗಳಿಗೆ ಅವಕಾಶ ಕಲ್ಪಿಸುವಂತೆ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಪ್ರಸ್ತುತ ಕೋವಿಡ್‌–19 ಪ್ರಕರಣಗಳ ಸಂಖ್ಯೆಯನ್ನು ಪರಾಮರ್ಶಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಕೋವಿಡ್ ರೋಗಿಗಳಿಗೆ ಪ್ರತ್ಯೇಕ ಹಾಸಿಗೆಗಳನ್ನು ಮೀಸಲಿಡಬೇಕು. ಜತೆಗೆ, ಈ ಆಸ್ಪತ್ರೆಗಳಲ್ಲಿ ಯಾವುದೇ ಕಾರಣಕ್ಕೂ ಕೋವಿಡೇತರ ಚಿಕಿತ್ಸೆ ನೀಡುವುದನ್ನು ನಿರಾಕರಿಸದಂತೆ ಸಂಬಂಧಪಟ್ಟ ಅಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು ಎಂದು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಅವರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಸೋಂಕು ನಿಯಂತ್ರಣ ಕ್ರಮಗಳನ್ನು ಸಹ ಕಟ್ಟುನಿಟ್ಟಾಗಿ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ.

ಗೆದ್ದ ಕಿರೀಟ ಕಳೆದುಕೊಂಡಳು!

ಕೊಲಂಬೊ (ಎಎಫ್‌ಪಿ): ಕಳೆದ ತಿಂಗಳು ಲಾಸ್ ವೇಗಾಸ್‌ನಲ್ಲಿ ನಡೆದ ಮಿಸೆಸ್ ವರ್ಲ್ಡ್ ಸೌಂದರ್ಯ ಸ್ಪರ್ಧೆಯಲ್ಲಿ ಭ್ರಷ್ಟಾಚಾರ ಕಾರಣಕ್ಕೆ ತಮಗೆ ಕಿರೀಟ ತಪ್ಪಿಹೋಯಿತು ಎಂದು ಶ್ರೀಲಂಕಾದ ಸ್ಪರ್ಧಿ ಪುಷ್ಪಿಕಾ ಡಿ ಸಿಲ್ವ ಮಾಡಿದ ಆರೋಪ ಅವರು ಈ ಹಿಂದೆ ಗೆದ್ದ ಮಿಸೆಸ್ ಶ್ರೀಲಂಕಾ ಪ್ರಶಸ್ತಿಯನ್ನೂ ಕಳೆದುಕೊಳ್ಳುವಂತೆ ಮಾಡಿದೆ.

ಡಿಸಿಲ್ವ ಅವರ ಹೇಳಿಕೆ ಜಾಗತಿಕವಾಗಿ ಶ್ರೀಲಂಕಾದ ಘನತೆಗೆ ಧಕ್ಕೆ ತಂದಿದೆ. ಹೀಗಾಗಿ ಅವರಿಂದ ಮಿಸೆಸ್ ಶ್ರೀಲಂಕಾ ಪಟ್ಟವನ್ನು ವಾಪಸ್ ಪಡೆದಿದ್ದು, ಅವರು ಯಾವುದೇ ಚಟುವಟಿಕೆಗಳಲ್ಲಿ ಬಳಸದಂತೆ ನಿರ್ಬಂಧಿಸಿದೆ ಎಂದು ಶ್ರೀಲಂಕಾದ ಸ್ಥಳೀಯ ಸಂಘಟಕರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷ ಕೊಲಂಬೊಲ್ಲಿ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಪುಷ್ಪಿಕಾ ಡಿ ಸಿಲ್ವ ಅವರು ‘ಮಿಸೆಸ್ ಶ್ರೀಲಂಕಾ’ ಆಗಿ ಗೆಲುವು ಸಾಧಿಸಿದ್ದರು. ಅದೇ ವೇದಿಕೆಯಲ್ಲಿ ಹಾಜರಿದ್ದ ಈ ಹಿಂದಿನ ವಿಜೇತೆ ಕ್ಯಾರೋಲಿನ್ ಜೂರಿ ಆಕೆ ಅನ್ಯಾಯವಾಗಿ ಗೆದ್ದಿದ್ದಾಳೆ ಎಂದು ಡಿ ಸಿಲ್ವ ಅವರುಮೂಡಿಗೇರಿಸಿಕೊಂಡಿದ್ದವೇದಿಕೆಯಲ್ಲೇ ಕಿರೀಟವನ್ನು ಕಳಚಿದ್ದರು.

14ರಿಂದ ಅಣ್ಣಾ ಹಜಾರೆ ನಿರಶನ

ಪುಣೆ: ಸೂಪರ್ ಮಾರ್ಕೆಟ್ ಮತ್ತು ದಿನಸಿ ಅಂಗಡಿಗಳಲ್ಲಿ ಮದ್ಯ ಮಾರಾಟಕ್ಕೆ ಅವಕಾಶ ನೀಡುವ ಮಹಾರಾಷ್ಟ್ರ ಸರ್ಕಾರದ ನೀತಿಯನ್ನು ವಿರೋಧಿಸಿ ಇದೇ ತಿಂಗಳ 14 ರಿಂದ ಅನಿರ್ದಿಷ್ಟ ಅವಧಿಯ ತನಕ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಅವರು ಬುಧವಾರ ಹೇಳಿದ್ದಾರೆ.

‘ಈ ಸಂಬಂಧ ಹಜಾರೆ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆಗೆ ಮತ್ತೊಂದು ಪತ್ರ ಬರೆದಿದ್ದಾರೆ.

‘ಹಿಜಾಬ್ ವಿಚಾರಕ್ಕೆ ಕಾಲೇಜು ಪ್ರವೇಶ ನಿರ್ಬಂಧ; ಭಯಾನಕ’

ಲಂಡನ್: ಕರ್ನಾಟಕದಲ್ಲಿನ ಹಿಜಾಬ್ ಸಂಘರ್ಷದ ಬಗ್ಗೆ ಪಾಕಿಸ್ತಾನದ ಹೆಣ್ಣು ಮಕ್ಕಳ ಶಿಕ್ಷಣದ ಹಕ್ಕಿನ ಹೋರಾಟಗಾರ್ತಿ ಮಲಾಲ ಯೂಸುಫ್‌ಝೈ ಟ್ವೀಟ್ ಮೂಲಕ ಪ್ರತಿಕ್ರಿಯಿಸಿದ್ದು, ಹೆಣ್ಣುಮಕ್ಕಳನ್ನು ಹಿಜಾಬ್ ಧರಿಸಿ ಶಾಲೆಗೆ ಹೋಗಲು ನಿರಾಕರಿಸುವುದು ಭಯಾನಕ ಸಂಗತಿಯಾಗಿದೆ ಎಂದಿದ್ದಾರೆ.



ಮಲಾಲ

ಕಾಲೇಜು ನಮ್ಮನ್ನು ವಿದ್ಯಾಭ್ಯಾಸ ಮತ್ತು ಹಿಜಾಬ್ ನಡುವೆ ಆಯ್ಕೆ ಮಾಡಿಕೊಳ್ಳಲು ಒತ್ತಾಯಿಸುತ್ತಿದೆ ಎಂಬ ವಿದ್ಯಾರ್ಥಿನಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿರುವ ಅವರು, ‘ಮಹಿಳೆಯರಿಗೆ ನಿರ್ಬಂಧಗಳು ಮುಂದುವರಿಯುತ್ತಿವೆ. ಹೆಚ್ಚು ಅಥವಾ ಕಡಿಮೆ ಬಟ್ಟೆ ಧರಿಸುವ ವಿಚಾರವಾಗಿ ಮುಸ್ಲಿಂ ಮಹಿಳೆಯರನ್ನು ಕಡೆಗಣಿಸುವುದನ್ನು ನಾಯಕರು ನಿಲ್ಲಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ರೋಹಿತ್ ಶರ್ಮಾ ಬಳಗಕ್ಕೆ 44 ರನ್‌ಗಳ ಗೆಲುವು; ಸೂರ್ಯಕುಮಾರ್ ಅರ್ಧಶತಕದ ಸೊಬಗು

ಪ್ರಸಿದ್ಧ ಆಟ; ವಿಂಡೀಸ್ ದೂಳೀಪಟ

ಅಹಮದಾಬಾದ್: ಬೆಂಗಳೂರು ಹುಡುಗ ಪ್ರಸಿದ್ಧ ಕೃಷ್ಣ ಶಿಸ್ತಿನ ಬೌಲಿಂಗ್ ದಾಳಿಯ ಮುಂದೆ ವೆಸ್ಟ್ ಇಂಡೀಸ್ ತಂಡದ ಬ್ಯಾಟಿಂಗ್ ಪಡೆ ದೂಳೀಪಟವಾಯಿತು.

ಮೊಟೆರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ವಿಂಡೀಸ್ ಎದುರಿನ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 44 ರನ್‌ಗಳಿಂದ ಜಯಿಸಿದ ಭಾರತ ತಂಡವು ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಟಾಸ್ ಗೆದ್ದ ಪ್ರವಾಸಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್ ಕ್ರಮಾಂಕದಲ್ಲಿ ಕೆಲವು ನೂತನ ಪ್ರಯೋಗಗಳನ್ನು ಮಾಡಿದ ಆತಿಥೇಯರು ಆರಂಭದಲ್ಲಿ ಪೆಟ್ಟು ತಿಂದರು. ಆದರೆ, ಕೆ.ಎಲ್. ರಾಹುಲ್ (49; 48ಎ) ಮತ್ತು ಸೂರ್ಯಕುಮಾರ್ ಯಾದವ್ (64; 83ಎ) ಅವರ ಜವಾಬ್ದಾರಿಯುತ ಬ್ಯಾಟಿಂಗ್‌ನಿಂದಾಗಿ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 237 ರನ್ ಗಳಿಸಿತು.

ಅದಕ್ಕುತ್ತರವಾಗಿ 46 ಓವರ್‌ಗಳಲ್ಲಿ 193 ರನ್ ಗಳಿಸಲಷ್ಟೇ ವಿಂಡೀಸ್‌ಗೆ ಸಾಧ್ಯವಾಯಿತು. ಒಂಬತ್ತು ಓವರ್ ಬೌಲಿಂಗ್ ಮಾಡಿದ ಬಲಗೈ ಮಧ್ಯಮವೇಗಿ ಪ್ರಸಿದ್ಧ ನೀಡಿದ್ದು ಕೇವಲ 12 ರನ್‌ಗಳನ್ನು ಮಾತ್ರ. ಮೂರು ಓವರ್‌ಗಳನ್ನು ಮೇಡನ್ ಮಾಡಿದ ಅವರು ನಾಲ್ಕು ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಇದು ಅವರ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಪ್ರಸಿದ್ಧ ಕೃಷ್ಣ ಅವರ ಶ್ರೇಷ್ಠ ಸಾಧನೆಯಾಗಿದೆ.

ವೆಸ್ಟ್ ಇಂಡೀಸ್ ತಂಡದ ಆರಂಭಿಕ ಜೋಡಿ ಶಾಯ್ ಹೋಪ್ ಮತ್ತು ಬ್ರೆಂಡನ್ ಕಿಂಗ್ ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡಿದರು. ರನ್ ಗಳಿಕೆಗೆ ಹೆಚ್ಚು ಅವಸರ ಮಾಡಲಿಲ್ಲ. ಏಳು ಓವರ್‌ಗಳು ಮುಗಿಯುವವರೆಗೂ ಭಾರತಕ್ಕೆ ವಿಕೆಟ್ ಒಲಿದಿರಲಿಲ್ಲ. ಸಿರಾಜ್ ಮತ್ತು ಶಾರ್ದೂಲ್ ಅವರ ಪ್ರಯತ್ನ ಫಲ ನೀಡಲಿಲ್ಲ.


ಸೂರ್ಯಕುಮಾರ್ ಯಾದವ್ ಮತ್ತು ಕೆ.ಎಲ್. ರಾಹುಲ್ –ಪಿಟಿಐ ಚಿತ್ರ

ಎಂಟನೇ ಓವರ್‌ನಲ್ಲಿ ಪ್ರಸಿದ್ಧ ಕೃಷ್ಣ ಎಸೆತವನ್ನು ಆಡುವ ಭರದಲ್ಲಿ ಕಿಂಗ್ ಆಘಾತ ಅನುಭವಿಸಿದರು. ಅವರ ಬ್ಯಾಟ್ ಅಂಚು ಸವರಿದ ಚೆಂಡು ವಿಕೆಟ್‌ಕೀಪರ್ ಪಂತ್ ಕೈಸೇರಿತು. 10ನೇ ಓವರ್‌ನಲ್ಲಿ ಪ್ರಸಿದ್ಧ ಇದೇ ಮಾದರಿಯಲ್ಲಿ ಡರೆನ್ ಬ್ರಾವೊ ವಿಕೆಟ್ ಕೂಡ ಗಳಿಸಿದರು. ತುಸು ಪ್ರತಿರೋಧ ಒಡ್ಡಿದ ಶಾಯ್ ಹೋಪ್ ಮತ್ತು ಶಾಮ್ರಾ ಬ್ರೂಕ್ಸ್ (44) ಜೊತೆಯಾಟವನ್ನು ಚಾಹಲ್ ಮುರಿದರು. 17ನೇ ಓವರ್‌ನಲ್ಲಿ ಹೋಪ್ ವಿಕೆಟ್ ಪಡೆದ ಸ್ಪಿನ್ನರ್ ಚಾಹಲ್ ಮಿಂಚಿದರು.

ಬ್ರೂಕ್ಸ್ ಉತ್ತಮವಾಗಿ ಬ್ಯಾಟ್ ಬೀಸುತ್ತಿದ್ದರು. ಅವರಿಗೆ ಜೊತೆ ನೀಡಲು ಸಿದ್ಧರಾಗಿದ್ದ ನಿಕೋಲಸ್ ಪೂರನ್ (9) ವಿಕೆಟ್ ಕಬಳಿಸಿದ ಪ್ರಸಿದ್ಧ ದೊಡ್ಡ ಪೆಟ್ಟು ಕೊಟ್ಟರು. ಠಾಕೂರ್, ಸಿರಾಜ್ ಮತ್ತು ವಾಷಿಂಗ್ಟನ್ ಕೂಡ ಉತ್ತಮ ಬೌಲಿಂಗ್ ಮಾಡಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಬ್ಯಾಟಿಂಗ್ ಕ್ರಮಾಂಕ ಪ್ರಯೋಗ: ಭಾರತ ತಂಡದ ಆರಂಭಿಕ ರೋಹಿತ್ ಶರ್ಮಾ ಅವರೊಂದಿಗೆ ಈ ಪಂದ್ಯದಲ್ಲಿ ವಿಕೆಟ್‌ಕೀಪರ್ ರಿಷಭ್ ಪಂತ್ ಇನಿಂಗ್ಸ್ ಆರಂಭಿಸಿದರು. ಆದರೆ ದೊಡ್ಡ ಇನಿಂಗ್ಸ್ ಕಟ್ಟಲು ಸಾಧ್ಯವಾಗಲಿಲ್ಲ. ಮೂರನೇ ಓವರ್‌ನಲ್ಲಿಯೇ ರೋಹಿತ್ ಔಟಾದರು. ಪಂತ್ ಮತ್ತು ವಿರಾಟ್ ತಲಾ 18 ರನ್ ಗಳಿಸಿ ಔಟಾದರು.

ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಉಪನಾಯಕ ಕೆ.ಎಲ್. ರಾಹುಲ್ ಮತ್ತು ಸೂರ್ಯಕುಮಾರ್ ಯಾದವ್ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 91 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ದೊಡ್ಡ ಮೊತ್ತ ಗಳಿಸುವ ಭರವಸೆ ಮೂಡಿತು.

ಆದರೆ, 30ನೇ ಓವರ್‌ನಲ್ಲಿ ಇಬ್ಬರೂ ಬ್ಯಾಟರ್‌ಗಳ ಹೊಂದಾಣಿಕೆಯ ಕೊರತೆಯಲ್ಲಿ ರಾಹುಲ್ ರನ್‌ಔಟ್ ಆದರು. ಜೊತೆಯಾಟ ಮುರಿದುಬಿತ್ತು. ವಾಷಿಂಗ್ಟನ್ ಸುಂದರ್ ಮತ್ತು ದೀಪಕ್ ಹೂಡಾ ಅಲ್ಪ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು ಇನ್ನೂರರ ಗಡಿ ದಾಟಲು ಸಾಧ್ಯವಾಯಿತು.

ಸ್ಕೋರ್ ಕಾರ್ಡ್

ಭಾರತ 9ಕ್ಕೆ 237 (50 ಓವರ್‌ಗಳಲ್ಲಿ)
ರೋಹಿತ್ ಸಿ ಹೋಪ್ ಬಿ ರೋಚ್ 5 (8ಎ), ಪಂತ್ ಸಿ ಹೋಲ್ಡರ್ ಬಿ ಸ್ಮಿತ್ 18 (34ಎ, 4X3), ಕೊಹ್ಲಿ ಸಿ ಹೋಪ್ ಬಿ ಸ್ಮಿತ್ 18 (30ಎ, 4X3), ರಾಹುಲ್ ರನ್‌ಔಟ್ (ಹುಸೇನ್/ಹೋಪ್) 49 (48ಎ, 4X4, 6X2), ಸೂರ್ಯಕುಮಾರ್ ಸಿ ಜೋಸೆಫ್ ಬಿ ಅಲೆನ್ 64 (83ಎ, 4X5), ವಾಷಿಂಗ್ಟನ್ ಸಿ ಜೋಸೆಫ್ ಬಿ ಹುಸೇನ್ 24 (41ಎ, 4X1), ಹೂಡಾ ಸಿ ಹುಸೇನ್ ಬಿ ಹೋಲ್ಡರ್ 29 (25ಎ, 4X2), ಶಾರ್ದೂಲ್ ಸಿ ಹುಸೇನ್ ಬಿ ಹೋಲ್ಡರ್ 8 (15ಎ, 4X1), ಸಿರಾಜ್ ಸಿ ಹೋಪ್ ಬಿ ಜೋಸೆಫ್ 3 (5ಎ), ಚಾಹಲ್ ಔಟಾಗದೆ 11 (10ಎ, 4X1), ಪ್ರಸಿದ್ಧ ಔಟಾಗದೆ 0 (3ಎ)
ಇತರೆ: (ಬೈ 2, ಲೆಗ್‌ಬೈ 2, ವೈಡ್ 2, ನೋಬಾಲ್ 2) 8
ವಿಕೆಟ್ ಪತನ: 1–9 (ರೋಹಿತ್ ಶರ್ಮಾ; 2.6), 2–39 (ರಿಷಭ್ ಪಂತ್; 11.1), 3–43 (ವಿರಾಟ್ ಕೊಹ್ಲಿ; 11.6), 4–134 (ರಾಹುಲ್; 29.4), 5–177 (ಸೂರ್ಯಕುಮಾರ್ ಯಾದವ್; 38.5), 6–192 (ವಾಷಿಂಗ್ಟನ್ ಸುಂದರ್; 41.6), 7–212 (ಶಾರ್ದೂಲ್ ಠಾಕೂರ್; 45.6), 8–224 (ಸಿರಾಜ್ 47.3), 9–226 (ದೀಪಕ್ ಹೂಡಾ; 48.1)
ಬೌಲಿಂಗ್: ಕೆಮರ್ ರೋಚ್ 8–0–42–1, ಅಲ್ಜರಿ ಜೋಸೆಫ್ 10–0–36–2, ಒಡಿಯನ್ ಸ್ಮಿತ್ 7–0–29–2, ಜೇಸನ್ ಹೋಲ್ಡರ್ 9–2–37–1, ಅಕೀಲ್ ಹುಸೇನ್ 6–0–39–1, ಫ್ಯಾಬಿಯನ್ ಅಲೆನ್ 10–0–50–1

ವೆಸ್ಟ್ ಇಂಡೀಸ್ 193 (46 ಓವರ್)
ಹೋಪ್ ಸಿ ಸೂರ್ಯಕುಮಾರ್ ಬಿ ಚಾಹಲ್ 27 (54ಎ, 4X3), ಕಿಂಗ್ ಸಿ ಪಂತ್ ಬಿ ಪ್ರಸಿದ್ಧ 18 (20ಎ, 4X2, 6X1), ಬ್ರಾವೊ ಸಿ ಪಂತ್ ಬಿ ಪ್ರಸಿದ್ಧ 1 (3ಎ), ಬ್ರೂಕ್ಸ್ ಸಿ ಸೂರ್ಯಕುಮಾರ್ ಬಿ ಹೂಡಾ 44 (64ಎ, 4X2, 6X2), ಪೂರನ್ ಸಿ ರೋಹಿತ್ ಬಿ ಪ್ರಸಿದ್ಧ 9 (13ಎ), ಹೋಲ್ಡರ್ ಸಿ ಹೂಡಾ ಬಿ ಠಾಕೂರ್ 2 (10ಎ), ಹುಸೇನ್ ಸಿ ಪಂತ್ ಬಿ ಠಾಕೂರ್ 34 (52ಎ, 4X3), ಅಲೆನ್ ಸಿ ಪಂತ್ ಬಿ ಸಿರಾಜ್ 13 (22ಎ), ಸ್ಮಿತ್ ಸಿ ಕೊಹ್ಲಿ ಬಿ ವಾಷಿಂಗ್ಟನ್ 24 (20ಎ, 4X1, 6X2), ಜೋಸೆಫ್ ಔಟಾಗದೆ 7 (15ಎ), ರೋಚ್ ಎಲ್‌ಬಿಡಬ್ಲ್ಯು ಪ್ರಸಿದ್ಧ 0 (6ಎ)
ಇತರೆ: (ಲೆಗ್‌ಬೈ 5, ವೈಡ್ 6, ನೋಬಾಲ್ 3) 14
ವಿಕೆಟ್ ಪತನ: 1–32 (ಬ್ರೆಂಡನ್ ಕಿಂಗ್; 7.3), 2–38 (ಡರೆನ್ ಬ್ರಾವೊ; 9.1), 3–52 (ಶಾಯ್ ಹೋಪ್; 16.2), 4–66 (ನಿಕೋಲಸ್ ಪೂರನ್; 19.4), 5–76 (ಜೇಸನ್ ಹೋಲ್ಡರ್; 21.6), 6–117 (ಶಾಮ್ರಾ ಬ್ರೂಕ್ಸ್; 30.5), 7–159 (ಫ್ಯಾಬಿಯನ್ ಅಲೆನ್; 38.5), 8–159 (ಅಕೀಲ್ ಹುಸೇನ್; 39.2), 9–193 (ಒಡಿಯನ್ ಸ್ಮಿತ್; 44.6), 10–193 (ಕೆಮರ್ ರೋಚ್; 45.6)
ಬೌಲಿಂಗ್: ಮೊಹಮ್ಮದ್ ಸಿರಾಜ್ 9–1–38–1, ಶಾರ್ದೂಲ್ ಠಾಕೂರ್ 9–1–41–2, ಪ್ರಸಿದ್ಧ ಕೃಷ್ಣ 9–3–12–4, ಯಜುವೇಂದ್ರ ಚಾಹಲ್ 10–0–45–1, ವಾಷಿಂಗ್ಟನ್ ಸುಂದರ್ 5–0–28–1, ದೀಪಕ್ ಹೂಡಾ 4–0–24–1

ಫಲಿತಾಂಶ: ಭಾರತ ತಂಡಕ್ಕೆ 44 ರನ್‌ಗಳ ಜಯ; 2–0 ಮುನ್ನಡೆ


19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದ ಭಾರತ ತಂಡದ ಆಟಗಾರರನ್ನು ಅಹಮದಾಬಾದ್‌ನಲ್ಲಿ ನಡೆದ ಭಾರತ–ವೆಸ್ಟ್ ಇಂಡೀಸ್ ಪಂದ್ಯದ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಆಟಗಾರರ ಜೊತೆ ಕುಳಿತು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಮತ್ತು ಎನ್‌ಸಿಎ ಮುಖ್ಯಸ್ಥ ವಿ.ವಿ.ಎಸ್‌.ಲಕ್ಷ್ಮಣ್ ಪಂದ್ಯ ವೀಕ್ಷಿಸಿದರು –ಪಿಟಿಐ ಚಿತ್ರ

ಟೆಸ್ಟ್ ಸರಣಿಗೆ ಪಾಕಿಸ್ತಾನ ತಂಡ

ಕರಾಚಿ: ಬಾಬರ್ ಅಜಂ ಅವರು ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಸರಣಿಯಲ್ಲಿ ಪಾಕಿಸ್ತಾನ ತಂಡವನ್ನು ಮುನ್ನಡೆಸಲಿದ್ದಾರೆ. ಎರಡು ದಶಕಗಳ ನಂತರ ಆಸ್ಟ್ರೇಲಿಯಾ ತಂಡ ಪಾಕಿಸ್ತಾನ ಪ್ರವಾಸ ಕೈಗೊಳ್ಳಲಿದ್ದು ಟೆಸ್ಟ್ ಸರಣಿ 16 ಮಂದಿಯ ತಂಡವನ್ನು ಪಾಕ್ ಕ್ರಿಕೆಟ್ ಮಂಡಳಿ ಬುಧವಾರ ಪ್ರಕಟಿಸಿದೆ.


ಬಾಬರ್ ಅಜಂ –ಎಎಫ್‌ಪಿ ಚಿತ್ರ

ಮೂರು ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಪಂದ್ಯ ಮಾರ್ಚ್ ನಾಲ್ಕರಂದು ರಾವಲ್ಪಿಂಡಿಯಲ್ಲಿ ನಡೆಯಲಿದ್ದು ಕರಾಚಿ ಮತ್ತು ಲಾಹೋರ್‌ನಲ್ಲಿ ಉಳಿದೆರಡು ಪಂದ್ಯಗಳು ನಡೆಯಲಿವೆ. ಆಸ್ಟ್ರೇಲಿಯಾ ಕೊನೆಯದಾಗಿ 1998ರಲ್ಲಿ ಪಾಕಿಸ್ತಾನ ಪ್ರವಾಸ ಕೈಗೊಂಡಿತ್ತು.

ಲೆಗ್ ಸ್ಪಿನ್ನರ್ ಯಾಸಿರ್ ಶಾ ಅವರನ್ನು ಕಾಯ್ದಿರಿಸಿದ ಆಟಗಾರರ ಪಟ್ಟಿಯಲ್ಲಿ ಸೇರಿಸಿ ಆಯ್ಕೆ ಸಮಿತಿ ಅಚ್ಚರಿ ಮೂಡಿಸಿದೆ. ಶಾ ಇತ್ತೀಚೆಗೆ ಪಾಕಿಸ್ತಾನ ತಂಡದ ಪ್ರಮುಖ ಸ್ಪಿನ್ನರ್ ಆಗಿ ಕಾರ್ಯನಿರ್ವಹಿಸಿದ್ದರು. ಈ ವರೆಗೆ 46 ಟೆಸ್ಟ್ ಪಂದ್ಯಗಳನ್ನು ಆಡಿರುವ ಅವರು 235 ವಿಕೆಟ್ ಗಳಿಸಿದ್ದಾರೆ.

ತಂಡ: ಬಾಬರ್ ಅಜಂ (ನಾಯಕ), ಮೊಹಮ್ಮದ್ ರಿಜ್ವಾನ್ (ಉಪ ನಾಯಕ), ಅಬ್ದುಲ್ಲ ಶಫೀಕ್, ಅಜರ್ ಅಲಿ, ಫಾಹೀಮ್ ಅಶ್ರಫ್, ಫವಾದ್ ಆಲಂ, ಹ್ಯಾರಿಸ್ ರವೂಫ್, ಹಸನ್ ಅಲಿ, ಇಮಾಮ್ ಹುಲ್ ಹಕ್, ಮೊಹಮ್ಮದ್ ನವಾಜ್, ನೌಮನ್ ಅಲಿ, ಸಾಜಿದ್ ಖಾನ್, ಸೌದ್ ಶಕೀಲ್, ಶಾಹೀನ್ ಶಾ ಅಫ್ರಿದಿ, ಶಾನ್ ಮಸೂದ್, ಜಹೀದ್ ಮಹಮೂದ್. ಕಾಯ್ದಿರಿಸಿದ ಆಟಗಾರರು: ಕಮ್ರಾನ್ ಘುಲಾಮ್, ಮೊಹಮ್ಮದ್ ಅಬ್ಬಾಸ್, ನಸೀಮ್ ಶಾ, ಸರ್ಫರಾಜ್ ಅಹಮ್ಮದ್, ಯಾಸಿರ್ ಶಾ.

ಐಸಿಸಿ ಏಕದಿನ ಕ್ರಿಕೆಟ್ ರ‍್ಯಾಂಕಿಂಗ್

ಸ್ಥಾನ ಉಳಿಸಿಕೊಂಡ ರೋಹಿತ್, ಕೊಹ್ಲಿ

ದುಬೈ (ಪಿಟಿಐ): ಭಾರತದ ಸೀಮಿತ ಓವರ್‌ಗಳ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಐಸಿಸಿ ಏಕದಿನ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ ಮೂರು ಮತ್ತು ಎರಡನೇ ಸ್ಥಾನ ಉಳಿಸಿಕೊಂಡಿದ್ದಾರೆ.

ವೆಸ್ಟ್ ಇಂಡೀಸ್ ಎದುರಿನ ಸರಣಿಯ ಮೊದಲ ಏಕದಿನ ಪಂದ್ಯದಲ್ಲಿ ರೋಹಿತ್ ಅರ್ಧಶತಕ ಗಳಿಸಿದ್ದರು. ಅದರಿಂದಾಗಿ ಅವರು 50 ಅಂಕಗಳನ್ನು ಗಳಿಸಿದರು. ಅವರ ಖಾತೆಯಲ್ಲಿ ಈಗ 807 ಪಾಯಿಂಟ್‌ಗಳಿವೆ. ಕೊಹ್ಲಿ 828 ಅಂಕಗಳನ್ನು ಹೊಂದಿದ್ದಾರೆ.

ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಮೊದಲ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಅವರ ಸಹ ಆಟಗಾರ ಫಕ್ರ್ ಜಮಾನ್ ಮತ್ತು ಇಂಗ್ಲೆಂಡ್ ಬ್ಯಾಟರ್ ಜೋ ರೂಟ್ ಅಗ್ರ 10ರಲ್ಲಿ ಸ್ಥಾನ ಗಳಿಸಿದ್ದಾರೆ.

ಬೌಲಿಂಗ್‌ನಲ್ಲಿ ಭಾರತದ ಜಸ್‌ಪ್ರೀತ್ ಬೂಮ್ರಾ ಏಳನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಆಲ್‌ರೌಂಡರ್ ಪಟ್ಟಿಯಲ್ಲಿ ರವೀಂದ್ರ ಜಡೇಜ ಎಂಟನೇ ಮತ್ತು ವೆಸ್ಟ್ ಇಂಡೀಸ್ ತಂಡದ ಜೇಸನ್ ಹೋಲ್ಡರ್ ನಾಲ್ಕು ಸ್ಥಾನಗಳ ಬಡ್ತಿ ಪಡೆದಿದ್ದಾರೆ. ಒಮನ್ ತಂಡದ ಜತಿಂದರ್ ಸಿಂಗ್ ಈಚೆಗೆ ಯುಎಇ ವಿರುದ್ಧದ ಪಂದ್ಯದಲ್ಲಿ ಅಮೋಘ ಬ್ಯಾಟಿಂಗ್ ಮಾಡಿದ್ದರು. ಅದರಿಂದಾಗಿ 26 ಸ್ಥಾನಗಳ ಬಡ್ತಿ ಪಡೆದು ಅಗ್ರ 100ರೊಳಗೆ ಪ್ರವೇಶಿಸಿದ್ದಾರೆ.


ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ

4 ವರ್ಷಗಳ ನಂತರ ಕಣಕ್ಕೆ ದೀಪಿಕಾ

ನವದೆಹಲಿ (ಪಿಟಿಐ): ಸ್ಕ್ವಾಷ್ ತಾರೆ ದೀಪಿಕಾ ಪಳ್ಳಿಕಲ್ ನಾಲ್ಕು ವರ್ಷಗಳ ನಂತರ ಮತ್ತೆ ಕಣಕ್ಕಿಳಿಯಲಿದ್ದಾರೆ.


ದೀಪಿಕಾ

ಕೌಟುಂಬಿಕ ಕಾರಣಕ್ಕಾಗಿ ಅವರು ವಿಶ್ರಾಂತಿ ಪಡೆದಿದ್ದರು. ಕ್ರಿಕೆಟಿಗ ದಿನೇಶ್ ಕಾರ್ತಿಕ್ ಅವರ ಪತ್ನಿ ದೀಪಿಕಾ ಹೋದ ವರ್ಷ ಅವಳಿ ಮಕ್ಕಳಿಗೆ ಜನ್ಮ ನೀಡಿದ್ದರು.

31 ವರ್ಷದ ದೀಪಿಕಾ ಈ ವರ್ಷ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವತ್ತ ಚಿತ್ತ ನೆಟ್ಟಿದ್ದಾರೆ.

ನಾಲ್ಕು ವರ್ಷ ಕ್ರೀಡೆಯಿಂದ ದೂರವುಳಿದಿದ್ದ ಸಂದರ್ಭದಲ್ಲಿ ದೀಪಿಕಾ ಅವರು ತಮ್ಮದೇ ಒಳಾಂಗಣ ವಿನ್ಯಾಸ ಸಂಸ್ಥೆಯನ್ನು ಆರಂಭಿಸಿ ಯಶಸ್ವಿಯಾಗಿದ್ದಾರೆ. ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯುವ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಅವರು ಡಬಲ್ಸ್ ವಿಭಾಗದಲ್ಲಿ ಸ್ಪರ್ಧಿಸುವರು. ನಂತರ ಹಂತ ಹಂತವಾಗಿ ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳಲಿದ್ದಾರೆ. ಏಷ್ಯನ್ ಕೂಟದ ಹೊತ್ತಿಗೆ ಸಿಂಗಲ್ಸ್‌ನಲ್ಲಿ ಆಡಲು ಸಿದ್ಧವಾಗುವ ನಿರೀಕ್ಷೆ ಇದೆ.

ಬೆಂಗಳೂರು ರೇಸ್

ಬಾಲ್ಟಿಮೋರ್ ಗೆಲ್ಲುವ ನಿರೀಕ್ಷೆ

ಶಿವಮೊಗ್ಗ ಪ್ಲೇಟ್ ಗುರುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಬಾಲ್ಟಿಮೋರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಪೀಕಿಂಗ್ ಆಫ್ ಸ್ಪೈಸ್ 3, ಸರ್ ಜೆರ್ಸಿ 4, ಅಲ್ಟಿಮೇಟ್ ಸ್ಟ್ರೈಕರ್ 1
2ನೇ ರೇಸ್: ಕಟಾನ 1, ಆಲ್ ಅಬೌಟ್ ಹರ್ 3, ಸೀಸರ್ಸ್ ಪ್ಯಾಲೆಸ್ 2
3ನೇ ರೇಸ್: ರೆಡ್ ಲೂಸಿಫರ್ 1, ಚಿಸಾಕ್ಸ್ 8, ಅರೇಕಾ ಏಂಜೆಲ್ 6
4ನೇ ರೇಸ್: ಟಾಪ್ ಡ್ಯಾನ್ಸರ್ 9, ಲಿಮಿಟೆಡ್ ಎಡಿಷನ್ 3, ಮೇಘಾ ಸಕ್ಸಸ್ 1
5ನೇ ರೇಸ್: ಬಾಲ್ಟಿಮೋರ್ 6, ಆಚೆನ್ 1, ಸಿಲ್ವರ್ ಡ್ಯೂ 2
6ನೇ ರೇಸ್: ಪೇಯೋಲ 4, ಓನ್ ಲೆಗಸಿ 5, ಮಿಸ್ಟಿಕ್ ಐ 2
7ನೇ ರೇಸ್: ಡೊಮಿನ 9, ಡೆವಿಲ್ಸ್ ಮ್ಯಾಜಿಕ್ 6, ಗೋಲ್ಡ್ ಗ್ರೇ 11

ಉತ್ತಮ ಬೆಟ್: ಕಟಾನ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸ್ಲೊವಾಕಿಯಾಗೆ ಸಂಭ್ರಮ ತಂದ ಪೆಟ್ರಾ

ಬೀಜಿಂಗ್ (ಎಪಿ): ಮಹಿಳೆಯರ ಸ್ಲಾಲೊಮ್ ಕ್ರೀಡೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಅಮೋಘ ಸಾಧನೆ ಮಾಡುತ್ತಿರುವ ಪೆಟ್ರಾ ಹೋವ ಒಲಿಂಪಿಕ್ಸ್‌ನಲ್ಲೂ ಚಿನ್ನದ ಸಾಧನೆ ಮಾಡಿದರು.


ಇಲ್ಲಿ ನಡೆಯುತ್ತಿರುವ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಬುಧವಾರ ಅಮೋಘ ಸಾಧನೆ ಮಾಡಿದ ಅವರು ಸ್ಲೊವಾಕಿಯಾಗೆ ಅಲ್ಪೈನ್ ಸ್ಕೀಯಿಂಗ್‌ನಲ್ಲಿ ಒಲಿಂಪಿಕ್ಸ್‌ನ ಮೊದಲ ಚಿನ್ನ ಗೆದ್ದುಕೊಟ್ಟರು.

ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಮಿಕೇಲಾ ಶಿಫ್ರಿನ್ ನಿರಾಶೆಗೊಳಗಾದರು. ವಿಶ್ವಕಪ್ ಸ್ಲಾಲೊಮ್ ಬುಧವಾರದ ಸ್ಪರ್ಧೆಯ ಆರಂಭದಲ್ಲಿ ನೀರಸ ಪ್ರದರ್ಶನ ನೀಡಿದರೂ ನಂತರ ಚೇತರಿಸಿಕೊಂಡು ಲೇನಾ ಡೂರ್ ಅವರನ್ನು ಹಿಂದಿಕ್ಕಿ ಪ್ರಶಸ್ತಿಯತ್ತ ಸಾಗಿದರು.


ಪೆಟ್ರಾ ಹೋವ ಸಂಭ್ರಮ – ರಾಯಿಟರ್ಸ್ ಚಿತ್ರ

ಮೊದಲ ಡೋಪಿಂಗ್ ಪ್ರಕರಣ: ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿರುವ ಇರಾನ್‌ನ ಏಕೈಕ ಪುರುಷ ಅಥ್ಲೀಟ್ ಹೊಸೇನ್ ಶವೆಯ್ ಶಮ್‌ಶಾಕಿ ಅವರು ಡೋಪಿಂಗ್ ಪ್ರಕರಣದಲ್ಲಿ ಸಿಲುಕಿದ್ದಾರೆ. ಅಲ್ಪೈನ್ ಸ್ಕೀಯಿಂಗ್‌ನಲ್ಲಿ ಸ್ಪರ್ಧಿಸಲು ಬಂದಿದ್ದ ಅವರು ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾಗಿದೆ ಎಂದು ಅಂತರರಾಷ್ಟ್ರೀಯ ಡೋಪ್ ಟೆಸ್ಟಿಂಗ್ ಏಜನ್ಸಿ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,266
ಇಂದಿನ ಅಂತ್ಯ	17,463
▲	197
ದಿನದ ಗರಿಷ್ಠ	17,477

ವಿನಿಮಯ ದರ

$ ಡಾಲರ್	74.84
£ ಪೌಂಡ್	101.52
€ ಯುರೊ	85.48
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1320 (1320)
ಸೋಯಾ (ರಿಫೈನ್ಡ್)	₹1285 (1290)
ಸೂರ್ಯಕಾಂತಿ (ರಿಫೈನ್ಡ್)	₹1310 (1305)
ಪಾಮೋಲಿನ್	₹1232 (1230)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ತುಮಕೂರು	₹11200-12400
ಮಂಗಳೂರು	---
ತುರುವೇಕೆರೆ	₹18000-18000

ಆರ್ಥಿಕ ದುಃಸ್ಥಿತಿಗೆ ಪ್ರಧಾನಿ ಕಾರಣ ಎಂದು ಆತ್ಮಹತ್ಯೆಗೆ ಯತ್ನಿಸಿದ ವ್ಯಾಪಾರಿ

ಬಾಗ್ಪತ್ (ಉತ್ತರ ಪ್ರದೇಶ): 'ತನ್ನ ಆರ್ಥಿಕ ದುಃಸ್ಥಿತಿಗೆ ಪ್ರಧಾನಿ ನರೇಂದ್ರ ಮೋದಿ ಅವರೇ ಜವಾಬ್ದಾರಿ' ಎಂದು ಆರೋಪಿಸಿ ವ್ಯಾಪಾರಿಯೊಬ್ಬ ಮಂಗಳವಾರ ಫೇಸ್‌ಬುಕ್ ಲೈವ್‌ನಲ್ಲಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಉತ್ತರಪ್ರದೇಶದ ಸುಭಾಷ್ ನಗರದಲ್ಲಿ ನಡೆದಿದೆ.

ಘಟನೆಯಲ್ಲಿ ಪತಿಯೊಂದಿಗೆ ವಿಷ ಸೇವಿಸಿದ ಪತ್ನಿ ಮೃತಪಟ್ಟಿದ್ದಾರೆ.

ಸುಭಾಷ್‌ನಗರದ ನಿವಾಸಿ ರಾಜೀವ್ ಥೋಮರ್ ಆತ್ಮಹತ್ಯೆಗೆ ಯತ್ನಿಸಿದ್ದ ವ್ಯಾಪಾರಿ. ಚಪ್ಪಲಿ ಅಂಗಡಿಯೊಂದರ ಮಾಲೀಕರಾಗಿರುವ ಅವರು ಮಂಗಳವಾರ ಫೇಸ್‌ಬುಕ್ ಲೈವ್‌ನಲ್ಲಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು. ಪತಿ ವಿಷ ಸೇವಿಸುತ್ತಿದ್ದನ್ನು ನೋಡಿದ ಪತ್ನಿ ಪೂನಂ ಕೂಡ ವಿಷ ಸೇವಿಸಿದ್ದಾರೆ. ಇಬ್ಬರನ್ನೂ ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಪತ್ನಿ ಬದುಕುಳಿಯಲಿಲ್ಲ. ವ್ಯಾಪಾರಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೀರಜ್ ಕುಮಾರ್ ಜದೌನ್ ತಿಳಿಸಿದ್ದಾರೆ.

'ನನ್ನ ಸಾವಿಗೆ ಮೋದಿ ಅವರೇ ಜವಾಬ್ದಾರಿ. ಮೋದಿ ಅವರಿಗೆ ಸ್ವಲ್ಪವಾದರೂ ನಾಚಿಕೆಯಿದ್ದರೆ ಅವರು ಪರಿಸ್ಥಿತಿಯನ್ನು ಬದಲಾಯಿಸಲಿ. ಮೋದಿ ಅವರ ಎಲ್ಲಾ ಕಾರ್ಯಗಳು ತಪ್ಪು ಎಂದು ನಾನು ಹೇಳುತ್ತಿಲ್ಲ. ಆದರೆ, ಅವರು ಸಣ್ಣ ವ್ಯಾಪಾರಿ ಹಾಗೂ ರೈತರ ಹಿತೈಷಿ ಅಲ್ಲ' ಎಂದು ಫೇಸ್‌ಬುಕ್ ಲೈವ್ ವೇಳೆ ರಾಜೀವ್ ದೂರಿದ್ದರು.

'2020ರ ಲಾಕ್‌ಡೌನ್ ವೇಳೆ ರಾಜೀವ್ ಅವರಿಗೆ ವ್ಯಾಪಾರದಲ್ಲಿ ಭಾರಿ ನಷ್ಟ ಉಂಟಾಗಿ, ಮಾಡಿದ್ದ ಸಾಲವನ್ನು ತೀರಿಸಲು ಆಗಿರಲಿಲ್ಲ. ಅವರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ' ಎಂದು ರಾಜೀವ್ ಸಂಬಂಧಿಕರು ಮಾಹಿತಿ ನೀಡಿದರು.

2ನೇ ದಿನವೂ ಮುಂದುವರಿದ ಗೂಳಿ ಓಟ

ಮುಂಬೈ (ಪಿಟಿಐ): ಜಾಗತಿಕ ಷೇರುಪೇಟೆಗಳ ವಹಿವಾಟು ಚೇತರಿಕೆ ಕಂಡಿದ್ದರಿಂದ ದೇಶದ ಷೇರುಪೇಟೆಗಳು ಸತತ ಎರಡನೇ ದಿನವೂ ಗಳಿಕೆ ಕಂಡವು.

ಆದರೆ, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಬುಧವಾರ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಹೂಡಿಕೆದಾರರು ಮಾರಾಟಕ್ಕೆ ಗಮನ ನೀಡಿದ್ದರಿಂದ ಸೂಚ್ಯಂಕಗಳು ಹೆಚ್ಚಿನ ಗಳಿಕೆ ಕಂಡುಕೊಳ್ಳಲಿಲ್ಲ ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 657 ಅಂಶ ಹೆಚ್ಚಾಗಿ 58,465 ಅಂಶಗಳಿಗೆ ತಲುಪಿತು.



ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 197 ಅಂಶ ಹೆಚ್ಚಾಗಿ 17,463 ಅಂಶಗಳಿಗೆ ತಲುಪಿತು.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳನ್ನು ಹೊರತುಪಡಿಸಿ ಉಳಿದ ಎಲ್ಲ ವಲಯಗಳ ಷೇರುಗಳು ಗಳಿಕೆ ಕಂಡುಕೊಂಡಿವೆ. ಆರ್‌ಬಿಐನ ಹಣಕಾಸು ನೀತಿಯು ಗುರುವಾರ ಹೊರಬೀಳಲಿದ್ದು ಷೇರುಪೇಟೆಗೆ ಮಹತ್ವದ್ದಾಗಿದೆ. ದೇಶದಲ್ಲಿ ಹಣದುಬ್ಬರ ಹೆಚ್ಚಳ ಮತ್ತು ಜಾಗತಿಕ ಮಟ್ಟದಲ್ಲಿ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಏರಿಕೆ ಮಾಡಲು ಮುಂದಾಗಿರುವುದು ಆರ್‌ಬಿಐಗೂ ಸಹ ಬಡ್ಡಿದರದಲ್ಲಿ ಬದಲಾವಣೆ ಮಾಡುವ ಸಂದರ್ಭ ಸೃಷ್ಟಿಸಬಹುದು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 10 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 74.84ರಂತೆ ವಿನಿಮಯಗೊಂಡಿತು.

ಐಟಿಆರ್ ಪರಿಷ್ಕರಣೆ: ಒಂದು ಬಾರಿ ಮಾತ್ರ ಅವಕಾಶ

ನವದೆಹಲಿ (ಪಿಟಿಐ): ತೆರಿಗೆ ಪಾವತಿಸುವವರು ಪ್ರತಿ ಅಂದಾಜು ವರ್ಷಕ್ಕೆ ಸಂಬಂಧಿಸಿದಂತೆ ಒಂದು ಬಾರಿ ಮಾತ್ರ ಪರಿಷ್ಕೃತ ವಿವರ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ ಎಂದು ನೇರ ತೆರಿಗೆಗಳ ಕೇಂದ್ರ ಮಂಡಳಿಯ ಅಧ್ಯಕ್ಷ ಜೆ.ಬಿ. ಮೊಹಾಪಾತ್ರ ಬುಧವಾರ ತಿಳಿಸಿದ್ದಾರೆ.

ಆದಾಯ ತೆರಿಗೆ ವಿವರವನ್ನು ತೆರಿಗೆ ಪಾವತಿದಾರರು, ತಾವು ವಿವರ ಸಲ್ಲಿಸಿದ ಎರಡು ವರ್ಷಗಳ ಒಳಗೆ ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗುತ್ತದೆ ಎಂದು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಕಾಂಗ್ರೆಸ್‌ನಿಂದಾಗಿ ಅವಸಾನದತ್ತ ಸಾಗಿದ್ದ ಬಿಎಸ್‌ಎನ್‌ಎಲ್: ನಿರ್ಮಲಾ

ನವದೆಹಲಿ (ಪಿಟಿಐ): 'ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಕಂಪನಿಯನ್ನು ಬಹುತೇಕ ಅವಸಾನದತ್ತ ದೂಡಿತ್ತು. ನರೇಂದ್ರ ಮೋದಿ ನೇತೃತ್ವದ ಸರ್ಕಾರವು 4ಜಿ ತರಂಗಾಂತರ ಖರೀದಿಸಲು ಮತ್ತು ಸ್ಪರ್ಧಾತ್ಮಕವಾಗಲು ಕಂಪನಿಗೆ ಹಣ ನೀಡುತ್ತಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಕೇಂದ್ರ ಸರ್ಕಾರವು ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಮತ್ತು ಎಂಟಿಎನ್‌ಎಲ್ ಅನ್ನು ನಾಶಪಡಿಸುತ್ತಿದ್ದು, ಖಾಸಗಿ ವಲಯದ ವೊಡಾಫೋನ್ ಐಡಿಯಾ ಕಂಪನಿಗೆ ನೆರವು ನೀಡುತ್ತಿದೆ ಎಂದು ಶಿವಸೇನಾ ಸದಸ್ಯ ಅರವಿಂದ್ ಸಾವಂತ್ ಅವರು ಲೋಕಸಭೆಯಲ್ಲಿ ಸರ್ಕಾರದ ವಿರುದ್ಧ ಆರೋಪ ಮಾಡಿದ್ದರು. ಈ ಕುರಿತು ನಿರ್ಮಲಾ ಅವರು ಪ್ರತಿಕ್ರಿಯೆ ನೀಡಿದ್ದಾರೆ.

'ಬಿಎಸ್‌ಎನ್‌ಎಲ್ ನಮ್ಮ ಅಮೂಲ್ಯ ಆಸ್ತಿ. 4ಜಿ ತರಂಗಾಂತರ ಖರೀದಿಸಲು ಮತ್ತು ಸ್ಪರ್ಧಾತ್ಮಕವಾಗಲು ನಾವು ಕಂಪನಿಗೆ ಹಣ ನೀಡುತ್ತಿದ್ದೇವೆ' ಎಂದು ಬಜೆಟ್ ಮೇಲಿನ ಚರ್ಚೆಯ ಸಂದರ್ಭದಲ್ಲಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರಗಳಿಗೆ ಕೇಂದ್ರದ ಸೂಚನೆ

ಅಡುಗೆ ಎಣ್ಣೆ ದಾಸ್ತಾನು ಮಿತಿ: ಅನುಷ್ಠಾನಕ್ಕೆ ತನ್ನಿ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ಹಾಗೂ ಎಣ್ಣೆಬೀಜಗಳ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶದಿಂದ, ರಾಜ್ಯ ಸರ್ಕಾರಗಳು ಇವುಗಳ ದಾಸ್ತಾನು ಮಿತಿಗೆ ಸಂಬಂಧಿಸಿದಂತೆ ತಾನು ಹೊರಡಿಸಿರುವ ಆದೇಶವನ್ನು ಅನುಷ್ಠಾನಕ್ಕೆ ತರಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ಹೀಗೆ ಮಾಡುವಾಗ ಪೂರೈಕೆ ವ್ಯವಸ್ಥೆಯಲ್ಲಿ ಸಮಸ್ಯೆ ಸೃಷ್ಟಿಯಾಗದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರವು ಹೇಳಿದೆ. ಫೆಬ್ರುವರಿ 3ರಂದು ಆದೇಶವೊಂದನ್ನು ಹೊರಡಿಸಿದ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು, ಅಡುಗೆ ಎಣ್ಣೆ ಹಾಗೂ ಎಣ್ಣೆಬೀಜಗಳ ದಾಸ್ತಾನು ಮಿತಿಯನ್ನು ಜೂನ್ 30ರವರೆಗೆ ವಿಸ್ತರಿಸಿದೆ. ದಾಸ್ತಾನು ಇರಿಸಿಕೊಳ್ಳಬಹುದಾದ ಪ್ರಮಾಣ ಎಷ್ಟು ಎಂಬುದನ್ನೂ ಹೇಳಿದೆ.

ದಾಸ್ತಾನು ಮಿತಿಯ ಅನುಷ್ಠಾನದಿಂದಾಗಿ ನ್ಯಾಯಸಮ್ಮತವಲ್ಲದ ವಾಣಿಜ್ಯ ಚಟುವಟಿಕೆಗಳಿಗೆ ಮಿತಿ ಬೀಳುತ್ತದೆ ಎಂದು ಪ್ರಕಟಣೆ ಹೇಳಿದೆ.

ಅಡುಗೆ ಎಣ್ಣೆಯ ರಿಟೇಲ್ ಮಾರಾಟಗಾರರು 30 ಕ್ವಿಂಟಲ್ ದಾಸ್ತಾನು ಇರಿಸಿಕೊಳ್ಳಬಹುದು, ಸಗಟು ಮಾರಾಟಗಾರರು 500 ಕ್ವಿಂಟಲ್ ದಾಸ್ತಾನು ಇರಿಸಿಕೊಳ್ಳಬಹುದು. ಎಣ್ಣೆಬೀಜಗಳನ್ನು ರಿಟೇಲ್ ಮಾರಾಟಗಾರರು 100 ಕ್ವಿಂಟಲ್‌ವರೆಗೆ, ಸಗಟು ಮಾರಾಟಗಾರರು 2,000 ಕ್ವಿಂಟಲ್‌ವರೆಗೆ ದಾಸ್ತಾನು ಇರಿಸಿಕೊಳ್ಳಬಹುದು.



ರಫ್ತು ಮತ್ತು ಆಮದು ವಹಿವಾಟಿನಲ್ಲಿ ತೊಡಗಿರುವವರನ್ನು ಕೆಲವು ಷರತ್ತುಗಳಿಗೆ ಒಳಪಡಿಸಿ ಈ ಆದೇಶದ ವ್ಯಾಪ್ತಿಯಿಂದ ಹೊರಗೆ ಇರಿಸಲಾಗಿದೆ.

ಆದೇಶದಲ್ಲಿ ಹೇಳಿರುವ ಮಿತಿಗಿಂತ ಹೆಚ್ಚಿನ ದಾಸ್ತಾನು ಇದ್ದಲ್ಲಿ ವರ್ತಕರು ಅದನ್ನು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಪೋರ್ಟಲ್ ಮೂಲಕ ತಿಳಿಸಬೇಕು. ಮೂವತ್ತು ದಿನಗಳಲ್ಲಿ ದಾಸ್ತಾನನ್ನು ತಮಗೆ ನಿಗದಿ ಮಾಡಲಾಗಿರುವ ಮಿತಿಯೊಳಗೆ ತರಬೇಕು.

ಭಾರತವು ದೇಶಿ ಮಾರುಕಟ್ಟೆಯ ಅಗತ್ಯದ ಶೇ 60ರಷ್ಟು ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಕಳೆದ ಕೆಲವು ತಿಂಗಳುಗಳಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ಬೆಲೆ ಹೆಚ್ಚಳ ಆಗುತ್ತಿರುವ ಕಾರಣ, ದೇಶಿ ರಿಟೇಲ್ ಬೆಲೆಯಲ್ಲಿ ಕೂಡ ಏರಿಕೆ ಆಗಿದೆ.

ಮುಖ್ಯಾಂಶಗಳು


- ಪೂರೈಕೆ ವ್ಯವಸ್ಥೆಯಲ್ಲಿ ಸಮಸ್ಯೆ ಆಗದಂತೆ ಎಚ್ಚರಿಕೆ ಅಗತ್ಯ
- ದಾಸ್ತಾನು ಮಿತಿ ಜೂನ್ 30ರವರೆಗೆ ವಿಸ್ತರಣೆ
- ದೇಶಿ ಮಾರುಕಟ್ಟೆ ಬೇಡಿಕೆಯ ಶೇ 60ರಷ್ಟು ಆಮದು

ಫೆ.10–15: ಸಚಿವ ಜೈಶಂಕರ್ ಆಸ್ಟ್ರೇಲಿಯಾ, ಫಿಲಿಪ್ಪೀನ್ಸ್‌ಗೆ ಭೇಟಿ

ನವದೆಹಲಿ (ಪಿಟಿಐ): ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಆರು ದಿನಗಳ ಕಾಲ ಆಸ್ಟ್ರೇಲಿಯಾ ಮತ್ತು ಫಿಲಿಪ್ಪೀನ್ಸ್ ಭೇಟಿ ನೀಡಲಿದ್ದು ಗುರುವಾರದಿಂದ ಅಧಿಕೃತ ಪ್ರವಾಸ ಆರಂಭಿಸಲಿದ್ದಾರೆ.

ಫೆಬ್ರುವರಿ 10 ರಿಂದ 13ರವರೆಗೆ ಸಚಿವರು ಆಸ್ಟ್ರೇಲಿಯಾಕ್ಕೆ ಭೇಟಿ ನೀಡಲಿದ್ದಾರೆ. ವಿದೇಶಾಂಗ ಸಚಿವರಾದ ನಂತರ ಇದು ಅವರ ಮೊದಲ ಭೇಟಿಯಾಗಿದೆ.

ಫೆಬ್ರುವರಿ 13 ರಿಂದ 15 ರವರೆಗೆ ಫಿಲಿಪ್ಪೀನ್ಸ್ ಪ್ರವಾಸ ಕೈಗೊಳ್ಳಲಿದ್ದಾರೆ. ಬ್ರಹ್ಮೋಸ್ ಕ್ರೂಸ್ ಕ್ಷಿಪಣಿಯ ಮೂರು ಬ್ಯಾಟರಿಗಳನ್ನು ಖರೀದಿಸಲು ಫಿಲಿಪ್ಪೀನ್ಸ್ ನೊಂದಿಗೆ 375 ದಶಲಕ್ಷ ಡಾಲರ್ ಒಪ್ಪಂದಕ್ಕೆ (ಒಂದು ಮಿಲಿಯನ್ ಎಂದರೆ 10 ಲಕ್ಷ) ಸಹಿ ಮಾಡಿದ ಎರಡು ವಾರಗಳ ನಂತರ ಈ ಭೇಟಿ ಕೈಗೊಳ್ಳುತ್ತಿದ್ದಾರೆ.


ಎಸ್. ಜೈಶಂಕರ್

ಫೆಬ್ರುವರಿ 11 ರಂದು ಮೆಲ್ಬರ್ನ್‌ನಲ್ಲಿ ನಡೆಯಲಿರುವ ನಾಲ್ಕನೇ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಜೈಶಂಕರ್ ಅವರು ಆಸ್ಟ್ರೇಲಿಯಾ, ಜಪಾನ್ ಮತ್ತು ಅಮೆರಿಕದ ವಿದೇಶಾಂಗ ಸಚಿವರೊಂದಿಗೆ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಹೇಳಿದೆ.

ಈಕ್ವಿಟಿ ಎಂಎಫ್: ಜನವರಿಯಲ್ಲಿ ₹ 14,888 ಕೋಟಿ ಒಳಹರಿವು

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಜನವರಿಯಲ್ಲಿ ₹ 14,888 ಕೋಟಿ ಬಂಡವಾಳ ಆಕರ್ಷಿಸಿವೆ. ಈ ಮೂಲಕ ಸತತ 11ನೇ ತಿಂಗಳಿನಲ್ಲಿಯೂ ಬಂಡವಾಳ ಒಳಹರಿವು ಆದಂತಾಗಿದೆ.

ಆದರೆ, 2021ರ ಡಿಸೆಂಬರ್‌ನಲ್ಲಿ ಬಂದಿದ್ದ ₹ 25,077 ಕೋಟಿ ಬಂಡವಾಳಕ್ಕೆ ಹೋಲಿಸಿದರೆ ಜನವರಿಯಲ್ಲಿ ಆಗಿರುವ ಹೂಡಿಕೆಯು ಕಡಿಮೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಬುಧವಾರ ತಿಳಿಸಿದೆ.

2021ರ ಮಾರ್ಚ್‌ನಿಂದಲೂ ಈಕ್ವಿಟಿ ಯೋಜನೆಗಳಲ್ಲಿ ಬಂಡವಾಳ ಒಳಹರಿವು ಕಂಡುಬರುತ್ತಿದ್ದು, ₹ 1 ಲಕ್ಷ ಕೋಟಿಗೂ ಅಧಿಕ ಮೊತ್ತ ಹೂಡಿಕೆ ಆಗಿದೆ. ಇದಕ್ಕೂ ಮೊದಲು 2020ರ ಜುಲೈನಿಂದ 2021ರ ಫೆಬ್ರುವರಿ ಅವಧಿಯಲ್ಲಿ ₹ 46,791 ಕೋಟಿ ಬಂಡವಾಳ ಹೊರಹೋಗಿತ್ತು.

ಮ್ಯೂಚುವಲ್ ಫಂಡ್ ಉದ್ಯಮದಲ್ಲಿ ಜನವರಿಯಲ್ಲಿ ₹ 35,252 ಕೋಟಿ ಹೂಡಿಕೆ ಆಗಿದೆ. ಡಿಸೆಂಬರ್‌ನಲ್ಲಿ ₹ 4,350 ಕೋಟಿ ಬಂಡವಾಳ ಹೊರ ಹೋಗಿತ್ತು. ಉದ್ಯಮದ ನಿರ್ವಹಣಾ ಸಂಪತ್ತು ಮೌಲ್ಯವು ₹ 38.88 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಚಿನ್ನದ ದರ ₹ 247, ಬೆಳ್ಳಿ ₹ 825ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ, ಬೆಳ್ಳಿ ದರ ಏರಿಕೆ ಕಂಡಿದೆ. 10 ಗ್ರಾಂ ಚಿನ್ನದ ದರ ₹ 247ರಷ್ಟು ಹೆಚ್ಚಾಗಿ ₹ 48,403ರಂತೆ ಮಾರಾಟವಾಗಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 825ರಷ್ಟು ಏರಿಕೆ ಕಂಡು ₹ 62,417ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಾಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪ್ರಭಾವ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಎಂಜಿನ್ ರಕ್ಷಾಕವಚ ಇಲ್ಲದೇ ಅಲಯನ್ಸ್ ಏರ್ ವಿಮಾನ ಹಾರಾಟ: ತನಿಖೆಗೆ ಆದೇಶ

ಮುಂಬೈ (ಪಿಟಿಐ): ಮುಂಬೈನಿಂದ ಗುಜರಾತ್‌ನ ಭುಜ್‌ಗೆ ಸಂಚರಿಸಿದ, ಅಲಯನ್ಸ್ ಏರ್‌ನ ವಿಮಾನವೊಂದು ಎಂಜಿನ್‌ನ ರಕ್ಷಾಕವಚ ಇಲ್ಲದೇ ಹಾರಾಟ ನಡೆಸಿದ ಘಟನೆ ಬುಧವಾರ ನಡೆದಿದೆ.

ಈ ಘಟನೆ ಕುರಿತು ನಾಗರಿಕ ವಿಮಾನಯಾನ ಪ್ರಧಾನ ನಿರ್ದೇಶಕರು (ಡಿಜಿಸಿಎ) ತನಿಖೆಗೆ ಆದೇಶಿಸಿದ್ದಾರೆ. 70 ಪ್ರಯಾಣಿಕರಿದ್ದ ಈ ವಿಮಾನ ಭುಜ್ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿದಿದೆ ಎಂದು ಮೂಲಗಳು ತಿಳಿಸಿವೆ.

ಎಂಜಿನ್‌ಗೆ ರಕ್ಷಾಕವಚವನ್ನು ಹೊದಿಸದೇ ವಿಮಾನ ಟೇಕಾಫ್ ಆಗಿರುವ ವಿಷಯ ತಿಳಿದ ನಂತರ, ರನ್‌ವೇಯಲ್ಲಿ ಬಿದ್ದಿದ್ದ ರಕ್ಷಾಕವಚವನ್ನು ಹುಡುಕಿ ತರಲಾಯಿತು ಎಂದು ಮೂಲಗಳು ಹೇಳಿವೆ. 'ಬುಧವಾರ ಬೆಳಿಗ್ಗೆ ಈ ಘಟನೆ ನಡೆದಿದೆ. ಮುಂಬೈ–ಭುಜ್ ವಿಮಾನದ (91–625) ಎಡಭಾಗದ ಎಂಜಿನ್ ಕವಚ ಇಲ್ಲದೇ ಟೇಕಾಫ್ ಆಗಿರುವುದು ಗಮನಕ್ಕೆ ಬಂದಿತು. ತಕ್ಷಣವೇ ಏರ್ ಟ್ರಾಫಿಕ್ ಕಂಟ್ರೋಲರ್ (ಎಟಿಸಿ) ಅವರು ವಿಮಾನನಿಲ್ದಾಣ ಅಧಿಕಾರಿಗಳಿಗೆ ಮಾಹಿತಿ ನೀಡಿದರು' ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

9-2-2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1330 (1330)
ಒಂದು ವಾರದ ಡೆಲಿವರಿ	1325 (1325)
ಸೋಯಾ ಕಚ್ಚಾ	1222 (1235)
ಪಾಮ್ ವಾರದ ಡೆಲಿವರಿ	1230 (1228)
ಸೂರ್ಯಕಾಂತಿ ಎಣ್ಣೆ ಕಚ್ಚಾ	1235 (1240)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,550 (48,300)
ಬೆಳ್ಳಿ ಕೆ.ಜಿ	62,350 (61,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53500

ಕುಂದಾಪುರ	
ಹಳೆಚಾಲಿ	51500-52500
ಹೊಸಚಾಲಿ	43500-44500
ಸಿದ್ದಾಪುರ	
ಬಿಳಿಗೋಟು	21689-35099
ಚಾಲಿ	40311-46699
ಕೋಕ	20389-32012
ಹೊಸಚಾಲಿ	33699-37899
ಕೆಂಪುಗೋಟು	26699-32089
ರಾಶಿ	42599-46699

ತಟ್ಟಿಬೆಟ್ಟೆ	34699-46199
ಶಿರಸಿ	
ಬೆಟ್ಟೆ	34123-44999
ಬಿಳಿಗೋಟು	20219-34393
ಚಾಲಿ	30299-39439
ರಾಶಿ	41769-47699
ರಾಮನಗರ ರೇಷ್ಮೆ	
ಮಿಶ್ರತಳಿ	400-760
ದ್ವಿತಳಿ	310-906

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	16000	16100	248.95 ಸೆಂಟ್ಸ್
ಎಸಿ	7560	7300	7550	
ಆರ್‌ಪಿ	7500	7400	7600	ಲಂಡನ್
ಆರ್‌ಸಿ	4120	3900	4025	2246 ಡಾಲರ್ಸ್


ಪಂದ್ಯದ ನಂತರ ನೆಟ್‌ಗೆ ಮುತ್ತು ನೀಡಿದ ಡೆಲ್ ಪೊಟ್ರೊ –ಎಎಫ್‌ಪಿ ಚಿತ್ರ

ನಿವೃತ್ತಿಯತ್ತ ಡೆಲ್ ಪೊಟ್ರೊ

ಬ್ಯೂನಸ್ ಐರ್ಸ್ (ಎಪಿ): ಅಮೆರಿಕ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದ ಜುವಾನ್ ಮಾರ್ಟಿನ್ ಡೆಲ್ ಪೊಟ್ರೊ ತವರಿನ ಪ್ರೇಕ್ಷಕರ ಎದುರು ಸೋತು ನಿರಾಶೆಗೆ ಒಳಗಾದರು. ಇಲ್ಲಿ ನಡೆಯುತ್ತಿರುವ ಅರ್ಜೆಂಟೀನಾ ಓಪನ್ ಟೆನಿಸ್ ಟೂರ್ನಿಯ ತಮ್ಮದೇ ದೇಶದ ಫೆಡರಿಕೊ ಡೆಲ್ಬೊನಿಸ್ ಎದುರು ಸೋಲುಂಡ ಅವರು ನಿವೃತ್ತಿಯತ್ತ ಹೆಜ್ಜೆ ಹಾಕಿದ್ದಾರೆ.

33 ವರ್ಷದ ಡೆಲ್ ಪೊಟ್ರೊ ಗಾಯದ ಸಮಸ್ಯೆಗಳಿಂದಾಗಿ 2019 ರಿಂದ ಅನೇಕ ಟೂರ್ನಿಗಳಲ್ಲಿ ಕಣಕ್ಕೆ ಇಳಿದಿರಲಿಲ್ಲ. ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ 1–6, 3–6ರಲ್ಲಿ ಸೋತು ಕಣ್ಣೀರು ಹಾಕಿ ಅಂಗಣ ತೊರೆದರು.

ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಮುಂದಿನ ವಾರ ಬ್ರೆಜಿಲ್‌ನಲ್ಲಿ ನಡೆಯಲಿರುವ ರಿಯೊ ಓಪನ್ ಟೂರ್ನಿಯಲ್ಲಿ ಆಡಬೇಕೇ ಬೇಡವೇ ಎಂದು ಶೀಘ್ರದಲ್ಲೇ ನಿರ್ಧರಿಸಲಾಗುವುದು ಎಂದು ತಿಳಿಸಿದರು.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದ ಡೆಲ್ ಪೊಟ್ರೊ ಅದೇ ವರ್ಷ ಡೇವಿಸ್ ಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದರು.

ಬೆಂಗಳೂರು ಓಪನ್ ಎಟಿಪಿ ಟೆನಿಸ್ ಟೂರ್ನಿ: ಡಬಲ್ಸ್‌ನಲ್ಲಿ ಭಾರತದ ಆಟಗಾರರಿಗೆ ಜಯ

ಪ್ರಮುಖರ ಹೊರಗಟ್ಟಿದ ಚುನ್, ಬೋರ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮುಖ ಆಟಗಾರರನ್ನು ಮಣಿಸಿದ ಚುನ್ ಸಿನ್ ಸೆಂಗ್ ಮತ್ತು ಬೋರ್ನ ಗೋಜೊ ಅವರು ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ಬುಧವಾರ ಮಿಂಚಿದರು. ಬೆಂಗಳೂರು ಓಪನ್ ಎಟಿಪಿ ಟೆನಿಸ್ ಟೂರ್ನಿಯಲ್ಲಿ ಅವರು ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಟೂರ್ನಿಯ ಮೂರನೇ ದಿನ ನಡೆದ ಪಂದ್ಯದಲ್ಲಿ ಚೀನಾ ತೈಪೆಯ ಚುನ್ ಶಿನ್ ಸೆಂಗ್ ಅವರು ಫ್ರಾನ್ಸ್‌ನ ಆಟಗಾರ ನಾಲ್ಕನೇ ಶ್ರೇಯಾಂಕದ ಹ್ಯೂಗೊ ಗ್ರೀನಿಯರ್ ಎದುರು 6-1, 6-4ರಲ್ಲಿ ಜಯ ಗಳಿಸಿದರು. ಕ್ರೊವೇಷ್ಯಾದ ಬೋರ್ನ ಗೋಜೊ ಮೂರನೇ ಶ್ರೇಯಾಂಕದ ಆಸ್ಟ್ರೇಲಿಯಾ ಆಟಗಾರ ಅಲೆಕ್ಸಾಂಡರ್ ವುಕಿಚ್ ಎದುರು 7-5, 6-3ರಲ್ಲಿ ಗೆಲುವು ಸಾಧಿಸಿದರು.

ಬೆಲ್ಜಿಯಂನ ಕಿಮ್ಮರ್ ಕೊಪೆಜನ್ ಪ್ರಬಲ ಸ್ಪರ್ಧೆಯಲ್ಲಿ ಐದನೇ ಶ್ರೇಯಾಂಕದ ಟರ್ಕಿ ಆಟಗಾರ ಅಲ್ಟುಗ್ ಸೆಲಿಕ್‌ಬೆಲಿಕ್ ವಿರುದ್ಧ 14-12, 6-3ರಲ್ಲಿ ಗೆದ್ದರು. ಅರ್ಹತಾ ಸುತ್ತಿನಲ್ಲಿ ಆಡಿ ಬಂದಿರುವ ಮತ್ತೊಬ್ಬ ಆಟಗಾರ ಬ್ರೆಜಿಲ್‌ನ ಗ್ಯಾಬ್ರಿಯಲ್ ಡಿಕಾಂಪ್ಸ್ ಇಟಲಿಯ ಗಿಯಾನ್ ಮರ್ಕೊ ಮೊರೊನಿ ಎದುರು 6-2, 5-7, 7-6 (3)ರಲ್ಲಿ ಜಯ ಗಳಿಸಿದರು. ಮೂರು ತಾಸು ಐದು ನಿಮಿಷಗಳ ಕಾದಾಟ ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು.


ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಚ್ ಎದುರಿನ ಪಂದ್ಯದಲ್ಲಿ ಕ್ರೊವೇಷ್ಯಾದ ಬೋರ್ನ ಗೋಜೊ ಚೆಂಡನ್ನು ಬಾರಿಸಿದ ಪರಿ. ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ


ಡಬಲ್ಸ್‌ನಲ್ಲಿ ಕ್ರೊವೇಷ್ಯಾದ ಬೋರ್ನ ಗೋಜೊ–ಬಲ್ಗೇರಿಯದ ಡಿಮಿತರ್ ಕುಜ್ಮನೊವ್ ಎದುರು ಗೆದ್ದ ಭಾರತದ ಜೀವನ್ ನೆಡುಂಚೆಳಿಯನ್ ಮತ್ತು ಪುರವ್ ರಾಜ

ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದ ಫಲಿತಾಂಶಗಳು: ಕ್ರೊವೇಷ್ಯಾದ ಬೋರ್ನ ಗೋಜೊಗೆ ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಚ್ ಎದುರು 7-5, 6-3ರಲ್ಲಿ ಗೆಲುವು; ಚೀನಾ ತೈಪೆಯ ಚುನ್ ಸೆಂಗ್‌ಗೆ ಹ್ಯೂಗೊ ಗ್ರೀನಿಯರ್ ಎದುರು 6-1, 6-4ರಲ್ಲಿ ಜಯ; ಬೆಲ್ಜಿಯಂನ ಕಿಮ್ಮರ್ ಕೊಪೆಜನ್ಸ್‌ಗೆ ಟರ್ಕಿಯ ಅಲ್ಟುಗ್ ಸೆಲಿಕ್ ಬೆಲಿಕ್ ವಿರುದ್ಧ 7-6 (12), 6-3ರಲ್ಲಿ ಜಯ; ಬ್ರೆಜಿಲ್‌ನ ಗ್ಯಾಬ್ರಿಯಲ್ ಡಿಕಾಂಪ್ಸ್‌ಗೆ ಇಟಲಿಯ ಜಿಯಾನ್ ಮಾರ್ಕೊ ಮೊರೊನಿ ಎದುರು 6-2, 5-7, 7-6 (3)ರಲ್ಲಿ ಗೆಲುವು.

ಡಬಲ್ಸ್ ಪ್ರೀ ಕ್ವಾರ್ಟರ್ ಫೈನಲ್ ಫಲಿತಾಂಶಗಳು: ಭಾರತದ ಜೀವನ್ ನೆಡುಂಚೆಳಿಯನ್‌-ಪುರವ್ ರಾಜಾಗೆ ಕ್ರೊವೇಷ್ಯಾದ ಬೋರ್ನ ಗೋಜೊ–ಬಲ್ಗೇರಿಯಾದ ದಿಮಿತರ್ ಕುಜ್ಮನೊವ್ ಎದುರು 6-4, 6-7 (2), 10-8ರಲ್ಲಿ ಜಯ; ಕೆನಡಾದ ಸ್ಟೀವನ್ ಡೀಜ್–ಟುನೀಷಿಯಾದ ಮಲೆಕ್ ಜಜಿರಿಗೆ ಇಟಲಿಯ ರವುಲ್ ಬ್ರೆಂಕಾಷಿಯೊ–ಸ್ವಿಟ್ಜೆರ್ಲೆಂಡ್‌ನ ಜೊಹಾನ್ ನಿಕಲ್ಸ್ ಎದುರು 5-7, 6-4, 10-6ರಲ್ಲಿ ಜಯ; ಭಾರತದ ಸಾಕೇತ್ ಮೈನೇನಿ–ರಾಮ್‌ಕುಮಾರ್ ರಾಮನಾಥನ್‌ಗೆ ಗ್ರೀಸ್‌ನ ಮಾರ್ಕೋಸ್ ಕಲೊವೆಲೊನಿಸ್–ಜಪಾನ್‌ನ ತೊಷಿಹಿಡೆ ಮಸುಯಿ ವಿರುದ್ಧ 6-3, 6-3ರಲ್ಲಿ ಗೆಲುವು; ಫ್ರಾನ್ಸ್‌ನ ಹ್ಯೂಗೊ ಗ್ರೀನಿಯರ್–ಅಲೆಕ್ಸಾಂಡರ್ ಮಲ್ಲರ್‌ಗೆ ಫ್ರಾನ್ಸ್‌ನ ಎನ್ಜೊ ಕೊಕಾಡ್–ಆಸ್ಟ್ರೇಲಿಯಾದ ಆ್ಯಂಡ್ರ್ಯೂ ಹ್ಯಾರಿಸ್ ವಿರುದ್ಧ 6-2, 4-6, 11-9ರಲ್ಲಿ ಜಯ; ಭಾರತದ ಎನ್‌.ಶ್ರೀರಾಮ್ ಬಾಲಾಜಿ–ವಿಷ್ಣುವರ್ಧನ್‌ಗೆ ಫ್ರಾನ್ಸ್‌ನ ಮಥಿಯಾಸ್ ಬಾರ್ಗ್–ಬೆಲ್ಜಿಯಂನ ಕಿಮ್ಮರ್ ಕೊಪೆಜನ್ಸ್ ಎದುರು 6-4, 4-6, 10-3ರಲ್ಲಿ ಜಯ.

ಪ್ರಜ್ಞೇಶ್‌ಗೆ ಜಿರಿ ಎದುರಾಳಿ: ಟೂರ್ನಿಯಲ್ಲಿ ಉಳಿದುಕೊಂಡಿರುವ ಭಾರತದ ಏಕೈಕ ಆಟಗಾರ ಪ್ರಜ್ಞೇಶ್ ಗುಣೇಶ್ವರನ್ ಅವರು ಗುರುವಾರ ಕಣಕ್ಕೆ ಇಳಿಯುವರು. ಜೆಕ್ ಗಣರಾಜ್ಯದ ಆಟಗಾರ ಅಗ್ರ ಶ್ರೇಯಾಂಕದ ಜಿರಿ ವೆಸೆಲಿ ಅವರು ಪ್ರಜ್ಞೇಶ್‌ಗೆ ಎದುರಾಳಿ.

ಅಹಮದಾಬಾದ್ ತಂಡ ಇನ್ನು ಗುಜರಾತ್ ಟೈಟನ್ಸ್

ನವದೆಹಲಿ (ಪಿಟಿಐ): ಈ ವರ್ಷ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಅಹಮದಾಬಾದ್ ಫ್ರ್ಯಾಂಚೈಸ್ ತಂಡಕ್ಕೆ ಗುಜರಾತ್ ಟೈಟನ್ಸ್ ಎಂದು ನಾಮಕರಣ ಮಾಡಲಾಗಿದೆ.

ಸಿವಿಸಿ ಕ್ಯಾಪಿಟಲ್ ಕಂಪನಿಯು ಈ ತಂಡದ ಮಾಲೀಕತ್ವ ಹೊಂದಿದೆ. ಇತ್ತೀಚೆಗೆ ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ.

‘ಭಾರತದ ಕ್ರಿಕೆಟ್‌ಗೆ ಗುಜರಾತ್ ರಾಜ್ಯವು ಹಲವಾರು ಆಟಗಾರರನ್ನು ಕಾಣಿಕೆಯಾಗಿ ನೀಡಿದೆ. ಇಲ್ಲಿಯ ಕ್ರಿಕೆಟ್ ಪರಂಪರೆಯನ್ನು ಗೌರವಿಸುವುದು ನಮ್ಮ ಕರ್ತವ್ಯ ಮತ್ತು ಹೆಮ್ಮೆಯ ವಿಷಯ. ಆದ್ದರಿಂದ ತಂಡಕ್ಕೆ ರಾಜ್ಯದ ಹೆಸರು ಕೊಡುತ್ತಿದ್ದೇವೆ’ ಎಂದು ಬುಧವಾರ ಫ್ರ್ಯಾಂಚೈಸಿಯು ನೀಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

‘ಐಪಿಎಲ್‌ನಲ್ಲಿ ನಮ್ಮ ತಂಡವು ಉನ್ನತ ಸಾಧನೆಗಳನ್ನು ಮಾಡಬೇಕು ಎಂಬುದು ನಮ್ಮ ಹಾರೈಕೆ. ಗುಜರಾತ್ ರಾಜ್ಯಕ್ಕೆ ಕೀರ್ತಿ ತರುವಂತಹ ಕಾರ್ಯ ನಡೆಯಬೇಕು’ ಎಂದು ಫ್ರ್ಯಾಂಚೈಸಿಯ ಪ್ರತಿನಿಧಿ ಸಿದ್ಧಾರ್ಥ್ ಪಟೇಲ್ ಹೇಳಿದ್ದಾರೆ. ಗುಜರಾತ್ ಟೈಟನ್ಸ್ ತಂಡವು ಪಾಂಡ್ಯ ಜೊತೆಗೆ ಯುವ ಬ್ಯಾಟರ್ ಶುಭಮನ್ ಗಿಲ್ ಮತ್ತು ಅಫ್ಗಾನಿಸ್ತಾನದ ಸ್ಪಿನ್ನರ್ ರಶೀದ್ ಖಾನ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ. ಭಾರತ ತಂಡದ ಮಾಜಿ ವೇಗಿ ಆಶಿಶ್ ನೆಹ್ರಾ ಅವರು ಮುಖ್ಯ ಕೋಚ್ ಮತ್ತು ವಿಕ್ರಂ ಸೋಳಂಕಿ ನಿರ್ದೇಶಕರಾಗಿದ್ದಾರೆ. ದಕ್ಷಿಣ ಆಫ್ರಿಕಾದ ಅನುಭವಿ ಕೋಚ್ ಗ್ಯಾರಿ ಕರ್ಸ್ಟನ್ ತಂಡದ ಬ್ಯಾಟಿಂಗ್ ಕೋಚ್ ಮತ್ತು ಮೆಂಟರ್ ಆಗಿದ್ದಾರೆ.

‘ಮೇಗಾ ಹರಾಜು ಪ್ರಕ್ರಿಯೆ ಸಮೀಪಿಸುತ್ತಿದೆ. ಪ್ರತಿಭಾವಂತ ಮತ್ತು ತಂಡದಲ್ಲಿ ಉತ್ತಮ ಹೊಂದಾಣಿಕೆಯೊಂದಿಗೆ ಆಡುವ ಆಟಗಾರರನ್ನು ಆಯ್ಕೆ ಮಾಡುವ ವಿಶ್ವಾಸವಿದೆ’ ಎಂದು ಪಟೇಲ್ ಹೇಳಿದ್ದಾರೆ.


ಹಾರ್ದಿಕ್ ಪಾಂಡ್ಯ

ಕುಸ್ತಿ, ಜುಡೊ ಆಯ್ಕೆ ಟ್ರಯಲ್ಸ್

ನವದೆಹಲಿ (ಪಿಟಿಐ): ಭಾರತ ಕ್ರೀಡಾ ಪ್ರಾಧಿಕಾರವು ಕುಸ್ತಿ ಮತ್ತು ಜುಡೊ ಕ್ರೀಡಾಪಟುಗಳಿಗಾಗಿ ಆಯ್ಕೆ ಟ್ರಯಲ್ಸ್ ನಡೆಸಲಿದೆ.

ಸೋನೆಪತ್‌ನಲ್ಲಿ ಇದೇ 14ರಿಂದ 16ರವರೆಗೆ ಪುರುಷರ ಫ್ರೀಸ್ಟೈಲ್ ಮತ್ತು ಗ್ರಿಕೊ ರೋಮನ್ ಕುಸ್ತಿ ಟ್ರಯಲ್ಸ್ ನಡೆಯಲಿದೆ. ಲಖನೌನಲ್ಲಿ ಇದೇ 16 ಮತ್ತು 17ರಂದು ಮಹಿಳೆಯರ ಕುಸ್ತಿ ಟ್ರಯಲ್ಸ್ ನಡೆಯಲಿದೆ.

ಮುಂಬೈನಲ್ಲಿ ಮಹಿಳೆಯರ ಟ್ರಯಲ್ಸ್ 16 ರಿಂದ 18ರವರೆಗೆ ನಡೆಯಲಿದೆ.

ವಿವಿಧ ವಯೋಮಿತಿಯಲ್ಲಿ ಜುಡೊ ಆಯ್ಕೆ ಟ್ರಯಲ್ಸ್ ಕೂಡ ನಡೆಯಲಿದೆ. ಲಖನೌ, ಮುಂಬೈ ಮತ್ತು ಸೋನೆಪತ್‌ಗಳಲ್ಲಿ ಆಯೋಜಿಸಲಾಗಿದೆ.

ಟಿ20 ಸರಣಿ ರದ್ದು

ವೆಲ್ಲಿಂಗ್ಟನ್ (ಎಪಿ): ಮುಂದಿನ ತಿಂಗಳು ನಡೆಯಲಿದ್ದ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ನಡುವಣ ಮೂರು ಪಂದ್ಯಗಳ ಟಿ20 ಕ್ರಿಕೆಟ್ ಸರಣಿಯನ್ನು ರದ್ದುಪಡಿಸಲಾಗಿದೆ. ಕೋವಿಡ್–19 ಹಿನ್ನೆಲೆಯಲ್ಲಿ ನ್ಯೂಜಿಲೆಂಡ್‌ನಲ್ಲಿ ಕಟ್ಟುನಿಟ್ಟಾದ ಶಿಷ್ಟಾಚಾರಗಳು ಇವೆ. ಒಮೈಕ್ರಾನ್ ಹಾವಳಿ ಹೆಚ್ಚುತ್ತಿರುವುದರಿಂದ ಅಂತರರಾಷ್ಟ್ರೀಯ ವಿಮಾನಯಾನ ನಿರ್ಬಂಧಗಳು ಇವೆ. ಆದ್ದರಿಂದ ಸರಣಿಯನ್ನು ರದ್ದುಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಹಿಳಾ ಟಿ20: ಪೂಜಾ, ದೀಪ್ತಿಗೆ ತಲಾ ಎರಡು ವಿಕೆಟ್

ಕಿವೀಸ್‌ಗೆ ಮಣಿದ ಹರ್ಮನ್ ಪಡೆ

ಕ್ವೀನ್ಸ್‌ಟನ್ (ಪಿಟಿಐ): ಜೆಸ್ ಕೆರ್ ಮತ್ತು ಅಮೆಲಿಯಾ ಕೆರ್ ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಆತಿಥೇಯ ನ್ಯೂಜಿಲೆಂಡ್ ಮಹಿಳಾ ತಂಡವು ಭಾರತದ ಎದುರಿನ ಏಕೈಕ ಟಿ20 ಕ್ರಿಕೆಟ್ ಪಂದ್ಯವನ್ನು ಗೆದ್ದುಕೊಂಡಿತು.

ಬುಧವಾರ ನಡೆದ ಪಂದ್ಯದಲ್ಲಿ ಕಿವೀಸ್ ಬಳಗವು 18 ರನ್‌ಗಳಿಂದ ಭಾರತ ತಂಡವನ್ನು ಪರಾಭವಗೊಳಿಸಿತು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಸೂಜಿ ಬೇಟ್ಸ್ (36;34ಎ) ಮತ್ತು ನಾಯಕಿ ಸೂಫಿ ಡಿವೈನ್ (31; 23ಎ) ಅವರು ಆತಿಥೇಯ ತಂಡಕ್ಕೆ ಉತ್ತಮ ಆರಂಭ ನೀಡಿದರು.

ಅದರ ಅಡಿಪಾಯದ ಮೇಲೆ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 155 ರನ್ ಗಳಿಸಿತು. ಭಾರತದ ಪೂಜಾ ವಸ್ತ್ರಕರ್ ಮತ್ತು ದೀಪ್ತಿ ಶರ್ಮಾ ತಲಾ ಎರಡು ವಿಕೆಟ್ ಗಳಿಸಿದರು. ಕರ್ನಾಟಕದ ರಾಜೇಶ್ವರಿ ಗಾಯಕವಾಡ್ ಒಂದು ವಿಕೆಟ್ ಪಡೆದರು. ಗುರಿ ಬೆನ್ನಟ್ಟಿದ ಭಾರತ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 137 ರನ್ ಗಳಿಸಿತು. ಆರಂಭಿಕ ಆಟಗಾರ್ತಿ ಯಸ್ತಿಕಾ ಭಾಟಿಯಾ (26; 26ಎ) ಮತ್ತು ಶೆಫಾಲಿ ವರ್ಮಾ ಉತ್ತಮ ಆರಂಭ ನೀಡಿದರು. ಆದರೆ, ಅಮೆಲಿಯಾ ಮತ್ತು ಜೆಸ್ ಅವರ ದಾಳಿಯ ಮುಂದೆ ಪ್ರವಾಸಿ ತಂಡದ ಬ್ಯಾಟಿಂಗ್ ಪಡೆ ಕುಸಿಯಿತು. ನಾಯಕಿ ಹರ್ಮನ್‌ಪ್ರೀತ್ ಲಯಕ್ಕೆ ಮರಳುವಲ್ಲಿ ವಿಫಲರಾದರು. ಆದರೆ ಮಧ್ಯಮ ಕ್ರಮಾಂಕದಲ್ಲಿ ಸಬ್ಬಿನೇನಿ ಮೇಘನಾ (37; 30) ಅವರ ಹೋರಾಟ ಗಮನ ಸೆಳೆಯಿತು. ಅವರಿಗೆ ಇನ್ನೊಂದು ಕಡೆಯಿಂದ ತಕ್ಕ ಬೆಂಬಲ ಸಿಗಲಿಲ್ಲ. ಅದರಿಂದಾಗಿ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 5ಕ್ಕೆ155 (ಬೇಟ್ಸ್ 36 ಡಿವೈನ್ 31, ಅಮೆಲಿಯಾ ಮ್ಯಾಡಿ 26 ತಹುಹು 27; ಪೂಜಾ ವಸ್ತ್ರಕರ್ 16ಕ್ಕೆ2, ರಾಜೇಶ್ವರಿ ಗಾಯಕವಾಡ 39ಕ್ಕೆ1, ದೀಪ್ತಿ ಶರ್ಮಾ 26ಕ್ಕೆ2); **ಭಾರತ:** 20 ಓವರ್‌ಗಳಲ್ಲಿ 8ಕ್ಕೆ 137 (ಯಸ್ತಿಕಾ 26, ಶೆಫಾಲಿ 13, ಮೇಘನಾ 37; ಜೆಸ್ ಕೆರ್ 20ಕ್ಕೆ2, ಅಮೆಲಿಯಾ ಕೆರ್ 25ಕ್ಕೆ2, ಸೋಫಿ ಡಿವೈನ್ 21ಕ್ಕೆ1, ಹೈಲಿ ಜೆನ್ಸನ್ 25ಕ್ಕೆ2). **ಫಲಿತಾಂಶ:** ನ್ಯೂಜಿಲೆಂಡ್ ತಂಡಕ್ಕೆ 18 ರನ್‌ಗಳ ಜಯ.


ದೀಪ್ತಿ ಶರ್ಮಾ

ರಣಜಿ: ಹಿಂದೆ ಸರಿದ ಸಹಾ

ನವದೆಹಲಿ(ಪಿಟಿಐ): ಅನುಭವಿ ವಿಕೆಟ್‌ಕೀಪರ್ ವೃದ್ಧಿಮಾನ್ ಸಹಾ ಈ ಬಾರಿ ರಣಜಿ ಟೂರ್ನಿಯಲ್ಲಿ ಆಡದಿರಲು ನಿರ್ಧರಿಸಿದ್ದಾರೆ.

ಬಂಗಾಳ ರಾಜ್ಯ ಕ್ರಿಕೆಟ್ ತಂಡದ ಸಹಾ, ಮುಂಬರಲಿರುವ ಶ್ರೀಲಂಕಾ ಎದುರಿನ ಎರಡು ಟೆಸ್ಟ್‌ಗಳ ಸರಣಿಗೆ ಆಯ್ಕೆಯಾಗುವುದಿಲ್ಲ ಎಂಬ ಮಾತುಗಳು ಕೇಳಿಬಂದಿವೆ. ತಂಡದ ಮ್ಯಾನೇಜ್‌ಮೆಂಟ್ ಈ ವಿಷಯವನ್ನು ಸಹಾಗೆ ತಿಳಿಸಿದೆಯೆನ್ನಲಾಗಿದೆ. ಆದ್ದರಿಂದ 37 ವರ್ಷದ ಸಹಾ ರಣಜಿ ಟೂರ್ನಿಯಲ್ಲಿ ಆಡುತ್ತಿಲ್ಲವೆನ್ನಲಾಗಿದೆ.

ಪ್ರೊ ಕಬಡ್ಡಿ: ಪ್ರದೀಪ್, ಗಿಲ್ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರದೀಪ್ ನರ್ವಾಲ್ ಮತ್ತು ಸುರೇಂದರ್ ಗಿಲ್ ಅವರ ಅಮೋಘ ಆಟದ ಬಲದಿಂದ ಯುಪಿ ಯೋಧಾ ತಂಡವು ಬುಧವಾರ ಇಲ್ಲಿ ನಡೆದ ಪ್ರೊ ಕಬಡ್ಡಿ ಪಂದ್ಯದಲ್ಲಿ ಜಯಸಾಧಿಸಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಯೋಧಾ 41–37ರಿಂದ ತಮಿಳ್ ತಲೈವಾಸ್ ವಿರುದ್ಧ ಗೆದ್ದಿತು.

ಯೋಧಾ ತಂಡವು ಮೊದಲಾರ್ಧದಲ್ಲಿ ಹೆಚ್ಚು ಆಕ್ರಮಣಕಾರಿಯಾಗಿರಲಿಲ್ಲ. ಆದರೆ ತಲೈವಾಸ್ ಚುರುಕಿನ ಆಟವಾಡಿತ್ತು. ಅದರಿಂದಾಗಿ ವಿರಾಮದ ವೇಳೆಗೆ 22–20ರಿಂದ ಮುನ್ನಡೆ ಸಾಧಿಸಿತ್ತು. ವಿರಾಮದ ನಂತರ ಭರ್ಜರಿ ದಾಳಿ ಮಾಡಿದ ಯೋಧಾ ತಂಡವು 21 ಅಂಕಗಳನ್ನು ಸೂರೆ ಮೂಡಿತು. ಈ ಅವಧಿಯಲ್ಲಿ ತಲೈವಾಸ್ ಕೇವಲ 17 ಪಾಯಿಂಟ್ಸ್ ಗಳಿಸಿತು. ಅದರಿಂದಾಗಿ ಹಿನ್ನಡೆ ಅನುಭವಿಸಿತು.

ಯೋಧಾ ತಂಡದ ಪ್ರದೀಪ್ 10 ಮತ್ತು ಗಿಲ್ 13 ಅಂಕಗಳನ್ನು ಗಳಿಸಿದರು. ತಲೈವಾಸ್ ತಂಡದ ಮಂಜೀತ್ 12 ಮತ್ತು ರಕ್ಷಣಾ ವಿಭಾಗದಲ್ಲಿ ಹಿಮಾಂಶು 8 ಅಂಕಗಳನ್ನು ಗಳಿಸಿದರು.

ಗುಜರಾತ್‌ಗೆ ರೋಚಕ ಜಯ: ದಿನದ ಇನ್ನೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವು 34–32ರಿಂದ ತೆಲುಗು ಟೈಟನ್ಸ್ ವಿರುದ್ಧ ಗೆದ್ದಿತು.

ರೇಡರ್ ರಾಕೇಶ್ 8 ಮತ್ತು ಮಹೇಂದ್ರ ರಜಪೂತ್ (5) ಅವರ ಅಮೋಘ ಆಟದ ಬಲದಿಂದ ಗುಜರಾತ್ ಗೆದ್ದಿತು. ಟೈಟನ್ಸ್ ತಂಡದಲ್ಲಿ ರಜನೀಶ್ 10 ಅಂಕಗಳನ್ನು ಗಳಿಸಿದರು.

ಇಂದಿನ ಪಂದ್ಯ (ರಾತ್ರಿ)

ಬೆಂಗಾಲ್ ವಾರಿಯರ್ಸ್ – ದಬಂಗ್ ಡೆಲ್ಲಿ 7.30

ಪುಣೇರಿ ಪಲ್ಟನ್ – ಪಟ್ನಾ ಪೈರೇಟ್ಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್


ಗುಜರಾತ್ ಜೈಂಟ್ಸ್ ರೇಡರ್ ರಾಕೇಶ್ ಪಾಯಿಂಟ್ಸ್ ಗಳಿಸಲು ಪ್ರಯತ್ನಿಸಿದರು

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	17	12	4	1	65
ಹರಿಯಾಣ ಸ್ಟೀಲರ್ಸ್	18	9	6	3	58
ದಬಂಗ್ ಡೆಲ್ಲಿ	17	9	5	3	57
ಬೆಂಗಳೂರು ಬುಲ್ಸ್	19	9	8	2	57
ಯು ಪಿ ಯೋಧಾ	18	7	8	3	52
ಜೈಪುರ ಪಿಂಕ್ ಪ್ಯಾಂಥರ್ಸ್	17	8	7	2	51
ಗುಜರಾತ್ ಜೈಂಟ್ಸ್	18	7	8	3	49
ಯು ಮುಂಬಾ	17	6	6	5	48
ತಮಿಳ್ ತಲೈವಾಸ್	18	5	7	6	46
ಬೆಂಗಾಲ್ ವಾರಿಯರ್ಸ್	18	7	9	2	44
ಪುಣೇರಿ ಪಲ್ಟನ್	15	8	7	-	42
ತೆಲುಗು ಟೈಟನ್ಸ್	18	1	13	4	27

(ಬುಧವಾರದ ಪಂದ್ಯಗಳ ಅಂತ್ಯಕ್ಕೆ)

ಇಂಡಿಯನ್ ಸೂಪರ್ ಲೀಗ್: ಚೆನ್ನೈಯಿನ್‌ಗೆ ನಿರಾಶೆ

ಒರ್ಟಿಜ್ ಹ್ಯಾಟ್ರಿಕ್; ಗೋವಾ ಜಯಭೇರಿ


ಹ್ಯಾಟ್ರಿಕ್ ಗೋಲು ಗಳಿಸಿದ ಜಾರ್ಜ್ ಒರ್ಟಿಜ್ ಸಂಭ್ರಮ

ವಾಸ್ಕೊ: ಅತ್ಯಮೋಘ ಆಟದ ಮೂಲಕ ಚೆನ್ನೈಯಿನ್ ಎಫ್‌ಸಿಯನ್ನು ಮಣಿಸಿದ ಎಫ್‌ಸಿ ಗೋವಾ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಗೆಲುವಿನ ಲಯಕ್ಕೆ ಮರಳಿತು.

ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಎಫ್‌ಸಿ ಗೊವಾ 5–0ಯಿಂದ ಜಯ ಗಳಿಸಿತು. ಜಾರ್ಜ್ ಒರ್ಟಿಜ್ ಗಳಿಸಿದ ಹ್ಯಾಟ್ರಿಕ್ ಮತ್ತು ಎದುರಾಳಿ ತಂಡದ ನಾರಾಯಣ್ ದಾಸ್ ನೀಡಿದ ಉಡುಗೊರೆ ಗೋಲು ಗೋವಾಗೆ ನೆರವಾಯಿತು. ಈ ಜಯದೊಂದಿಗೆ ತಂಡದ ಪ್ಲೇ ಆಫ್ ಕನಸು ಜೀವಂತವಾಗಿ ಉಳಿಯಿತು.

ಆರನೇ ನಿಮಿಷದಲ್ಲಿ ಮಕಾನ್ ಛೋಟೆ ಗಳಿಸಿದ ಗೋಲಿನೊಂದಿಗೆ ಗೋವಾ ಮುನ್ನಡೆ ಗಳಿಸಿತು. 20, 41 ಮತ್ತು 53ನೇ ನಿಮಿಷಗಳಲ್ಲಿ ಒರ್ಟಿಜ್ ಚೆಂಡನ್ನು ಗುರಿ ಮುಟ್ಟಿಸಿದರು. ಈ ನಡುವೆ ನಾರಾಯಣ್ ದಾಸ್ 45ನೇ ನಿಮಿಷದಲ್ಲಿ ತಮ್ಮದೇ ತಂಡದ ಗೋಲುಪೆಟ್ಟಿಗೆಯೊಳಗೆ ಚೆಂಡನ್ನು ಸೇರಿಸಿ ಕೈಸುಟ್ಟುಕೊಂಡರು. ಇದು ಚೆನ್ನೈಯಿನ್ ತಂಡದ ಸಂಕಷ್ಟವನ್ನು ಹೆಚ್ಚಿಸಿತು.

ಹಿಂದಿನ ಐದು ಪಂದ್ಯಗಳಲ್ಲಿ ಜಯ ಕಾಣದೇ ಇದ್ದ ಗೋವಾಗೆ ಈ ಜಯ ಚೇತನ ತುಂಬಿದ್ದು 16 ಪಂದ್ಯಗಳಲ್ಲಿ 18 ಪಾಯಿಂಟ್‌ಗಳೊಂದಿಗೆ ಒಂಬತ್ತನೇ ಸ್ಥಾನಕ್ಕೇರಿತು.

ಬ್ಲಾಸ್ಟರ್ಸ್–ಜೆಮ್ಷೆಡ್‌ಪುರ್ ಹಣಾಹಣಿ: ಅಗ್ರ ನಾಲ್ಕರಲ್ಲಿ ಗಳಿಸಿರು ಸ್ಥಾನ ಭದ್ರಪಡಿಸುವ ಭರವಸೆಯಲ್ಲಿರುವ ಕೇರಳ ಬ್ಲಾಸ್ಟರ್ಸ್ ಮತ್ತು ನಾಕೌಟ್ ಹಂತದ ಕನಸು ಕಾಣುತ್ತಿರುವ ಜೆಮ್ಷೆಡ್‌ಪುರ್ ಎಫ್‌ಸಿ ತಂಡಗಳು ಬ್ಯಾಂಬೊಲಿಮ್‌ನಲ್ಲಿ ಗುರುವಾರ ಮುಖಾಮುಖಿಯಾಗಲಿವೆ.

ಸತತ ಮೂರು ಪಂದ್ಯಗಳಲ್ಲಿ ಜಯ ಗಳಿಸಿದ್ದ ಜೆಮ್ಷೆಡ್‌ಪುರ್ ಹಿಂದಿನ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ವಿರುದ್ಧ ಸೋತು ನಿರಾಶೆಗೆ ಒಳಗಾಗಿದೆ. 13 ಪಂದ್ಯಗಳಲ್ಲಿ 22 ಪಾಯಿಂಟ್ ಕಲೆ ಹಾಕಿರುವ ತಂಡ ಐದನೇ ಸ್ಥಾನದಲ್ಲಿದ್ದರೆ 13 ಪಂದ್ಯಗಳಲ್ಲಿ 23 ಪಾಯಿಂಟ್ ಗಳಿಸಿರುವ ಕೇರಳ ಎರಡನೇ ಸ್ಥಾನದಲ್ಲಿದೆ.

ಹಿಂದಿನ ಬಾರಿ ಐಎಸ್‌ಎಲ್‌ನಲ್ಲಿ ಇವೆರಡು ತಂಡಗಳು ಮುಖಾಮುಖಿಯಾಗಿದ್ದಾಗ ಪಂದ್ಯ 1–1ರಲ್ಲಿ ಡ್ರಾ ಆಗಿತ್ತು.